ಸಂಪುಟ: 21, ಸಂಚಿಕೆ: 210, ಪುಟಗಳು: 8, ಗುರುವಾರ, 9 ಮೇ 2024 **RNI NO. KARKAN/2002/08054**
epaper: www.sanjemugilu.com



ವೇಣು ಸಾರಥ್ಯದಲ್ಲಿ...

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ

### ಸುಭಾಷಿತ

ಜಗತ್ತಿನಲ್ಲಿ ಹೇಳುವವರಿಗಿಂತ, ಹೇಳಿದಂತೆ ನಡೆಯುವವರಯೋಗ್ಯತೆ ಹೆಚ್ಚಿನದು.

• ಗಳಗನಾಥರು

### ಪಂಚಾಂಗ

(ಬುಧವಾರ 8, ಮೇ-2024)

- ಶ್ರೀ ಕ್ರೋಧಿನಾಮ ಸಂವತ್ಸರ,
- ಉತ್ತರಾಯಣ, ವಸಂತಋತು,
- ವೈಶಾಖ ಮಾಸ, ಶುಕ್ಲಪಕ್ಷ,
- ಪ್ರಥಮಿ / ದ್ವಿತೀಯ,
- ಕೃತಿಕಾ ನಕ್ಷತ್ರ / ರೋಹಿಣಿ ನಕ್ಷತ್ರ.
- ರಾಹುಕಾಲ: 01:55 ರಿಂದ 03:30
- ಗುಳಿಕಕಾಲ: 09:10 ರಿಂದ 10:45
- ಯಮಗಂಡಕಾಲ: 06:01 ರಿಂದ 07:35

## ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಪ್ರಕಟ; ಶೇ. 73.40 ವಿದ್ಯಾರ್ಥಿಗಳು ಪಾಸ್

# ಉಡುಪಿ ಫಸ್ಟ್ ಯಾದಗಿರಿ ಲಾಸ್ಟ್

**ಬೆಂಗಳೂರು:** 2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಫಲಿತಾಂಶವನ್ನು ಇಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಕಟಿಸಿದೆ.ಮಂಡಳಿ ಅಧ್ಯಕ್ಷೆ ಎನ್. ಮಂಜು ಶ್ರೀ, ಪರೀಕ್ಷಾ ವಿಭಾಗದ ನಿರ್ದೇಶಕ ಗೋಪಾಲ ಕೃಷ್ಣ ಸುದ್ದಿಗೋಷ್ಠಿ ನಡೆಸಿ ಫಲಿತಾಂಶ ಪ್ರಕಟಿಸಿದರು. ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ವೆಬ್‌ಸೈಟ್‌ನಲ್ಲಿ https://karresults.nic.in ಮೇ 9ರ ಬೆಳಗ್ಗೆ 10.30ರ ನಂತರ ವೀಕ್ಷಿಸಬಹುದಾಗಿದೆ. ಲೋಕಸಭಾ ಚುನಾವಣೆ



ಹಿನ್ನೆಲೆಯಲ್ಲಿ ಈ ಬಾರಿ ಫಲಿತಾಂಶವನ್ನುತಡವಾಗಿ ಬಿಡುಗಡೆ ಮಾಡಲಾಗಿತ್ತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ರಾಜ್ಯಕ್ಕೆ ಉಡುಪಿ ಮೊದಲ ಸ್ಥಾನ, ದಕ್ಷಿಣ ಕನ್ನಡ ಎರಡನೇ ಸ್ಥಾನ ಹಾಗೂ ಶಿವಮೊಗ್ಗ ಮೂರನೇ ಸ್ಥಾನ ಪಡೆದರೆ, ಯಾದಗಿರಿ ಕೊನೆಯ ಸ್ಥಾನವನ್ನು ಪಡೆದಿದೆ. ಪಾಸಾಗಲಿ, ಫೇಲಾಗಲಿ 3 ಬಾರಿ ಪರೀಕ್ಷೆ ಬರೆಯುವ ಅವಕಾಶ ಕಲ್ಪಿಸಲಾಗಿದೆ. ಪಾಸಾದರು ಸಹ ಅಂಕ ಹೆಚ್ಚಿಸಿಕೊಳ್ಳಲು ಮತ್ತೆ ಪರೀಕ್ಷೆ-2, ಪರೀಕ್ಷೆ-3 ಬರೆಯಬಹುದು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಫಲಿತಾಂಶ ಕುಸಿತ ಕಂಡಿದೆ. 2022-23ರಲ್ಲಿ 83.89% ಇದ್ದರೆ, ಈ ಬಾರಿ 73.40% ಮಂದಿ ಪಾಸ್, ಶೇಕಡಾ 10.49% ರಷ್ಟು ಫಲಿತಾಂಶ ಕುಸಿತವಾಗಿದೆ

2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಮಾ.25ರಿಂದ ಏ.6ರ ವರೆಗೆ ನಡೆದಿತ್ತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಒಟ್ಟು 2750 ಪರೀಕ್ಷಾ ಕೇಂದ್ರಗಳಲ್ಲಿ 8,59,967 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 6, 31,204 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ. 73.40 ರಷ್ಟು ಫಲಿತಾಂಶ ಬಂದಿದೆ.

## ಸಂಕ್ಷಿಪ್ತ ಸುದ್ದಿ

### ಜಮ್ಮು-ಕಾಶ್ಮೀರದಲ್ಲಿ ಎನ್‌ಕೌಂಟರ್ ಮೂವರು ಭಯೋತ್ಪಾದಕರ ಹತ್ಯೆ



**ಶ್ರೀನಗರ:** ಕಾಶ್ಮೀರದ ಕುಲ್ಗಾಮ್‌ಜಿಲ್ಲೆಯಲ್ಲಿ ಬುಧವಾರರಾತ್ರಿ, ಭದ್ರತಾ ಪಡೆಗಳೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಮೋಸ್ಟ್ ವಾಂಟೆಡ್ ಭಯೋತ್ಪಾದಕ ಮತ್ತುಎಲ್‌ಇಟಿಕಮಾಂಡರ್ ಸೇರಿ ಮೂವರ ಹತ್ಯೆಯಾಗಿದೆ. ದಕ್ಷಿಣ ಕಾಶ್ಮೀರದ ಕುಲ್ಗಾಮ್‌ನರೆಡ್ವಾನಿ ಪಯೀನ್ ಪ್ರದೇಶದಲ್ಲಿ ಸೋಮವಾರತಡರಾತ್ರಿ, ಭದ್ರತಾ ಪಡೆಗಳು ಶೋಧಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದವು. ನಂತರ ನಡೆದಗುಂಡಿನಚಕಮಕಿಯಲ್ಲಿ ಮೂವರು ಭಯೋತ್ಪಾದಕರು ಹತರಾಗಿದ್ದಾರೆ.

ಪುಟ 2

### ಅನಾರೋಗ್ಯ ಕಾರಣ ನೀಡಿ ಸಾಮೂಹಿಕ ರಜೆ 25 ಸಿಬ್ಬಂದಿ ವಜಾಗೊಳಿಸಿದ ಏರ್‌ಇಂಡಿಯಾ




**ನವದೆಹಲಿ:** ಅನಾರೋಗ್ಯದಕಾರಣ ನೀಡಿ ಸಾಮೂಹಿಕ ರಜೆ ಹಾಕಿದ್ದಕನಿಷ್ಠ 25 ಸಿಬ್ಬಂದಿಯನ್ನು ಏರ್‌ಇಂಡಿಯಾಎಕ್ಸ್‌ಪ್ರೆಸ್ ವಜಾಗೊಳಿಸಿದೆ. ಏರ್‌ಲೈನ್‌ನ ಸುಮಾರು 300 ಉದ್ಯೋಗಿಗಳು ಅನಾರೋಗ್ಯದಕಾರಣ ನೀಡಿಕರ್ತವ್ಯಕ್ಕೆಗೈರಾಗಿದ್ದರು.ಫೋನ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡಿದ್ದರು.ಇದುದೊಡ್ಡ ಪ್ರಮಾಣದ ವಿಮಾನಯಾನ ಅಡೆತಡೆಗಳಿಗೆ ಕಾರಣವಾಯಿತು. ಸಿಬ್ಬಂದಿ ಸಾಮೂಹಿಕ ರಜೆಯಿಂದ 76 ವಿಮಾನಗಳ ಹಾರಾಟ ರದ್ದುಗೊಳಿಸಲಾಗಿತ್ತು. ಇದರಿಂದ ಸಾಕಷ್ಟು ಸಮಸ್ಯೆಯಾಗಿತ್ತು. ವಜಾಗೊಳ್ಳುವ ಸಿಬ್ಬಂದಿ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

ಪುಟ 2

## ಪೆನ್ ಡ್ರೈವ್ ಬಿಡುಗಡೆ ಕೇಸ್: ನಿರೀಕ್ಷಣಾ ಜಾಮೀನು ಅರ್ಜಿ ವಜಾ

# ಕಾರ್ತಿಕ್ ಇತರರಿಗೆ ಬಂಧನ ಭೀತಿ

**ಹಾಸನ:** ರಾಜ್ಯ ರಾಜಕೀಯದಲ್ಲಿ ದೊಡ್ಡ ಬಿರುಗಾಳಿ ಎಬ್ಬಿಸಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣರದ್ದು ಎಂದು ಹೇಳಲಾಗುತ್ತಿರುವ ಅಶ್ಲೀಲ ವಿಡಿಯೋ ವೈರಲ್ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಅರ್ಜಿ ವಜಾ ಬೆನ್ನಲ್ಲೇ ಪ್ರಜ್ವಲ್ ಮಾಜಿ ಕಾರು ಚಾಲಕ ಕಾರ್ತಿಕ್, ಪುಟ್ಟಿ ಆಲಿಯಾಸ್ ಪುಟ್ಟರಾಜ್, ನವೀನ್ ಗೌಡ ಹಾಗೂ ಚೇತನ್ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ. ಹೀಗಾಗಿ ಇದೀಗ ಎಲ್ಲರಿಗೂ ಬಂಧನದ ಭೀತಿ ಶುರುವಾಗಿದೆ. ನಿನ್ನೆ ಹಾಸನದ ಮೂರನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ಅರ್ಜಿ ವಜಾ ಮಾಡಲಾಗಿದೆ.

ಎಡಿಟ್ ಮಾಡಿ ಸಂಸದ ಪ್ರಜ್ವಲ್ ಅವರ ಅಶ್ಲೀಲ ವಿಡಿಯೋ, ಫೋಟೋ ಸೃಷ್ಟಿ ಮಾಡಿ ಪೆನ್ ಡ್ರೈ ವ್ ಮೂಲಕ ಹಂಚಿಕೆ ಆರೋಪ ಮಾಡಲಾಗಿತ್ತು. ಅತ್ತ ಆರೋಪ ಕೇಳಿಬರುತ್ತಿದ್ದಂತೆ ಇತ್ತ ಏಪ್ರಿಲ್ 23 ರಂದು ಹಾಸನ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಕಾರ್ತಿಕ್, ಪುಟ್ಟರಾಜ್, ನವೀನ್ ಗೌಡ, ಶರತ್ ಆಲಿಯಾಸ್ ಕ್ವಾಲಿಟಿ ಬಾರ್ ಶರತ್ ವಿರುದ್ಧ ಜೆಡಿಎಸ್ ದೂರು ನೀಡಿತ್ತು. ನವೀನ್ ಗೌಡ ಮತ್ತು ಇತರರು ಎಂದು ಸೆನ್ ಠಾಣೆ ಪೊಲೀಸರು ಎಫ್ ಐಆರ್ ದಾಖಲಿಸಿದ್ದರು.

ನ್ಯಾಯಾಲಯಕ್ಕೆ ರಿಮೈಂಡರ್ ಅರ್ಜಿ ಮೂಲಕ ಕಾರ್ತಿಕ್, ಪುಟ್ಟರಾಜು ಹಾಗೂ ಚೇತನ್ ಎಂಬ ಹೆಸರು ಉಲ್ಲೇಖಿಸಿ ಮಾಹಿತಿ ರವಾನಿಸಲಾಗಿತ್ತು. ತಮ್ಮ ವಿರುದ್ಧ ಕೇಸ್ ದಾಖಲಾಗುತ್ತಲ್ಲೇ ಆರೋಪಿಗಳು ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ಇದೀಗ ಅರ್ಜಿ ವಜಾ ಬೆನ್ನಲ್ಲೇ ಆರೋಪಿಗಳ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ. ಪೆನ್ ಡ್ರೈವ್ ವೈರಲ್ ಆರೋಪ ಪ್ರಕರಣ ಇನ್ನೂ ಎಸ್ ಐಟಿಗೆ ಹಸ್ತಾಂತರವಾಗಿಲ್ಲ. ಕೇಸ್ ಹಸ್ತಾಂತರ ಆಗದ ಹಿನ್ನೆಲೆಯಲ್ಲಿ ಹಾಸನ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪುಟ 2





### ಪರಪ್ಪನ ಅಗ್ರಹಾರ ಜೈಲಿನಲ್ಲಿ ಒಂದು ರಾತ್ರಿ ಕಳೆದ ರೇವಣ್ಣ



**ಬೆಂಗಳೂರು:** ಕೆ.ಆರ್.ನಗರದ ಮಹಿಳೆಯೊಬ್ಬರ ಕಿಡ್ನ್ಯಾಪ್ ಪ್ರಕರಣದಲ್ಲಿ ಹಾಸನ ಜಿಲ್ಲೆ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್ ಶಾಸಕ ಹೆಚ್ ಡಿ ರೇವಣ್ಣ ಈಗಾಗಲೇ ಜೈಲುಪಾಲಾಗಿದ್ದು, ಕಂಬಿ ಏಣಿಸುವಂತಾಗಿದೆ. ನಿನ್ನೆ ಎಸ್ ಐಟಿ ಕಸ್ಟಡಿ ಅವಧಿ ಅಂತ್ಯ ಬಳಿಕ ಕೋರ್ಟ್ , ನ್ಯಾಯಾಂಗ ಬಂಧನ ವಿಧಿಸಿತ್ತು. ಬಿಗಿ ಬಂದೋಬಸ್ತ್ ನಲ್ಲಿ ಎಸ್ ಐಟಿ ಅಧಿಕಾರಿಗಳು ರೇವಣ್ಣರನ್ನು ಪರಪ್ಪನ ಅಗ್ರಹಾರ ಜೈಲಿಗೆ ಕರೆದುಕೊಂಡು ಹೋದರು. ಪರಪ್ಪನ ಅಗ್ರಹಾರ ಜೈಲಿನಲ್ಲಿ ಸಾಮಾನ್ಯ ಕೈದಿಗಳಂತೆ ರೇವಣ್ಣ ಸೆರೆವಾಸ ಅನುಭವಿಸುತ್ತಿದ್ದಾರೆ.

ಪುಟ 2

### ದೇವರಾಜೇಗೌಡ, ಕಾರ್ತಿಕ್‌ಗೌಡಗೆ ಮತ್ತೆ ಎಸ್‌ಐಟಿ ನೋಟಿಸ್

**ಬೆಂಗಳೂರು:** ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಬಹಿರಂಗವಾಗಿ ಒಂದಷ್ಟು ದಾಖಲೆ ಬಿಡುಗಡೆ ಮಾಡಿದ್ದ ಬಿಜೆಪಿ ಮುಖಂಡ, ವಕೀಲ ದೇವರಾಜೇಗೌಡಗೆ ಇದೀಗ ಮತ್ತೊಂದು ಸಂಕಷ್ಟ ಎದುರಾಗಿದೆ. ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ಮತ್ತೊಮ್ಮೆ ನೋಟಿಸ್ ನೀಡಿದೆ. ಆ ಮೂಲಕ ದೇವರಾಜೇಗೌಡಗೆ ಎಸ್ ಐಟಿ ಉರುಳು ಸುತ್ತಿಕೊಳ್ಳತ್ತಿದ್ಯಾಯಾ ಎಂಬ ಅನುಮಾನಗಳು ಹುಟ್ಟಿಕೊಂಡಿವೆ. ಮತ್ತೊಂದು ಕಡೆ ಪ್ರಜ್ವಲ್ ರೇವಣ್ಣ ಮಾಜಿ ಕಾರು ಚಾಲಕ ಕಾರ್ತಿಕ್ ಗೌಡಗೂ ನೋಟಿಸ್ ನೀಡಲಾಗಿದೆ.



ದೇವರಾಜೇಗೌಡ ಇತ್ತೀಚೆಗೆ ಒಂದಷ್ಟು ದಾಖಲೆಗಳನ್ನು ಬಿಡುಗಡೆ ಮಾಡುವ ಮೂಲಕ ಮಾಧ್ಯಮಗಳ ಮುಂದೆ ಕೆಲವರ ವಿರುದ್ಧ ಗಂಭೀರ ಆರೋಪ ಮಾಡಿದ್ದರು. ಈ ಬೆನ್ನಲ್ಲೇ ಎಸ್‌ಐಟಿಯಿಂದ ದೇವರಾಜೇಗೌಡಗೆ ನೋಟೀಸ್ ನೀಡಿದ್ದು, ತಮ್ಮ ಬಳಿ ಇರುವ ಮತ್ತಷ್ಟು ಸಾಕ್ಷ್ಯಾಧಾರಗಳು, ಫೋಟೋಸ್, ಆಡಿಯೋ ತರಲು ಸೂಚನೆ ನೀಡಲಾಗಿದೆ.

ಮತ್ತೊಂದು ಕಡೆ ಪ್ರಕರಣ ಸಂಬಂಧ ಹೆಚ್ಚಿನ ವಿಚಾರಣೆಗಾಗಿ ಪ್ರಜ್ವಲ್ ರೇವಣ್ಣ ಮಾಜಿ ಕಾರು ಚಾಲಕ ಕಾರ್ತಿಕ್ ಗೌಡಗೂ ನೋಟಿಸ್ ನೀಡಲಾಗಿದೆ. ಹೀಗಾಗಿ ಇಬ್ಬರನ್ನೂ ಎಸ್‌ಐಟಿ ಮತ್ತೊಂದು ಸುತ್ತಿನ ತೀವ್ರ ವಿಚಾರಣೆ ಮಾಡಲಿದ್ದಾರೆ.

ನಿನ್ನೆ ನಗರದಲ್ಲಿ ಪತ್ರಿಕಾಗೋಷ್ಟಿಯಲ್ಲಿ ಮಾತನಾಡಿರುವ ದೇವರಾಜೇಗೌಡ, ಈ ಪ್ರಕರಣದ ಸೂತ್ರಧಾರಿ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಎಂದು ಗಂಭೀರ ಆರೋಪ ಮಾಡಿದ್ದಾರೆ. ಅಲ್ಲದೇ ಈ ವಿಚಾರವಾಗಿ ಬಹಿರಂಗ ಚರ್ಚೆಗೂ ಡಿಕೆ ಶಿವಕುಮಾರ್‌ನ್ನು ಆಹ್ವಾನಿಸಿದ್ದರು. ಪ್ರಜ್ವಲ್ ಮಾಜಿ ಕಾರು ಚಾಲಕ ಕಾರ್ತಿಕ್ ತಮ್ಮನ್ನು ಭೇಟಿಯಾಗಿದ್ದು ಹಾಗೂ ಡಿಕೆ ಶಿವಕುಮಾರ್ ಅವರು ತಮಗೆ ಆಮಿಷವೊಡ್ಡಿದ ಸಂಭಾಷಣೆಯ ಆಡಿಯೋವನ್ನು ದೇವರಾಜೇಗೌಡ ಬಿಡುಗಡೆ ಮಾಡಿದ್ದರು. ಹಾಗೇ ಸಿಐಟಿ ತಂಡದ ಮೇಲೂ ಸಹ ಗಂಭೀರ ಆರೋಪಗಳನ್ನು ಮಾಡಿದ್ದು, ಈ ಬಗ್ಗೆ ಸಿಬಿಐ ದೂರು ನೀಡಲು ಮುಂದಾಗಿದ್ದಾರೆ.

ಈ ನಡುವೆ ಪ್ರಜ್ವಲ್ ಪೆನ್ ಡ್ರೈವ್ ರಿಲೀಸ್ ಪ್ರಕರಣದಲ್ಲಿ ನಾಲ್ವರು ಆರೋಪಿಗಳ ನಿರೀಕ್ಷಣಾ ಜಾಮೀನು ಅರ್ಜಿ ವಜಾಗೊಂಡಿದೆ. ಹಾಸನದ 3ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯ, ಪ್ರಜ್ವಲ್ ಮಾಜಿ ಕಾರು ಚಾಲಕ ಕಾರ್ತಿಕ್ ಗೌಡ, ಪುಟ್ಟರಾಜು, ನವೀನ್ ಹಾಗೂ ಚೇತನ್ ನಿರೀಕ್ಷಣಾ ಜಾಮೀನು ಅರ್ಜಿಯನ್ನ ವಜಾಗೊಳಿಸಿದೆ.

ಪುಟ 2

### ಬೆಂಗಳೂರಿನಲ್ಲಿ ನೀರು ನಿರ್ವಹಣೆ, ಪ್ರವಾಹ ತಡೆಗೆ ವಿಶ್ವಬ್ಯಾಂಕ್‌ನಿಂದ 3,000 ಕೋಟಿ ರೂ. ನಿರೀಕ್ಷೆ

**ಬೆಂಗಳೂರು:** ಬೆಂಗಳೂರಿನಲ್ಲಿ ನೀರು ನಿರ್ವಹಣೆ ಮತ್ತು ಪ್ರವಾಹ ಪರಿಸ್ಥಿತಿ ಕಡಿಮೆ ಮಾಡುವ ಉಪಕ್ರಮಗಳಿಗೆ 3,000 ಕೋಟಿ ರೂ. ಸಾಲದ ರೂಪದ ಅನುದಾನ ನೀಡಲು ವಿಶ್ವಬ್ಯಾಂಕ್ ಮುಂದೆ ಬಂದಿದೆ. ಈ ಕುರಿತ ಪ್ರಸ್ತಾವನೆಗೆ ಸುಮಾರು ಒಂದು ತಿಂಗಳ ಹಿಂದೆ ಆರ್ಥಿಕ ವ್ಯವಹಾರಗಳ ಇಲಾಖೆ ಗ್ರೀನ್ ಸಿಗ್ನಲ್ ನೀಡಿದ್ದು, ಮುಂದಿನ ಹಂತಗಳ ಬಗ್ಗೆ ಬಿಬಿಎಂಪಿ ಇತ್ತೀಚೆಗೆ ವಿಶ್ವಬ್ಯಾಂಕ್ ಪ್ರತಿನಿಧಿಗಳೊಂದಿಗೆ ಮೊದಲ ಸಭೆ ನಡೆಸಿದೆ. ಒಪ್ಪಂದಕ್ಕೆ ಸಹಿ ಹಾಕಿದ ನಂತರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಾಲದ ಮೊತ್ತವನ್ನು ಕ್ರಮವಾಗಿ 2,000 ಕೋಟಿ ಮತ್ತು 1,000 ಕೋಟಿ ರೂ. ಆಗಿ ಹಂಚಿಕೊಳ್ಳಲಿದೆ.

ಸಾಲದ ಮೊತ್ತದ ನೆರವಿನೊಂದಿಗೆ




ಬಿಬಿಎಂಪಿಯು 173 ಕಿಲೋಮೀಟರ್ ವ್ಯಾಪ್ತಿಯಲ್ಲಿ ತಡೆಗೋಡೆಗಳನ್ನು ನಿರ್ಮಿಸುವ ಮೂಲಕ ಬಾಹ್ಯ ಪ್ರದೇಶಗಳಲ್ಲಿ ಮಳೆನೀರಿನ ಚರಂಡಿಗಳನ್ನು ನಿರ್ಮಾಣ ಮಾಡಲು ಯೋಜಿಸಿದೆ. ಕೋರಮಂಗಲ ವ್ಯಾಲಿ ವಾಟರ್ ವೇಯನ್ನು ದಕ್ಷಿಣ ಪಿನಾಕಿನಿ ನದಿಯೊಂದಿಗೆ ಸಂಪರ್ಕಿಸುವ ನಿಟ್ಟಿನಲ್ಲಿ ಯೋಜನೆಯನ್ನು ವಿಸ್ತರಿಸಲಿದೆ.

ಪುಟ 2

### ಚರ್ಚೆಗೆ ಸ್ಥಳ, ಸಮಯ ಆಯ್ಕೆ ಮಾಡಿ ನಾವು ರೆಡಿ ಎಂದು ರಾಹುಲ್

## ಪ್ರಿಯಾಂಕಾಗೆ ಸವಾಲು ಹಾಕಿದ ಸ್ಮೃತಿ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಪ್ರಮುಖ ವಿಷಯಗಳ ಬಗ್ಗೆ ಮಾತನಾಡುವುದಿಲ್ಲ ಎಂದು ಹೇಳಿದ್ದಕ್ಕಾಗಿ ಪ್ರಿಯಾಂಕಾ ಗಾಂಧಿಗೆ ಕೇಂದ್ರ ಸಚಿವೆ ಸ್ಮೃತಿ ಇರಾನಿ ತಿರುಗೇಟು ನೀಡಿದ್ದಾರೆ. ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿಗೆ ಸವಾಲೆಸೆದಿರುವ ಸ್ಮೃತಿ ಚರ್ಚೆಗೆ ಸ್ಥಳ, ಆಯಂಕರ್, ಸುದ್ದಿವಾಹಿನಿ, ಸಮಯವನ್ನು ಅಂತಿಮಗೊಳಿಸುವಂತೆ ಕೇಳಿದ್ದಾರೆ.

ಒಂದೆಡೆ ಸಹೋದರ-ಸಹೋದರಿ ಮತ್ತೊಂದೆಡೆ ಬಿಜೆಪಿಯ ವಕ್ತಾರರು ಇರುತ್ತಾರೆ, ನಮ್ಮ ಪಕ್ಷದಿಂದ ಎಲ್ಲವೂ ಸ್ಪಷ್ಟವಾಗುತ್ತದೆ ಎಂದರು. ಅಮೇಥಿಯಲ್ಲಿ, ಸ್ಮೃತಿ ಇರಾನಿ 2019 ರ ಲೋಕಸಭೆ ಚುನಾವಣೆಯಲ್ಲಿ ರಾಹುಲ್ ಗಾಂಧಿಯನ್ನು 55,000 ಮತಗಳಿಂದ ಸೋಲಿಸಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ರಾಯ್ ಬರೇಲಿಯಲ್ಲಿ ಅಖಾಡಕ್ಕೆ ಇಳಿದಿದ್ದಾರೆ ಮತ್ತು ಕುಟುಂಬದ ಆಪ್ತ ಸಹಾಯಕ ಕಿಶೋರಿ ಲಾಲ್ ಶರ್ಮಾ ಅಮೇಥಿಯಲ್ಲಿ ಸ್ಮೃತಿ ಇರಾನಿ ವಿರುದ್ಧ



ಕಣಕ್ಕಿಳಿದಿದ್ದಾರೆ.

ಪ್ರಿಯಾಂಕಾ ಗಾಂಧಿ ರಾಯ್ ಬರೇಲಿಯಲ್ಲಿ ಬಿಡಾರ ಹೂಡಿದ್ದಾರೆ ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸೋಮವಾರದಿಂದ (ಮೇ 6) ರಾಯಬರೇಲಿಯಲ್ಲಿ ಮೊಕ್ಕಾಂ ಹೂಡಿದ್ದು, ಚುನಾವಣಾ ಕಾರ್ಯತಂತ್ರ, ನಿರ್ವಹಣೆಯಿಂದ ಚುನಾವಣಾ ಕಣವನ್ನು ಮುನ್ನಡೆಸುತ್ತಿದ್ದಾರೆ.

2019 ರ ಸಮೀಕ್ಷೆಯ ಫಲಿತಾಂಶಗಳು ಸೋನಿಯಾ ಗಾಂಧಿ 2019ರ ಸಾರ್ವತ್ರಿಕ ಚುನಾವಣೆಯಲ್ಲಿ ರಾಯ್ ಬರೇಲಿಯಿಂದ ಸ್ಪರ್ಧಿಸಿದ್ದರು. ಬಿಜೆಪಿಯ ದಿನೇಶ್ ಪ್ರತಾಪ್ ರನ್ನು 1.6 ಲಕ್ಷ ಮತಗಳಿಂದ ಸೋಲಿಸಿದರು. ಅವರ ಗೆಲುವಿನ ಅಂತರವು 2014 ಕ್ಕೆ ಹೋಲಿಸಿದರೆ ಶೇಕಡಾ 13 ರಷ್ಟು ಕಡಿಮೆಯಾಗಿತ್ತು.

ಕಾಂಗ್ರೆಸ್ ಕೇವಲ ಎರಡು ಸ್ಥಾನಗಳನ್ನು ಗೆದ್ದಿದೆ. 2014 ರಲ್ಲಿ ಉತ್ತರ ಪ್ರದೇಶ (ರಾಯ್ ಬರೇಲಿ ಮತ್ತು ಅಮೇಥಿ). ಪಕ್ಷವು ಅಮೇಥಿಯನ್ನು ಕಳೆದುಕೊಂಡ ನಂತರ 2019 ರಲ್ಲಿ ಕೇವಲ ಒಂದಕ್ಕೆ ಇಳಿಯಿತು.

ದೀರ್ಘಕಾಲದ ಕುಟುಂಬ ಪರಂಪರೆಯ ಸ್ಥಾನವನ್ನು ಉಳಿಸಿಕೊಳ್ಳಲು ರಾಹುಲ್ ಗಾಂಧಿ ಪ್ರಯತ್ನಿಸುತ್ತಿದ್ದಾರೆ, ಆದರೆ ಕಿಶೋರಿ ಲಾಲ್ ಶರ್ಮಾ ಸ್ಮೃತಿ ಇರಾನಿ ಅವರ ಸವಾಲನ್ನು ಎದುರಿಸುತ್ತಿದ್ದಾರೆ. ಸೋನಿಯಾ ಗಾಂಧಿ ಅವರು ಈ ಬಾರಿ ರಾಜ್ಯಸಭೆಗೆ ತೆರಳುವ ಮೊದಲು ಸತತ ನಾಲ್ಕು ಅವಧಿಗೆ ರಾಯ್ ಬರೇಲಿಯನ್ನು ಗೆದ್ದಿದ್ದರು.

ಪುಟ 2

### ರಾಜ್ಯದಲ್ಲಿ ಹೆಚ್ಚಾಯ್ತು ವಾಂತಿ ಭೇದಿ ಪ್ರಕರಣ

## ಬೆಂಗಳೂರಿನಲ್ಲಿ ಡಯೇರಿಯಾ, ಅತಿಸಾರ ಆರ್ಭಟ

**ಬೆಂಗಳೂರು:** ಕೂಲ್ ಸಿಟಿ ಅಂತಾನೇ ಕರೆಸಿಕೊಳ್ಳುವ ರಾಜಧಾನಿ ಬೆಂಗಳೂರು ಸದ್ಯ ಹಾಟ್ ಸಿಟಿಯಾಗಿ ಬದಲಾಗಿದೆ. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ದಾಖಲೆಯ ತಾಪಮಾನ ದಾಖಲಾಗುತ್ತಿದೆ. ರಾಜ್ಯದ ಜನರು ಎಂಥ ಶೆಕೆಯಪ್ಪ ಅಂತ ಶಾಪ ಹಾಕೋಕ್ಕೆ ಶುರು ಮಾಡಿದ್ದಾರೆ. ಉರಿಯುವ ಬಿಸಿಲಿಗೆ ಹೀಟ್ ಸ್ಟ್ರೋಕ್ ಭೀತಿ ಒಂದು ಕಡೆಯಾದರೆ, ಆರೋಗ್ಯ ಸಮಸ್ಯೆಗಳ ಆತಂಕ ಮತ್ತೊಂಡೆ ಶುರವಾಗಿದೆ. ಈ ನಡುವೆ ತಾಪಮಾನ ಏರಿಕೆ ಬೆನ್ನಲ್ಲೇ ವಾಂತಿ, ಭೇದಿ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಸದ್ಯ ಈಗ ಕಳೆದ ಎರಡು ದಿನದಿಂದ ಮಳೆ ಸುರಿಯುತ್ತಿದ್ದು ಸಡನ್ ಹವಾಮಾನ ಬದಲಾವಣೆಗೆ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿವೆ.

ಹಾಸನ ಜಿಲ್ಲೆಯಲ್ಲಿ ಎರಡು ಸಾವು ಹಿನ್ನಲೆ ಆರೋಗ್ಯ ಇಲಾಖೆ ಅಲರ್ಟ್

ರಾಜಧಾನಿ ಬೆಂಗಳೂರಿನಲ್ಲಿ ಡಯೇರಿಯಾ, ಅತಿಸಾರ



ಆರ್ಭಟ ಹೆಚ್ಚಾಗಿದೆ. ಕಲುಷಿತ ನೀರು ಮತ್ತು ಅತಿಯಾದ ಆಹಾರ ಸೇವನೆ, ವ್ಯಾಪಕ ಬಿಸಿಲಿನ ಎಫೆಕ್ಟ್‌ಗೆ ಸಿಲಿಕಾನ್ ಸಿಟಿ ಬೆಂಗಳೂರು ಸೇರಿದ್ದಂತೆ ರಾಜ್ಯದಲ್ಲಿ ದಾಖಲೆಯ ಪ್ರಮಾಣದಲ್ಲಿ ಅತಿಸಾರ ಪ್ರಕರಣಗಳು ದಾಖಲಾಗಿವೆ. ಕಳೆದೊಂದು ವಾರದಲ್ಲಿಯೇ ಬೆಂಗಳೂರಿನಲ್ಲಿ 4450 ಅತಿಸಾರ ಕೇಸ್ ದಾಖಲಾಗಿದೆ.

### ಭೀಕರ ಬರಗಾಲಕ್ಕೆ ಒಣಗಿದ 400 ಎಕರೆ ಕೆರೆ

## ಸಾವಿರಾರು ಮೀನುಗಳ ಮಾರಣಹೋಮ

**ರಾಯಚೂರು:** ಬರಗಾಲ ಈ ಬಾರೀ ರೈತರ ಬದುಕನ್ನೇ ಕಸಿದುಕೊಂಡಿದೆ. ರಾಜ್ಯದಲ್ಲಿ ಕಂಡು ಕೇಳರಿಯದಂತ ಬರಗಾಲದಿಂದ ರೈತರು ಕಂಗಾಲಾಗಿದ್ದು, ಆರ್ಥಿಕವಾಗಿ ಇನ್ನೂ ಚೇತರಿಸಿಕೊಂಡಿಲ್ಲ. ಈ ಮಧ್ಯೆ ಭೀಕರ ಬರಗಾಲದಿಂದ ಕುಡಿಯೋ ನೀರಿನ ಸಮಸ್ಯೆ ಕೂಡ ಎದುರಾಗಿದೆ. ಅದರಲ್ಲೂ ಗಡಿ ಜಿಲ್ಲೆ ರಾಯಚೂರಿನಲ್ಲಿ ತಾಪಮಾನ ಹೆಚ್ಚಾಗಿರೋದ್ರಿಂದ ಸಮಸ್ಯೆ ಹೆಚ್ಚಾಗ್ತಿದೆ.



ರಾಯಚೂರು ತಾಲೂಕಿನ ಮರ್ಚಡ್ ಗ್ರಾಮದಲ್ಲಿರುವ ಸುಮಾರು 400 ಎಕರೆ ವ್ಯಾಪ್ತಿಯ ಬೃಹತ್ ಕೆರೆ ಬತ್ತಿ ಹೋಗಿದೆ. ಬಿಸಿಲಿನ ತಾಪ ಒಂದು ಕಡೆ ಕೆರೆ ನೀರು ಬತ್ತಿರೋದು ಮತ್ತೊಂದು ಕಡೆ. ಇವೆಲ್ಲದರ ಕಾರಣದಿಂದ ಈ ಬೃಹತ್ ಕೆರೆಯಲ್ಲಿದ್ದ ಲಕ್ಷಾಂತರ ಮೀನುಗಳು ಸತ್ತು ಹೋಗಿವೆ. ಬಿಸಿಲ ಹೊಡೆತಕ್ಕೆ ಮೀನುಗಳು ಒಣಗಿದ ಕೆರೆಯುದ್ದಕ್ಕೂ ಸತ್ತು ಬಿದ್ದಿವೆ. ಕೆರೆ ದಡದಲ್ಲಿ ರಾಶಿ ರಾಶಿ ಮೀನುಗಳು ಸತ್ತು ಬಿದ್ದಿರೋದು ಕಣ್ಣೀರು ತರಿಸ್ತಿವೆ. ಅಲ್ಲಲ್ಲಿ ಬತ್ತಿ ಹೋಗಿರೊ ಕೆರೆಯಲ್ಲಿ ಮೀನು ಸತ್ತು ಬಿಸಿಲಿನ ಬೇಗೆಗೆ ಒಣಗಿ ಹೋಗಿರೊ ದೃಶ್ಯ ಕಲ್ಲು ಹೃದಯವನ್ನ ಕರುಗುವಂತೆ ಮಾಡಿದೆ.

ದುರಂತ ಅಂದ್ರೆ, ಇದೇ, ಮರ್ಚಡ್ ನ ಬೃಹತ್ ಕೆರೆಯಲ್ಲಿ ಮೀನು ಸಾಕಾಣಿಕೆ ಮಾಡಲಾಗ್ತಿತ್ತು. ಮರ್ಚಡ್ ಗ್ರಾಮದ ಸುಮಾರು 80 ಕ್ಕೂ ಹೆಚ್ಚು ಕುಟುಂಬಗಳು ಈ 400 ಎಕರೆ ಪ್ರದೇಶದ ಕೆರೆಯಲ್ಲಿ ಮೀನು ಸಾಕಾಣಿಕೆ ಮಾಡ್ತಿದ್ರು. ಹಂತ ಹಂತವಾಗಿ ಕೆರೆಯಲ್ಲಿ ಮರಿ ಮೀನುಗಳನ್ನ ಬಿಟ್ಟು ಮೀನು ಸಾಕಾಣಿಕೆ ಮಾಡಿ ಜೀವನ ನಡೆಸ್ತಿದ್ರು. ಇತ್ತೀಚೆಗೆ ಈ ಅವಧಿಯಲ್ಲಿ ಸುಮಾರು 15 ಲಕ್ಷ ವೆಚ್ಚದಲ್ಲಿ ಲಕ್ಷಾಂತರ ಮೀನು ಮರಿಗಳನ್ನ ತಂದು ಕೆರೆಗೆ ಬಿಟ್ಟಿದ್ರು. ಅಂದುಕೊಂಡಂತೆ ಆಗಿದ್ರೆ, ಇಷ್ಟೊತ್ತಿಗಾಗಲೇ ಬಡ ಮೀನುಗಾರರಿಗೆ ಒಳ್ಳೆ ಆದಾಯ ಬರ್ತಿತ್ತು. ಆದ್ರೆ, ಆಗಿದ್ದೇ ಬೇರೆ. ಬರಗಾಲಕ್ಕೆ ಕೆರೆ ಒಣಗಿದ್ದು ತಾಪಮಾನ ಹೆಚ್ಚಾಗ್ತಿರೋದ್ರಿಂದ ಮೀನುಗಳು ಸತ್ತು ಹೋಗ್ತಿವೆ. ಮೀನುಗಾರರು ಕಂಗಾಲಾಗಿದ್ದಾರೆ. ಈಗಾಗಲೇ ಲಕ್ಷಾಂತರ ಮೀನುಗಳು ಸಾವನ್ನಪ್ಪಿದ್ದು ಮೀನುಗಾರಿಕೆ ಮಾಡ್ತಿದ್ದ 80ಕ್ಕೂ ಹೆಚ್ಚು ಕುಟುಂಬಗಳು ಈಗ ಬೀದಿಗೆ ಬಿದ್ದಿವೆ. ಈ ಬಗ್ಗೆ ಕೂಡಲೇ ಸರ್ಕಾರ ಸೂಕ್ತ ಪರಿಹಾರ ನೀಡುವಂತೆ ಮೀನುಗಾರಿಕೆ ಕುಟುಂಬದವ್ರು ಆಗ್ರಹಿಸಿದ್ದಾರೆ.

ಪುಟ 2

# ಜೀವಜಲವಿಲ್ಲದೇ ಇಂಗಿ ಹೋದ 125ಕ್ಕೂ ಹೆಚ್ಚು ಕೆರೆಗಳು





**ಬೆಂಗಳೂರು:** ದಶಕಗಳ ಹಿಂದೆ ರಾಜ್ಯ ರಾಜಧಾನಿಯ ಜನರ ಜಲದಾಹ ತೀರಿಸಿದ್ದ ಕೆರೆಗಳು ಅಳಿವಿನ ಅಂಚಿಗೆ ತಲುಪಿಬಿಟ್ಟಿವೆ. ಬೇಸಿಗೆ ಬೇಗೆ ಜೊತೆಗೆ ಸರಿಯಾದ ಪ್ರಮಾಣದಲ್ಲಿ ಬಾರದೆ ಕೈಕೊಟ್ಟ ಮಳೆಯಿಂದ ನಗರದ ಕೆರೆಗಳು ಇಂಗಿಹೋಗಿವೆ. ಬಿಸಿಲ ಬೇಗೆಗೆ ಕೆರೆಗಳು ಬೆಂಗಾಡಾಗಿ ಪರಿವರ್ತನೆಯಾಗಿದ್ದು, ಜಲಚರಗಳ ಆಶ್ರಯತಾಣವಾಗಿದ್ದ ಕೆರೆಗಳು ಮೈದಾನಗಳಂತಾಗಿವೆ. ಕಳೆದ 2 ದಿನದಿಂದ ನಗರದಲ್ಲಿ ಮಳೆಯಾಗುತ್ತಿದ್ದು ಕೆರೆಗಳು ಮಾತ್ರ ಇನ್ನೂ ತುಂಬಿಲ್ಲ. ಕೆರೆಗಳಿಗೆ ಈ ಗತಿ ಬರಲು ಕಾರಣ ಏನು ಎಂಬ ಬಗ್ಗೆ ಈ ಸುದ್ದಿಯಲ್ಲಿ ಓದಿ.

**ಕೆರೆಗಳಿಗೆ ಕಂಟಕ ತಂದವರು ಯಾರು :** ದಶಕಗಳ ಹಿಂದೆ 1 ಸಾವಿರದಷ್ಟಿದ್ದ ಕೆರೆಗಳು, 1960ರ ಹೊತ್ತಿಗೆ 280ಕ್ಕೆ ಇಳಿಕೆ ಕಂಡಿತ್ತು. ಆದರೆ ಜನಸಂಖ್ಯೆ ಹೆಚ್ಚಿದ್ದಂತೆಲ್ಲ ಕೆರೆಗಳನ್ನ ಮುಚ್ಚಿ ಹೊಸ ಹೊಸ ಲೇಔಟ್, ಅಪಾರ್ಟ್ ಮೆಂಟ್ ಗಳು ತಲೆ ಎತ್ತಿದ್ದರಿಂದ ಅಂತರ್ಜಲದ ಶಕ್ತಿಯಂತಿದ್ದ ನೂರಾರು ಕೆರೆಗಳು ಕಣ್ಮರೆಯಾಗಿಬಿಟ್ಟಿವೆ. ಇತ್ತ ಕೆರೆಗಳ ಸುತ್ತಮುತ್ತಲಿನ ಜಾಗ, ಕೆರೆಗೆ ನೀರು ಸಾಗ್ತಿದ್ದ ಜಾಗಗಳು ಕೂಡ ಒತ್ತುವರಿಯಾಗಿದ್ದು, ಸರ್ಕಾರ ಈಗಲಾದ್ರೂ ಕೆರೆಗಳ ಸುತ್ತಮುತ್ತಲಿನ ಒತ್ತುವರಿ ತೆರವು ಮಾಡಿ ಅಳಿದುಳಿದ ಕೆರೆಗಳನ್ನ ರಕ್ಷಿಸಬೇಕಿದೆ ಅಂತಾ ಪರಿಸರ ತಜ್ಞ ಯಲ್ಲಪ್ಪರೆಡ್ಡಿ ಆಗ್ರಹಿಸಿದ್ದಾರೆ.

ಸದ್ಯ ಬೆಂಗಳೂರಿನ ಕೆರೆಗಳ ಸ್ಥಿತಿ ಹೇಗಿದೆ ಅನ್ನೋದರ ಬಗ್ಗೆ ಟಿವಿ9 ನಡೆಸಿದ ರಿಯಾಲಿಟಿ ಚೆಕ್ ನಲ್ಲಿ ರಾಜಧಾನಿಯ ಕೆರೆಗಳ ದುಸ್ಥಿತಿ ಸೆರೆಯಾಗಿದೆ. ಐತಿಹಾಸಿಕ ಕೆರೆಗಳು, ವಿಶಾಲವಾಗಿದ್ದ ಕೆರೆಗಳು ನೀರಿಲ್ಲದೇ ಸೊರಗುತ್ತಿದ್ದು, ಒಂದೊಂದು ಕೆರೆಯು ಒಂದೊಂದು ಕತೆ ಹೇಳ್ತಿದೆ.

**ಹಲಗೆವಡೇರಹಳ್ಳಿ ಕೆರೆ:** ಹಲವು ವರ್ಷಗಳ ಕಾಲ ರಾಜರಾಜೇಶ್ವರಿನಗರದ ಸುತ್ತಮುತ್ತಲಿನ ಜಲದಾಹ ತೀರಿಸಿದ್ದ 17 ಎಕರೆ ವಿಸ್ತೀರ್ಣದ ಈ ಕೆರೆ ಇದೀಗ ನೀರಿಲ್ಲದೇ ಒಣಗಿ ನಿಂತಿದೆ. ಸದಾ ನೀರು ತುಂಬಿರುತ್ತಿದ್ದ ಈ ಕೆರೆ 35 ಪ್ರಭೇದದ ಪಕ್ಷಿಗಳನ್ನ ಆಕರ್ಷಿಸುತ್ತಿತ್ತು, ಇದೀಗ ನೀರಿಲ್ಲದೇ ಬಾಯ್ತೆರೆದು ನಿಂತಿದೆ.

**ಮಲ್ಲತಹಳ್ಳಿ ಕೆರೆ:** ಸುಮಾರು 71 ಎಕರೆ ವಿಸ್ತೀರ್ಣ ಇರೋ ಮಲ್ಲತಹಳ್ಳಿ ಕೆರೆ ನೀರಿಲ್ಲದೇ ಬಾಯ್ತೆರೆದಿದೆ. ಕೊಕ್ಕರೆ, ಮೀನು, ಏಡಿಯಂತ ಜೀವರಾಶಿಗಳ ಆಶ್ರಯತಾಣವಾಗಿದ್ದ ಈ ಕೆರೆ ಇದೀಗ ಸಂಪೂರ್ಣ ಬತ್ತಿಹೋಗಿದೆ. ಕೆರೆಯಂಗಳದಲ್ಲಿ ನಿಂತಿರೋ ಅಲ್ಪಸ್ವಲ್ಪ ನೀರಲ್ಲೇ ಇಂದಿಗೂ ಪ್ರಾಣಿ–ಪಕ್ಷಿಗಳ ದಾಹ ತೀರಿಸ್ತಿರೋ ಈ ಕೆರೆ ನೀರಿಲ್ಲದೇ ಸೊರಗಿ ಹೋಗಿದೆ. ಬಸವರಾಜ್ ಬೊಮ್ಮಾಯಿ ಸಿಎಂ ಆಗಿದ್ದಾಗ ಈ ಕೆರೆ ಅಭಿವೃದ್ಧಿಗೆ 81 ಕೋಟಿ ಅನುದಾನ ನೀಡಿದ್ರು, ಆದ್ರೆ ಇದೀಗ ಈ ಕೆರೆ ಸಂಪೂರ್ಣ ಖಾಲಿಯಾಗಿ ನೀರಿಲ್ಲದೇ ಬಣಗುಡುತ್ತಿದೆ.

**ಅನ್ನಪೂರ್ಣೇಶ್ವರಿನಗರ ಕೆರೆ:** ಸುಮಾರು 70 ಎಕರೆ ಇದ್ದ ಅನ್ನಪೂರ್ಣೇಶ್ವರಿನಗರ ಕೆರೆ ಇದೀಗ ಅರೆಬರೆ ಜಾಗಕ್ಕೆ ಮಾತ್ರ ಸೀಮಿತವಾಗಿಬಿಟ್ಟಿದೆ. ಕೆರೆಗೆ ಸೇರಿದ್ದ ಜಾಗದಲ್ಲಿ ಬಿಡಿಎ ನಿವೇಶನಗಳು ತಲೆಎತ್ತಿದ್ರೆ, ಮತ್ತರ್ಧ ಜಾಗ ಪಾರ್ಕ್, ರಸ್ತೆಗೆ ಬಳಕೆಯಾಗಿದೆ. ಇತ್ತ ಅಳಿದುಳಿದ ಕೆರೆ ಕೂಡ ಅಲ್ಪಸ್ವಲ್ಪ ನೀರಿದ್ದು, ಜಲಮಂಡಳಿ ಈ ಕೆರೆಗೆ ಸಂಸ್ಕರಿತ ನೀರು ತುಂಬಿಸೋಕೆ ತಯಾರಿ ನಡೆಸ್ತಿದೆ.

**ರಾಚೇನಹಳ್ಳಿ ಕೆರೆ:** ಬ್ಯಾಟರಾಯನಪುರ ವ್ಯಾಪ್ತಿಯಲ್ಲಿರೋ ಈ ಕೆರೆಯ ನೀರು ಇದೀಗ ವಿಷವಾಗಿ ಪರಿವರ್ತನೆಯಾಗಿಬಿಟ್ಟಿದೆ. ಅಪಾರ್ಟ್ ಮೆಂಟ್ ಗಳ ಕಲುಷಿತ ನೀರು ಕೆರೆಯ ಒಡಲು ಸೇರಿದ್ದು, ಸಾವಿರಾರು ಮೀನುಗಳನ್ನ ಬಲಿ ಪಡೆದಿದೆ. 148 ಎಕರೆ ಇರೋ ಈ ಕೆರೆ ಒಡಲಿಗೆ ಆಧುನಿಕತೆಯ ಅಂಧದರ್ಬಾರ್ ನಿಂದ ಕಂಟಕ ಎದುರಾಗಿಬಿಟ್ಟಿದೆ.

**ಯಡಿಯೂರು ಕೆರೆ:** 1400 ವರ್ಷಗಳ ಗತಕಾಲದ ಇತಿಹಾಸ ಹೊಂದಿರೋ ಯಡಿಯೂರು ಕೆರೆಗೂ ಬರದ ಬರೆ ಬಿದ್ದಿದೆ. ವೀಕೆಂಡ್ ನಲ್ಲಿ ಬೋಟಿಂಗ್, ವಾಕಿಂಗ್ ಅಂತಾ ಸಾವಿರಾರು ಜನರನ್ನ ಆಕರ್ಷಿಸುತ್ತಿದ್ದ ಕೆರೆ ಇದೀಗ ತನ್ನೊಡಲ ಜಲರಾಶಿಯನ್ನ ಸ್ವಲ್ಪ ಸ್ವಲ್ಪವೇ ಕಳೆದುಕೊಳ್ತಿದೆ. ಅಲ್ಲಲ್ಲಿ ಕೆರೆ ಬತ್ತಿದ್ದು, ಹೊಯ್ಸಳರ ಅರಸ ವಿಷ್ಣುವರ್ಧನ, ನಾಟ್ಯರಾಣಿ ಶಾಕುಂತಲೆ ಮನಸೋತಿದ್ದ ಕೆರೆಯ ಸೌಂದರ್ಯ ಕಳೆಗುಂದುತ್ತಿದೆ.

**ಸ್ಯಾಂಕಿ ಟ್ಯಾಂಕ್:** ಬೆಂಗಳೂರಿನ ಫೇಮಸ್ ಸ್ಪಾಟ್ ಗಳಲ್ಲಿ ಒಂದಾದ ಸ್ಯಾಂಕಿ ಕೆರೆಗೂ ಬಿಸಿಲಬೇಗೆಯ ಎಫೆಕ್ಟ್ ತಟ್ಟಿದೆ. ಬರಗಾಲದ ನೀರಿನ ದಾಹ ತಪ್ಪಿಸಲು 1874 ರಲ್ಲಿ ಕರ್ನಲ್ ರಿಚರ್ಡ್ ಹಿರಾಮ್ ಸ್ಯಾಂಕಿ ನಿರ್ಮಿಸಿದ್ದ ಈ ಕೆರೆ ಇದೀಗ ಬತ್ತುವ ಸೂಚನೆ ನೀಡ್ತಿದೆ. ಹಲವು ವರ್ಷಗಳ ಕಾಲ ಬೆಂಗಳೂರು ಉತ್ತರದ ಜನರ ಜಲದಾಹ ತಣಿಸಿದ್ದ ಸ್ಯಾಂಕಿ ಕೆರೆ ಸದ್ದಿಲ್ಲದೇ ಬತ್ತಿಹೋಗ್ತಿದೆ.

**ಭೈರಸಂದ್ರ ಕೆರೆ:** ಹಲವು ಹೋರಾಟಗಳ ಫಲವಾಗಿ ಅಳಿವಿನಂಚಿಗೆ ಸೇರಿದ್ದ ಭೈರಸಂದ್ರ ಕೆರೆ ಅರಣ್ಯ ಇಲಾಖೆ ಶ್ರಮದಿಂದ ಹಸಿರತಾಣವಾಗಿತ್ತು. ಸುಮಾರು 15 ಎಕರೆ 11 ಗುಂಟೆ ವಿಸ್ತೀರ್ಣದಲ್ಲಿರೋ ಭೈರಸಂದ್ರ ಕೆರೆ ಇದೀಗ ನೀರಿನ ಅಭಾವ ಎದುರಿಸ್ತಿದೆ. ವಾಕರ್ಸ್ ಗಳ ಸ್ಪಾಟ್ ಆಗಿದ್ದ ಭೈರಸಂದ್ರ ಕೆರೆ ಸ್ವಲ್ಪ ಸ್ವಲ್ಪವೇ ಬತ್ತಿಹೋಗ್ತಿದೆ.

**ದೊಡ್ಡ ಕಲ್ಲಸಂದ್ರ ಕೆರೆ:** 21ಎಕರೆ ವಿಸ್ತೀರ್ಣದಲ್ಲಿರೋ ದೊಡ್ಡ ಕಲ್ಲಸಂದ್ರ ಕೆರೆ ಇದೀಗ ಅಳಿವಿನಂಚಿಗೆ ಸಾಗ್ತಿದೆ. 2019 ರಲ್ಲಿ ಅಕ್ಕಪಕ್ಕದ ಮನೆಗಳು,ಅಪಾರ್ಟ್ ಮೆಂಟ್ ಗಳ ತ್ಯಾಜ್ಯ ನೀರಿನಿಂದ ಮಲಿನಗೊಂಡಿದ್ದ ಈ ಕೆರೆ ಕೊಂಚ ಕೊಂಚವೇ ಸುಧಾರಣೆಯಾಗ್ತಿತ್ತು. ಇದೀಗ ಬೇಸಿಗೆ ಬೇಗೆಗೆ ಕೆರೆ ಸತ್ವ ಕಳೆದುಕೊಂಡಿದೆ. 354 ಪ್ರಭೇದದ ಸಸ್ಯವರ್ಗ, 59 ಬಗೆಯ ಪಕ್ಷಿಗಳಿಂದ ಆಕರ್ಷಿತವಾಗಿದ್ದ ಈ ಕೆರೆ ಈಗ ಬೇಸಿಗೆ ಬೇಗೆಗೆ ನಲುಗಿದೆ.

**ಚುಂಚಗಟ್ಟಕೆರೆ:** 20 ಎಕರೆ ಪ್ರದೇಶದಲ್ಲಿರೋ ಈ ಕೆರೆ ಕಲುಷಿತ ನೀರಿನಿಂದ ಮಲಿನವಾಗಿತ್ತು. ಸ್ಥಳೀಯರ ಮುಂಜಾಗ್ರತೆ, ಕಾಳಜಿಯಿಂದ ಮರಜೀವ ಪಡೆದಿದ್ದ ಕೆರೆ, ಈಗ ತನ್ನ ಒಡಲ ಜಲರಾಶಿಯನ್ನ ಕಳೆದುಕೊಂಡಿದೆ. ತ್ಯಾಜ್ಯ ಸುರಿಯೋ ಸ್ಥಳವಾಗಿ ಪರಿವರ್ತನೆಯಾಗಿದ್ದ ಈ ಕೆರೆ ಇದೀಗ ಜಲಸಂಕಷ್ಟ ಎದುರಿಸ್ತಿದೆ.

ಇತ್ತ ಕೆರೆಗಳ ಅವನತಿಗೆ ಸಿಟಿ ಮಂದಿ ಕೂಡ ಬೇಸರ ವ್ಯಕ್ತಪಡಿಸ್ತಿದ್ದಾರೆ. ಮಳೆ ಬಾರದೇ ಕಂಗೆಟ್ಟಿರೋ ಕೆರೆಗಳಿಗೆ ನೀರು ಸಿಗೋದಿರಲು, ಅಭಿವೃದ್ಧಿಯ ಹೆಸರಲ್ಲಿ ಕೆರೆ ಮಾಯವಾಗದಿದ್ರೆ ಸಾಕು ಅಂತಿದ್ದಾರೆ. ಅಲ್ಲದೇ ಹಲವು ವರ್ಷಗಳಿಂದ ನೀರಿನ ಆಧಾರವಾಗಿದ್ದ ಕೆರೆಗಳು ಈಗ ಬೆಂಗಾಡಾಗಿ ಪರಿವರ್ತನೆಯಾಗಿರೋದಕ್ಕೆ ಸಿಟಿಮಂದಿ ಬೇಸರ ಹೊರಹಾಕ್ತಿದ್ದಾರೆ.

ರಾಜಧಾನಿಯ ಇದೆಷ್ಟೆ ಕೆರೆಗಳಲ್ಲದೇ ಹಲವು ಕೆರೆಗಳು ಸದ್ದಿಲ್ಲದೇ ಭೂಗಳ್ಳರ ವಶವಾಗ್ತಿದೆ. ಕಲುಷಿತ ನೀರಿನ ಸಮಸ್ಯೆಯಿಂದ ಬಳಲುತ್ತಿರುವ ಕೆರೆಗಳಿಗೆ ಮರುಜೀವ ನೀಡೋ ಅಗತ್ಯತೆಯಿದೆ. ಜೀವರಾಶಿಗಳ ಆಗರವಾಗಿದ್ದ, ಅಂತರ್ಜಲದ ಶಕ್ತಿ ಕೇಂದ್ರದಂತಿದ್ದ ಕೆರೆಗಳು ಮತ್ತೆ ಮೊದಲಿನಂತಾಗಲಿ, ಜೀವರಾಶಿಗಳ ಬದುಕಿಗೆ ಆಸರೆಯಾಗಲಿ ಅಂತಾ ಪರಿಸರ ಪ್ರೇಮಿ ಅರುಣ್ ಪ್ರಸಾದ್ ಆಶಯ ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ಬೆಂಗಳೂರಿನ ಜಲಮೂಲಗಳಂತೆ ಕೆಲಸಮಾಡ್ತಿದ್ದ ಕೆರೆಗಳು ಅಭಿವೃದ್ಧಿ ಹೆಸರಲ್ಲಿ ಅವನತಿಯತ್ತ ಸಾಗ್ತಿವೆ. ಕಾಂಕ್ರೀಟ್ ಕಾಡಿನಂತಿರೋ ಸಿಲಿಕಾನ್ ಸಿಟಿಗೆ ಎದುರಾಗಿರೋ ಜಲಸಮಸ್ಯೆಗೆ ಮುಕ್ತಿ ಸಿಗಬೇಕಿದ್ರೆ, ಸರ್ಕಾರ, ಸ್ಥಳೀಯ ಆಡಳಿತ ಈಗಲಾದ್ರೂ ಎಚ್ಚೆತ್ತುಕೊಂಡು ಉಳಿದ ಕೆರೆಗಳತ್ತ ಗಮನಹರಿಸಬೇಕಿದೆ. ಸದ್ಯ ಇರೋ ಕೆರೆಗಳ ಸಂರಕ್ಷಣೆಗೆ ಜನರು ಕೂಡ ಸಹಕಾರ ನೀಡಬೇಕಿದೆ.

## ಪ್ರಜ್ವಲ್ ಎಲ್ಲಿದ್ದಾರೆ ಅಂತ ಗೊತ್ತೇ ಇಲ್ಲ



**ಬೆಂಗಳೂರು:** ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ ದಿನೇದಿನೇ ಹೊಸ ರೂಪ ಪಡೆದುಕೊಳ್ಳುತ್ತಿದೆ.ಪ್ರಜ್ವಲ್ ರೇವಣ್ಣ ವಿದೇಶದಲ್ಲಿ ತಲೆಮರೆಸಿಕೊಂಡಿದ್ದಾರೆ.ಏಪ್ರಿಲ್ 29 ರಂದು ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹಾರಿದ್ದಾರೆ.ಆದ್ರೆ ಇದುವರೆಗೂ ಸಹ ಅವರು ಎಲ್ಲಿದ್ದಾರೆ ಎಂಬುದರ ಬಗ್ಗೆ ನಿಖರವಾದ ಮಾಹಿತಿ ಇಲ್ಲ. ಪ್ರಜ್ವಲ್‌ಗಾಗಿ ಎಸ್‌ಐಟಿ ಅಧಿಕಾರಿಗಳು ತೀವ್ರ ಹುಡುಕಾಟ ನಡೆಸುತ್ತಿದ್ದಾರೆ. ಇಂದು ರಾಜ್ಯದ ಗೃಹ ಸಚಿವ ಡಾ.ಜಿ ಪರಮೇಶ್ವರ್ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಪ್ರಜ್ವಲ್ ರೇವಣ್ಣ ಅವರು ಪ್ರಮುಖ ಆರೋಪಿ, ಅವರು ದೇಶ ಬಿಟ್ಟು ಹೋಗಿದ್ದಾರೆ. ಹಾಸನ ಜಿಲ್ಲೆಯ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಎಸ್‌ಐಟಿ ಗಂಭಿರವಾಗಿ ಪರಿಗಣಿಸಿದೆ. ಅವರನ್ನ ವಾಪಸ್ ಕರೆತರಲು ಸಿಬಿಐಗೆ ಬ್ಲೂ ಕಾರ್ನರ್ ನೋಟಿಸ್ ನೀಡಬೇಕೆಂದು ಎಸ್ ಐಟಿಯವರು ಮನವಿ ಮಾಡಿದ್ರು..ಅಂತೆಯೇ ಸಿಬಿಐ ಬ್ಲೂ ಕಾರ್ನರ್ ನೋಟಿಸ್ ಜಾರಿ ಮಾಡಿದೆ. 197 ದೇಶಗಳಲ್ಲಿ ಇಂಟರ್ ಪೋಲ್ ನಿಂದ ಬ್ಲೂ ಕಾರ್ನರ್ ನೋಟಿಸ್ ಹೋಗಿದೆ ಎಂದು ತಿಳಿಸಿದರು. ಕಾರ್ತಿಕ್ ಗೌಡ ಇಲ್ಲಿಯೇ ಇದ್ದಾರೆ. ಅವರು ಹೇಳಿಕೆ ಕೊಟ್ಟಿದ್ದಾರೆ.ಅವರ ಬಂಧನದ ಬಗ್ಗೆ ಎಸ್ ಐಟಿ ತೀರ್ಮಾನ ಮಾಡುತ್ತೆ.ಇನ್ನು ಪ್ರಜ್ವಲ್ ಎಲ್ಲಿದ್ದಾರೆ ಎಂಬುದು ಗೊತ್ತಿಲ್ಲ. ಜರ್ಮನಿಗೆ ಹೋಗಿರೋದಷ್ಟೇ ಗೊತ್ತು.ದುಬೈಗೆ ಹೋಗಿದ್ದಾರೆ ಅದೆಲ್ಲ ಗೊತ್ತಿಲ್ಲ, ಇನ್ನೂ ನಿಖರವಾಗಿ ಎಲ್ಲಿದ್ದಾರೆ ಗೊತ್ತಿಲ್ಲ ಎಂದು ಹೇಳಿದ್ರು.

## ಬೆಳ್ತಂಗಡಿ ಮಾಜಿ ಶಾಸಕ, ಕೈ ನಾಯಕ ವಸಂತ ಬಂಗೇರ ನಿಧನ



**ಮಂಗಳೂರು:** ಬೆಳ್ತಂಗಡಿ ಮಾಜಿ ಶಾಸಕ ಕೆ.ವಸಂತ ಬಂಗೇರ(79) ನಿಧನರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಪ್ರಭಾವಿ ನಾಯಕರಾಗಿ ಗುರುತಿಸಿಕೊಂಡಿದ್ದ ವಸಂತ ಬಂಗೇರ ನಿನ್ನೆ ಸಂಜೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಬೆಳ್ತಂಗಡಿಯಲ್ಲಿ ಐದು ಬಾರಿಯ ಶಾಸಕರಾಗಿದ್ದ ಕೆ.ವಸಂತ ಬಂಗೇರ ದೀರ್ಘ ಕಾಲದ ಅನಾರೋಗ್ಯದಿಂದ ಬಳಲುತ್ತಿದ್ದರು.ಇತ್ತೀಚೆಗೆ ಬಂಗೇರ ಆರೋಗ್ಯ ತೀವ್ರವಾಗಿ ಹದಗೆಟ್ಟಿತ್ತು.ಬೆಂಗಳೂರಿನ ಆಸ್ಪತ್ರೆಯಲ್ಲಿ ಕಳೆದ ಹಲವು ತಿಂಗಳಿನಿಂದ ನಿರಂತರ ಚಿಕಿತ್ಸೆ ನಡೆಯುತ್ತಿತ್ತು. ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಗುರುವಾರ ಮುಂಜಾನೆ ಪಾರ್ಥಿವ ಶರೀರ ಬೆಳ್ತಂಗಡಿಗೆ ಆಗಮಿಸಲಿದ್ದು ನಂತರ ಸಾರ್ವಜನಿಕರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳಲ್ಲಿ ಚುನಾವಣೆಗೆ ನಿಂತು ಗೆಲವು ಸಾಧಿಸಿ ಬಂಗೇರ ದಾಖಲೆ ಬರೆದಿದ್ದರು.

## ಬಿಎಸ್ ಪಿಯ ಉತ್ತರಾಧಿಕಾರಿ ಸ್ಥಾನದಿಂದ ಕೆಳಗಿಳಿದ ಬಳಿಕ ಆಕಾಶ್ ಆನಂದ್



**ಸೀತಾಪುರ:** ಬಹುಜನ ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಂಚಾಲಕ ಹಾಗೂ ಉತ್ತರಾಧಿಕಾರಿ ಹುದ್ದೆಯಿಂದ ಕೆಳಗಿಳಿದ ಬಳಿಕ ಮಾಯಾವತಿ ಸೋದರಳಿಯ ಆಕಾಶ್ ಆನಂದ್ ಮೊದಲ ಬಾರಿಗೆ ಪ್ರತಿಕ್ರಿಯಿಸಿದ್ದಾರೆ. ತಮ್ಮ ಕೊನೆಯ ಉಸಿರು ಇರುವವರೆಗೂ ಭೀಮ್ ಮಿಷನ್ ಮತ್ತು ಅವರ ಸಮಾಜಕ್ಕಾಗಿ ಹೋರಾಟ ಮಾಡುತ್ತೇನೆ ಎಂದು ಹೇಳಿದರು. ಬಿಎಸ್ಪಿ ನಾಯಕಿ ಮತ್ತು ಪಕ್ಷದ ಮುಖ್ಯಸ್ಥೆ ಮಾಯಾವತಿ ಅವರ ನಿರ್ಧಾರದ ನಂತರ ಆಕಾಶ್ ಆನಂದ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ಮಾಯಾವತಿ, ನೀವು ಇಡೀ ಬಹುಜನ ಸಮುದಾಯಕ್ಕೆ ಮಾದರಿಯಾಗಿದ್ದೀರಿ, ಕೋಟಿಗಟ್ಟಲೆ ದೇಶವಾಸಿಗಳು ನಿಮ್ಮನ್ನು ಆರಾಧಿಸುತ್ತಾರೆ. ನಿಮ್ಮ ಹೋರಾಟಗಳಿಂದಾಗಿಯೇ ಇಂದು ನಮ್ಮ ಸಮಾಜಕ್ಕೆ ಇಷ್ಟೊಂದು ರಾಜಕೀಯ ಶಕ್ತಿ ಸಿಕ್ಕಿದ್ದು ಬಹುಜನ ಸಮಾಜ ಗೌರವದಿಂದ ಬದುಕಲು ಕಲಿತುಕೊಂಡಿದೆ ಎಂದು ಬರೆದಿದ್ದಾರೆ. ಭೀಮ್ ಮಿಷನ್ ಮತ್ತು ನನ್ನ ಸಮಾಜಕ್ಕಾಗಿ ನಾನು ನನ್ನ ಕೊನೆಯ ಉಸಿರು ಇರುವವರೆಗೂ ಹೋರಾಡುತ್ತೇನೆ ಎಂದರು. ಸೀತಾಪುರದಲ್ಲಿ ಉದ್ರೇಕಕಾರಿ ಭಾಷಣ ಮಾಡಿದ್ದ ಹಿನ್ನೆಲೆಯಲ್ಲಿ ಮಾಯಾವತಿ ಆಕಾಶ್ ಆನಂದ್ ವಿರುದ್ಧ ಈ ರೀತಿಯ ಕ್ರಮ ಕೈಗೊಂಡಿದ್ದರು. ಕಳೆದ ವರ್ಷ ಡಿಸೆಂಬರ್‌ನಲ್ಲಿ ಲಕ್ನೋದಲ್ಲಿ ನಡೆದ ಪದಾಧಿಕಾರಿಗಳ ಸಮ್ಮೇಳನದಲ್ಲಿ ಮಾಯಾವತಿ ಅವರು ಆಕಾಶ್ ಆನಂದ್ ಅವರನ್ನು ತಮ್ಮ ಉತ್ತರಾಧಿಕಾರಿ ಎಂದು ಘೋಷಿಸಿದ್ದರು. ಔಪಚಾರಿಕ ಘೋಷಣೆಯನ್ನು ನಾಲ್ಕು ತಿಂಗಳ ಹಿಂದೆ ಮಾಡಲಾಗಿದ್ದರೂ, ಆಕಾಶ್ ಸುಮಾರು ಏಳು ವರ್ಷಗಳಿಂದ ಅತ್ತೆಯ ಮಾರ್ಗದರ್ಶನದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಶಿಷ್ಯವೃತ್ತಿ ಹೊಂದಿದ್ದರು ಎಂದು ವರದಿ ಸೇರಿಸಲಾಗಿದೆ. ಬಿಎಸ್‌ಪಿ ನಾಯಕಿ ಮಾಯಾವತಿ ಅವರ ಕಿರಿಯ ಸಹೋದರ ಆನಂದ್ ಕುಮಾರ್ ಅವರ ಪುತ್ರ, ಆಕಾಶ್ ಆನಂದ್ ಲಂಡನ್‌ನ ಪ್ರತಿಷ್ಠಿತ ಕಾಲೇಜಿನಲ್ಲಿ ಎಂಬಿಎ ಪದವಿ ಪಡೆದಿದ್ದಾರೆ. ಹಲವಾರು ವರ್ಷಗಳಿಂದ ಪಕ್ಷದ ವ್ಯವಹಾರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ, ಯುವಕರೊಂದಿಗೆ ಸಂಪರ್ಕ ಸಾಧಿಸುವ ಬದ್ಧತೆಯನ್ನು ಪ್ರದರ್ಶಿಸಿದ್ದಾರೆ.

# ಎಸ್‌ಐಟಿ ದೇವರಾಜೇಗೌಡನನ್ನು ಎಳೆದುಕೊಂಡು ಹೋಗ್ಬೇಕು



**ಬೆಂಗಳೂರು:** ಬಿಜೆಪಿ ಮುಖಂಡ ದೇವರಾಜೇಗೌಡ ಆಡಿಯೋ ಬಾಂಬ್‌ಗೆ ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಸ್ಪಷ್ಟನೆ ನೀಡಿದ್ದಾರೆ. ಡಿಸಿಎಂ ಡಿಕೆಶಿವಕುಮಾರ್ ಹತ್ತಿರ ಮಾತಾಡಿಸಿದ್ದು ನಿಜ ಅಂತ ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲದೇ ವಿಶೇಷ ತನಿಖಾ ತಂಡ ಮೊದಲು ದೇವರಾಜೇಗೌಡನ ಎಳೆದುಕೊಂಡು ಹೋಗಬೇಕು ಎಂದು ಹೇಳಿದ್ದಾರೆ.

ಖಾಸಗಿ ಹೋಟೆಲ್‌ಗೆ ದೇವರಾಜೇಗೌಡ ಬಂದಿದ್ದ.ವಿಶೇಷ ತನಿಖಾ ತಂಡದ ತನಿಖೆ ತಡೆಯಾಜ್ಞೆ ತರುತ್ತಾರೆ ಎಂದು ಹೇಳಿದ್ದ. ಅದಕ್ಕಾಗಿ ಶಿವಕುಮಾರ್‌ರನ್ನು ಭೇಟಿ ಮಾಡಿಸಿ ಅಂತ ಕೇಳಿಕೊಂಡ.ಆಗ ಡಿಕೆಶಿಗೆ ಫೋನ್ ಮಾಡಿ ಭೇಟಿಗೆ ಕೇಳಿದೆ.ಡಿಕೆಶಿ ನಿರಾಕರಿಸಿದರು.ನಾನೇ ಒತ್ತಾಯ ಮಾಡಿ ನೀವೊಬ್ಬರು ಡಿಸಿಎಂ ಆಗಿ ಭೇಟಿ ಮಾಡಿಲ್ಲ ಅಂದರೆ ಹೇಗೆ ಅಂತ ಕೇಳಿದೆ. ಆಗ ಅಲ್ಲಿಂದಲೇ ದೇವರಾಜೇಗೌಡಗೆ ಕಾಲ್ ಮಾಡಿ ಡಿಕೆಶಿಗೆ ಫೋನ್ ಕೊಟ್ಟೆ.ನಿನ್ನ ಬಳಿ ಏನಿದೆ ಅದನ್ನು ಎಸ್‌ಐಟಿಗೆ ಕೊಡಿ ಅಂತ ಡಿಕೆಶಿ ಹೇಳಿದ್ರು ಅಷ್ಟೇ ಎಂದರು.

ದೇವರಾಜೇಗೌಡಗೆ ಕ್ಯಾಬಿನೆಟ್ ದರ್ಜೆಯ ಆಮಿಷ ನೀಡಿಲ್ಲ. ಆತ ಗ್ರಾಮ ಪಂಚಾಯತ್ ಸದಸ್ಯ ಆಗಲು ಲಾಯಕ್ ಇಲ್ಲ. ಅವನ ಮೈ ಎಲ್ಲಾ ಕ್ಯಾಮೆರಾ ರೀತಿಯಲ್ಲಿ ಮಾಡಿಕೊಂಡಿದ್ದಾನೆ. ಪೆನ್ ಡ್ರೈವ್ ಹೆಸರು ಹೇಳಿಕೊಂಡು ದೇವರಾಜೇಗೌಡ 80 ಕೋಟಿ ರೂ.ವರೆಗೆ ಆಸ್ತಿ ಮಾಡಿಕೊಂಡಿದ್ದಾನೆ. 2 ತಿಂಗಳ ಕಾಲ್ ಲಿಸ್ಟ್ ತೆಗೆಸಿದ್ರೆ ಎಲ್ಲ ಸತ್ಯ ಹೊರಬರಲಿದೆ ಎಂದು ತಿಳಿಸಿದರು.

ಡ್ರೈವರ್ ಕಾರ್ತಿಕ್ ಕಳೆದ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಆಸ್ತಿ ವಿಚಾರವಾಗಿ ಭೇಟಿ ಮಾಡಿದ್ದ. ಅದನ್ನು ಬಿಟ್ಟರೆ ಮತ್ತೆ ಭೇಟಿಯಾಗಿಲ್ಲ. ದೇವರಾಜೇಗೌಡ ಬಿಟ್ಟಿರುವ ಆಡಿಯೋ ಕಟ್ ಮಾಡಿ ಬಿಟ್ಟಿದ್ದಾನೆ. ಅದನ್ನು ಪೂರ್ತಿ ಬಿಡುಗಡೆ ಮಾಡಲಿ.ಆರೋಪ ಸಾಬೀತು ಮಾಡಿದ್ರೆ ರಾಜಕೀಯದಿಂದಲೇ ನಿವೃತ್ತಿ ಆಗುತ್ತೇನೆ. ಈ ಬಗ್ಗೆ ಬಹಿರಂಗ ಚರ್ಚೆಗೂ ಸಿದ್ಧ ಇದ್ದೇನೆ ಅಂತ ಶಿವರಾಮೇಗೌಡ ಸವಾಲ್ ಹಾಕಿದ್ದಾರೆ.

## ಅನ್ಯಕೋಮಿನ ಯುವತಿಯೊಂದಿಗೆ ಯುವಕ ಲವ್ ಮ್ಯಾರೇಜ್

# ಹಿಂದೂ ಕಾರ್ಯಕರ್ತರು, ಪೊಲೀಸರ ನಡುವೆ ಘರ್ಷಣೆ!



**ಬಾಗಲಕೋಟೆ:** ಅನ್ಯಕೋಮಿನ ಯುವಕ–ಯುವತಿ ನಡುವಿನ ಪ್ರೇಮ ವಿವಾಹವೊಂದು ಹಿಂದೂಪರ ಸಂಘಟನೆ ಹಾಗೂ ಪೊಲೀಸರ ನಡುವೆ ಸಂಘರ್ಷಕ್ಕೆ ಕಾರಣವಾದ ಘಟನೆ ಬಾಗಲಕೋಟೆಯ ನವನಗರದ ನಗರಸಭೆ ಎದುರು ನಡೆದಿದೆ.

ಬಾದಾಮಿ ಮೂಲದ ಯುವಕ ಮತ್ತು ಯುವತಿ ದೇವಸ್ಥಾನದಲ್ಲಿ ಪ್ರೇಮ ವಿವಾಹವಾಗಿದ್ದು, ರಕ್ಷಣೆ ಕೋರಿ ಎಸ್‌ಪಿ ಕಚೇರಿಗೆ ಧಾವಿಸಿದ್ದಾರೆ. ವಿಷಯ ತಿಳಿದ ಹಿಂದೂ ಸಂಘಟನೆ ಕಾರ್ಯಕರ್ತರು ಎಸ್ಪಿ ಕಚೇರಿಗೆ ದೌಡಾಯಿಸಿದ್ದರು. ಇದೇ ವೇಳೆ ಯುವತಿಯ ಮನೆಯವರೂ ಅಲ್ಲಿಗೆ ಬಂದಿದ್ದಾರೆ.ಈವೇಳೆ ಹಿಂದೂ ಕಾರ್ಯಕರ್ತರು–ಯುವತಿ ಮನೆಯವರ ನಡುವೆ ವಾಗ್ವಾದ ಏರ್ಪಟ್ಟಿತ್ತು.ಈ ವೇಳೆ ಮಧ್ಯೆ ಪ್ರವೇಶಿಸಿದ ನವನಗರ ಸಿಪಿಐ ರಾಮಣ್ಣ ಬಿರಾದಾರ್, ಎರಡೂ ಗುಂಪಿನವರನ್ನ ಚದುರಿಸಲು ಪ್ರಯತ್ನಿಸಿದಾಗ, ಹಿಂದೂ ಕಾರ್ಯಕರ್ತ ಕುಮಾರಸ್ವಾಮಿ ಹಾಗೂ ಸಿಪಿಐ ಬಿರಾದಾರ್ ನಡುವೆ ವಾಗ್ವಾದ ಏರ್ಪಡೆ. ಅಲ್ಲದೇ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಈ ವೇಳೆ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಲು ಪ್ರಯತ್ನಿಸಿದ್ದಾರೆ.ಆದ್ರೆ ಈ ಮದುವೆಗೆ ಒಪ್ಪದ ಹಿಂದೂ ಕಾರ್ಯಕರ್ತರು ಸಿಪಿಐ ಬಿರಾದಾರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆಗೆ ಮುಂದಾಗಿದ್ದಾರೆ.ಆಗ ಪೊಲೀಸರ ಮೇಲೆ ಕಲ್ಲು ತೂರಾಟ ನಡೆದಿದ್ದರಿಂದ ಸ್ಥಳದಲ್ಲಿ ವಾತಾವರಣ ಉದ್ವಿಗ್ನಗೊಂಡಿದೆ.ನಂತರ ಪೊಲೀಸರು ಕೆಲವರನ್ನ ವಶಕ್ಕೆ ಪಡೆಯಲು ಮುಂದಾಗಿದ್ದಾರೆ. ಇದರಿಂದ ಪರಿಸ್ಥಿತಿ ಮತ್ತಷ್ಟು ವಿಕೋಪಕ್ಕೆ ತಿರುಗಿ, ರೊಚ್ಚಿಗೆದ್ದ ಹಿಂದೂ ಕಾರ್ಯಕರ್ತರು ಪ್ರತಿಭಟನೆಗೆ ಮುಂದಾಗಿದ್ದಾರೆ. ಪರಿಸ್ಥಿತಿ ಉದ್ವಿಗ್ನಗೊಳ್ಳುತ್ತಿದ್ದಂತೆ ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದಾರೆ.ಕೂಡಲೇ ಸ್ಥಳಕ್ಕೆ ಧಾವಿಸಿದ ಎಸ್‌ಪಿ ಅಮರನಾಥ ರೆಡ್ಡಿ ಹೆಚ್ಚುವರಿ ಪೊಲೀಸ್ ಅಧಿಕಾರಿಗಳನ್ನ ಭದ್ರತೆಗೆ ನಿಯೋಜಿಸಿದ್ದಾರೆ.

# ಬೀಳ್ಕೊಡುಗೆ ಸಮಾರಂಭ



**ಮಡಿಕೇರಿ:** ಕರ್ನಾಟಕ ಗ್ರಾಮೀಣ ಬ್ಯಾಂಕ್ ವಲಯ ಅಧಿಕಾರಿಗಳಾದ ಚಿಕ್ಕರಂಗಯ್ಯನವರಿಗೆ ಬೀಳ್ಕೊಡುಗೆ ಸಮಾರಂಭ ನಡೆಯಿತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಚಿಕ್ಕರಂಗಯ್ಯನವರು ತಮ್ಮ ಸುದೀರ್ಘ ಸೇವಾ ಅವಧಿಯಲ್ಲಿ ತಮಗಾದ ಸಿಹಿ–ಕಹಿ ಅನುಭವಗಳನ್ನು ಸಿಬ್ಬಂದಿಗಳ ಜೊತೆ ಹಂಚಿಕೊಂಡರು.ತಾವು ನನಗೆ ನೀಡಿದ ಸಹಕಾರವನ್ನು ಮುಂದಿನ ಅಧಿಕಾರಿಗಳಿಗೂ ನೀಡಿ, ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಿ ಎಂದು ಹೇಳಿದರು.

ಇದೇ ಸಮಯದಲ್ಲಿ ಕಣಗಾಲು ಶಾಖೆಯ ಮ್ಯಾನೇಜರ್ ಹರ್ಷನ್‌ರವರು ಚಿಕ್ಕರಂಗಯ್ಯನವರಿಗೆ ತಮ್ಮ ಶಾಖೆಯ ವತಿಯಿಂದ ಸನ್ಮಾನಿಸಿ ಮಾತನಾಡುತ್ತಾ, ಇವರ ಸೇವಾ ಅವಧಿಯಲ್ಲಿ ತಮ್ಮ ಸಿಬ್ಬಂದಿಗಳಿಗೆ ಯಾವ ತೊಂದರೆಯನ್ನೂ ಕೊಡದೆ ಸ್ನೇಹದಿಂದ ನಡೆಸಿಕೊಂಡರು.ಉತ್ತಮ ಕೆಲಸಗಾರರು ಯಾರಿಗೂ ವೈಯಕ್ತಿಕವಾಗಿ ನೋವು ಕೊಡುವ ಕೆಲಸ ಮಾಡಲಿಲ್ಲ. ಇವರ ಮುಂದಿನ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ಸಭೆಯಲ್ಲಿ ಅಧಿಕಾರಿಗಳಾದ ವಿಶ್ವಾಸ್ ಹಾಗೂ ಶಿವಪ್ರಸಾದ್ ಮತ್ತು ಎಲ್ಲಾ ಶಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದು ಶುಭಕೋರಿದರು.

## ಕರ್ನಾಟಕದಲ್ಲಿ ಸಾರ್ವಕಾಲಿಕ ದಾಖಲೆ ಮತದಾನ

**ಬೆಂಗಳೂರು:** 2024ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ದಾಖಲೆ ಮತದಾನ ಆಗಿದೆ.ಚುನಾವಣೆ ಆರಂಭವಾದಾಗಿನಿಂದ ಇಲ್ಲಿ ತನಕ ನಡೆದ ಎಲ್ಲ ಚುನಾವಣೆಗಳ ದಾಖಲೆಯನ್ನೂ ಮತದಾರ ಅಳಿಸಿದ್ದಾನೆ. ಎರಡನೇ ಹಂತದ ಚುನಾವಣೆ ನಡೆದ 14 ಕ್ಷೇತ್ರಗಳಲ್ಲಿ 71.84% ಮತದಾನವಾಗಿದ್ದು, ಮೊದಲ ಹಂತದ ಚುನಾವಣೆ ನಡೆದ 14 ಕ್ಷೇತ್ರಗಳಲ್ಲಿ ದಾಖಲಾಗಿದ್ದ 69.56% ಮತದಾನವನ್ನ ಉತ್ತರ ಕರ್ನಾಟಕದ ಮತದಾರರು ಹಿಂದಿಕ್ಕಿದ್ದಾರೆ.ಕಳೆದ ಬಾರಿಗಿಂತ 2ರಷ್ಟು ಮತದಾನ ಪ್ರಮಾಣ ಹೆಚ್ಚಳವಾಗಿದೆ.

2014ರ ಲೋಕಸಭಾ ಚುನಾವಣೆಯ ಮೊದಲ ಹಂತದಲ್ಲಿ 67.73% ಮತದಾನವಾದರೆ, 2019ರಲ್ಲಿ 68.96% ರಷ್ಟು ಮತದಾನವಾಗಿತ್ತು. ಇನ್ನು 2014ರ ಎರಡನೇ ಹಂತದಲ್ಲಿ 66.62 % ಹಾಗೂ 2019ರಲ್ಲಿ 68.65% ಮತದಾನವಾಗಿತ್ತು. ಒಟ್ಟಾರೆಯಾಗಿ 2014ರ ಲೋಕಸಭಾ ಚುನಾವಣೆಯಲ್ಲಿ 67.20% ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿ 68.81% ಮತದಾನವಾಗಿತ್ತು.ಈ ಎರಡೂ ಶೇಕಡವಾರು ಮತದಾನವನ್ನು ನೋಡಿದರೆ ಈ ಬಾರಿ ಶೇಕಡವಾರು ಮತದಾನದಲ್ಲಿ ಹೆಚ್ಚಳವಾಗಿದೆ.

## 7 ದಿನಗಳ ಒಳಗಡೆ ವಿಚಾರಣೆಗೆ ಹಾಜರಾಗಿ ನಡ್ಡಾ, ವಿಜಯೇಂದ್ರಗೆ ಸಮನ್ಸ್



**ಬೆಂಗಳೂರು:** ಬಿಜೆಪಿ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ, ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, ಪಕ್ಷದ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಅವರಿಗೆ ಬೆಂಗಳೂರು ಪೊಲೀಸರು ಸಮನ್ಸ್ ಜಾರಿ ಮಾಡಿದ್ದಾರೆ.

ನೋಟಿಸ್ ತಲುಪಿದ 7 ದಿನಗಳ ಒಳಗಾಗಿ ಬೆಳಗ್ಗೆ 11 ಗಂಟೆ ವೇಳೆಗೆ ನಗರದ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್‌ನಲ್ಲಿ ಸೂಚಿಸಲಾಗಿದೆ.

ಜನ ಪ್ರತಿನಿಧಿಗಳ ಕಾಯ್ದೆ ಹಾಗೂ ಸೆಕ್ಷನ್ 505 (2) (ವರ್ಗಗಳ ನಡುವೆ ದ್ವೇಷ, ದ್ವೇಷ ಅಥವಾ ದುಶ್ಚಟವನ್ನು ಸೃಷ್ಟಿಸುವ ಅಥವಾ ಉತ್ತೇಜಿಸುವ ಹೇಳಿಕೆಗಳು) ಅಡಿಯಲ್ಲಿ ಮೂವರು ಬಿಜೆಪಿ ನಾಯಕರ ವಿರುದ್ಧ ಪ್ರಕರಣ ದಾಖಲಾಗಿತ್ತು.

## ಬಂಧನ ಭೀತಿ

ಹೆಚ್ಚಿನ ವಿಚಾರಣೆಗೆ ಹಾಜರಾಗುವಂತೆ ಕಾರು ಚಾಲಕ ಕಾರ್ತಿಕ್ ಗೌಡಗೆ ಈಗಾಗಲೇ ಎಸ್ ಐಟಿ ನೋಟಿಸ್ ನೀಡಿದೆ. ಕಾರ್ತಿಕ್ ಗೌಡ ಮಲೇಷ್ಯಾ ಹೋಗಿದ್ದಾನೆ ಎಂದು ಮಾಜಿ ಸಿಎಂ ಹೆಚ್ ಡಿ ಕುಮಾರಸ್ವಾಮಿ ಆರೋಪಿಸಿದ್ದರು. ಬಳಿಕ ಪ್ರತ್ಯಕ್ಷವಾಗಿದ್ದ ಕಾರ್ತಿಕ್ ಗೌಡ ನಾನು ಎಲ್ಲಿಯೂ ಹೋಗಿಲ್ಲ ಎಂದು ಸ್ಪಷ್ಟನೆ ನೀಡಿದ್ದರು. ಪ್ರಜ್ವಲ್ ರೇವಣ್ಣ ಡ್ರೈವರ್ ಆಗಿದ್ದ ಕಾರ್ತಿಕ್ ಜತೆ ಕೈ ಅಭ್ಯರ್ಥಿ ಶ್ರೇಯಸ್ ಪಟೇಲ್ ಇರುವ ಫೋಟೋಗಳು ವೈರಲ್ ಆಗಿವೆ. ಈ ಬಗ್ಗೆ ಮಾತನಾಡಿದ್ದ ಶ್ರೇಯಸ್, ದೇವರಾಜೇಗೌಡ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಆದರೆ ಈಗ ಡಿಕೆ ಶಿವಕುಮಾರ್‌ಗೆ ಪೆನ್‌ಡ್ರೈವ್ ತಲುಪಿಸಿದ್ದ ಆರೋಪ ಹೊತ್ತಿರುವ ಪುಟ್ಟರಾಜು ಜೊತೆಗೂ ಕಾಣಿಸಿಕೊಂಡಿದ್ದಾರೆ. ಪುಟ್ಟರಾಜ್ ಮನೆಯಲ್ಲಿ ಊಟ ಮಾಡಿದ್ದಾರೆ ಎನ್ನಲಾದ ಫೋಟೋ ವೈರಲ್ ಆಗಿವೆ.

## ಎಸ್‌ಐಟಿ ನೋಟಿಸ್

ಇದರ ಬೆನ್ನಲ್ಲೇ ಹಾಸನ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಜೊತೆ ಕಾರ್ತಿಕ್ ಇರುವ ಫೋಟೋಗಳನ್ನ ಜೆಡಿಎಸ್ ರಿಲೀಸ್ ಮಾಡಿದೆ.

## ರೇವಣ್ಣ

ರಾಜಕಾರಣಿಯಾಗಿ, ಶಾಸಕರಾಗಿ ಐಷಾರಾಮಿ ಜೀವನ ನಡೆಸಿದ್ದ ರೇವಣ್ಣ, ಸೆಂಟ್ರಲ್ ಜೈಲಿನ ಕ್ವಾರಂಟೈನ್ ಸೆಲ್ ನಲ್ಲಿ 1 ರಾತ್ರಿ ಕಾಲ ಕಳೆದಿದ್ದಾರೆ. ರಾತ್ರಿ ನೀಡಿದ್ದ ಮುದ್ದೆ, ಚಪಾತಿ, ರೈಸ್, ಸಾಂಬಾರ್ ತಡವಾಗಿ ಸೇವಿಸಿದ್ದಾರೆ. ಇತರೆ ಕೈದಿಗಳಂತೆ ಜೈಲಿನಲ್ಲಿ ನೀಡುವ ಊಟವನ್ನೇ ಅವರು ಸೇವಿಸಿದ್ದಾರೆ. ಮನೆಯವರು ತಂದು ಕೊಟ್ಟಿರುವ ಬಟ್ಟೆಯನ್ನು ಪಡೆದಿದ್ದಾರೆ.

## ಸವಾಲು ಹಾಕಿದ ಸ್ಮೃತಿ

ರಾಜ್ಯದಲ್ಲಿ 2022 ರ ಅಸೆಂಬ್ಲಿ ಚುನಾವಣೆಯಲ್ಲಿ, ರಾಯ್ ಬರೇಲಿ ಅಡಿಯಲ್ಲಿ ಕಾಂಗ್ರೆಸ್ ಯಾವುದೇ ವಿಧಾನಸಭಾ ಸ್ಥಾನವನ್ನು ಗೆಲ್ಲಲು ಸಾಧ್ಯವಾಗಲಿಲ್ಲ.

## 3,000 ಕೋಟಿ ರೂ. ನಿರೀಕ್ಷೆ

ಏತನ್ಮಧ್ಯೆ, ಜಲ ಮಂಡಳಿಯು ಹೊಸ ಒಳಚರಂಡಿ ಜಾಲಗಳು ಮತ್ತು ಕೊಳಚೆನೀರಿನ ಸಂಸ್ಕರಣಾ ಘಟಕಗಳನ್ನು ರಚಿಸಲು ತಮ್ಮ ನಿಯೋಜಿತ ಹಣವನ್ನು ಬಳಸಿಕೊಳ್ಳಲಿದೆ.

ಜಲ ಮಂಡಳಿಯು ಈ ಹಿಂದೆ ಹಲವು ಬಾರಿ ವಿಶ್ವಬ್ಯಾಂಕ್ ನಿಧಿಯನ್ನು ಬಳಸಿಕೊಂಡಿದ್ದರೂ, ಬಿಬಿಎಂಪಿಗೆ ಇದು ಮೊದಲ ಅನುಭವವಾಗಿದೆ. ಮಾಸಾಂತ್ಯದ ವೇಳೆಗೆ ವಿಶ್ವಬ್ಯಾಂಕ್ ನೊಂದಿಗೆ ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಹಂಚಿಕೊಳ್ಳಲಾಗುವುದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎರಡು ಏಜೆನ್ಸಿಗಳಿಗೆ ಸಾಲದ ರೂಪದ ನಿಧಿಯ ಜೊತೆಗೆ ವಿಶ್ವಬ್ಯಾಂಕ್, ಕರ್ನಾಟಕದಲ್ಲಿ ಪ್ರವಾಹ ಪರಿಸ್ಥಿತಿ ತಡೆಗಟ್ಟುವ ಯೋಜನೆಗಳಿಗಾಗಿ 2,000 ಕೋಟಿ ರೂಪಾಯಿಗಳನ್ನು ನೀಡಲಿದೆ ಎಂದು ತಿಳಿದುಬಂದಿದೆ. ಇದಕ್ಕಾಗಿ ಕರ್ನಾಟಕ ಕಂದಾಯ ಇಲಾಖೆ ವಿಶ್ವಬ್ಯಾಂಕ್ ಜತೆ ಮಾತುಕತೆ ನಡೆಸುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರಿನಲ್ಲಿ ಹಠಾತ್ ಪ್ರವಾಹ ಪುನರಾವರ್ತನೆಯಾಗುತ್ತಿದೆ. ಇದು ಜನರ ಜೀವ ಮತ್ತು ಆಸ್ತಿಗೆ ಅಪಾಯವನ್ನುಂಟುಮಾಡುತ್ತಿದೆ.

### ಮೊದಲನೇ ಪುಟದಿಂದ...

## ಮೀನುಗಳ ಮಾರಣಹೋಮ

ಕೆರೆ ಒಣಗಿ ಹೋಗಿರುವುದರಿಂದ ಬರೀ ಮೀನುಗಳ ಮಾರಣಹೋಮವಾಗಿಲ್ಲ, ಇದೇ ಕೆರೆ ನಂಬಿಕೊಂಡು ಕೃಷಿ ಮಾಡ್ತಿದ್ದ ರೈತರು ಕೂಡ ಕಂಗಾಲಾಗಿದ್ದಾರೆ. ಕೆರೆ ಒಣಗಿದ್ರಿಂದ ನೀರಿಲ್ಲದೇ ಕೆರೆ ಸುತ್ತ ಮುತ್ತಲಿನ ನೂರಾರು ಎಕರೆ ಪ್ರದೇಶದಲ್ಲಿ ರೈತರು ಬಿತ್ತನೆ ಮಾಡಲಾಗದೇ ಕಣ್ಣೀರಿಡ್ತಿದ್ದಾರೆ. ಕೂಡಲೇ ಸರ್ಕಾರ, ಅಧಿಕಾರಿಗಳು ಎಚ್ಚೆತ್ತುಕೊಂಡು ಪರಿಹಾರ ನೀಡಬೇಕಿದೆ.

## ಅತಿಸಾರ ಆರ್ಭಟ

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಅತಿಸಾರ ಸೋಂಕಿನ ಪ್ರಕರಣ ರಾಜ್ಯದಲ್ಲಿ 52 ಸಾವಿರದ ಗಡಿ ದಾಟಿದೆ. ಕಳೆದೊಂದು ವಾರದಿಂದ ಅತಿಸಾರ ಪ್ರಕರಣಗಳ ಸಂಖ್ಯೆ ವ್ಯಾಪಕ ಹೆಚ್ಚಳ ಕಂಡಿದೆ. ಹೆಚ್ಚುತ್ತಿರುವ ತಾಪಮಾನ ಹವಾಮಾನ ಬದಲಾವಣೆಯಿಂದ ಅತಿಸಾರ ಕಾಯಿಲೆಯ ಹರಡುವಿಕೆ ಹೆಚ್ಚಾಗುತ್ತಿದೆ. ಇನ್ನು ಹಾಸನ ಜಿಲ್ಲೆಯಲ್ಲಿ ಕ್ಲಸ್ಟರ್ ಪ್ರಮಾಣದಲ್ಲಿ ಅತಿಸಾರ ಕೇಸ್ ಹೆಚ್ಚಳವಾಗಿದ್ದು ಇಬ್ಬರು ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಹೀಗಾಗಿ ಆರೋಗ್ಯ ಇಲಾಖೆ ಆ ಭಾಗದಲ್ಲಿ ನೀರು ಆಹಾರದ ಕುರಿತು ಅಧ್ಯಯನಕ್ಕೆ ಕೂಡಾ ಮುಂದಾಗಿದೆ. ಮತ್ತೊಂದೆಡೆ ಬೆಂಗಳೂರಿನಲ್ಲಿ ಅತಿಸಾರ ಕೇಸ್ ಏರಿಕೆಯ ಮೇಲೆಯೂ ನಿಗಾವಹಿಸಲಾಗಿದೆ.

ಕಲುಷಿತ ನೀರು, ಅತಿಯಾದ ಆಹಾರ ಸೇವನೆ ಕೂಡಾ ರಾಜಧಾನಿಯಲ್ಲಿ ಅತಿಸಾರ ಪ್ರಕರಣ ಏರಿಕೆಯಾಗಲು ಕಾರಣವಾಗಿದೆ. ಬೇಸಿಗೆ ರಜೆ ಹಿನ್ನಲೆ ಮಕ್ಕಳು ಮನೆಯಲ್ಲಿದ್ದು ಕಲುಷಿತ ನೀರು ಹಾಗೂ ಆಹಾರದಿಂದ ಅತಿಸಾರ ಕಂಡು ಬರ್ತಿದೆ. ಮಕ್ಕಳಲ್ಲಿ ಅತಿಸಾರದಿಂದ ಮಗುವಿನ ಜೀರ್ಣಾಂಗಗಳಲ್ಲಿ ಸಮಸ್ಯೆ ಕೂಡಾ ಕಂಡು ಬರ್ತಿವೆ. ಹೀಗಾಗಿ ಅತಿಸಾರದ ಲಕ್ಷಣಗಳಾದ ವಾಂತಿ ಭೇದಿ, ಹೊಟ್ಟೆಯಲ್ಲಿ ಸೆಳೆತ ಅಥವಾ ಉಬ್ಬುವುದು ಕರುಳಿನ ನೋವು ಸುಸ್ತು ಮೈ ಕೈ ನೋವು ಜ್ವರ ವಾಕರಿಕೆ ಕಂಡು ಬಂದ್ರೆ ತಕ್ಷಣ ವೈದ್ಯರನ್ನ ಸಂಪರ್ಕ ಮಾಡಿ ಸೂಕ್ತ ಚಿಕಿತ್ಸೆ ಪಡೆಯುವಂತೆ ವೈದ್ಯರು ಸಲಹೆ ನೀಡಿದ್ದಾರೆ. ಇನ್ನು ನಗರದಲ್ಲಿ ಕಾಲರಾ ಕೇಸ್ ಪತ್ತೆ ಹಿನ್ನಲೆ ವಾಂತಿ, ಭೇದಿಯಿಂದ ಆಸ್ಪತ್ರೆಗೆ ದಾಖಲಾಗುವ ರೋಗಿಗಳ ಮಲದ ಸ್ಯಾಂಪಲ್ಸ್ ಪಡೆದು ಕಲ್ಚರ್ ಟೆಸ್ಟ್ ಗೆ ಕೂಡಾ ಕಳಿಸಲಾಗುತ್ತಿದೆ, ವಾಂತಿ, ಭೇದಿಯಿಂದ ಆಸ್ಪತ್ರೆಗೆ ದಾಖಲಾಗುವ ಪ್ರತಿಯೊಬ್ಬ ರೋಗಿಯ ಸ್ಯಾಂಪಲ್ಸ್ ಪಡೆದು ಕಾಲರಾ ಟೆಸ್ಟ್ ಮಾಡಲು ಆಸ್ಪತ್ರೆಗಳು ಮುಂದಾಗಿವೆ. ವಾಂತಿ, ಭೇದಿ ಜೊತೆ ಕಾಲರಾ ಕೇಸ್ ಸಮರ್ಥ ನಿರ್ವಹಣೆ ಮಾಡಲಾಗುತ್ತಿದೆ.

ವೈದ್ಯರು ಆರೋಗ್ಯದ ದೃಷ್ಠಿಯಿಂದ ಬಿಸಿ ಮಾಡಿ ಆರಿಸಿದ ನೀರು, ಶುಚಿಯಾದ ಆಹಾರ ಸೇವನೆ ಮಾಡುವಂತೆ ಸಲಹೆ ನೀಡಿದ್ದು ಜನ ಆದಷ್ಟು ಬೀದಿಬದಿಯ ಆಹಾರವನ್ನು ಸೇವಿಸದಂತೆ, ಆದಷ್ಟು ಬಿಸಿ ಮಾಡಿ ಆರಿಸಿದ ನೀರನ್ನು ಕುಡಿಯಲು ವೈದ್ಯರು ಮನವಿ ಮಾಡಿದ್ದಾರೆ.

## ಹತ್ಯೆ

ರೆಡ್ವಾನಿ ಪಯೀನ್‌ನ ನಿವಾಸಿ ಬಸಿತ್ ಅಹ್ಮದ್‌ದಾರ್, ಲಷ್ಕರ್–ಎ–ತೈಬಾ (ಎಲ್‌ಇಟಿ) ಆಫ್‌ಶೂಟ್‌ಗ್ರೂಪ್ ಮತ್ತು ದಿ ರೆಸಿಸ್ಟೆಂಟ್ ಫ್ರಂಟ್ (ಟಿಆರ್‌ಎಫ್)ನ ಕಮಾಂಡರ್ ಆಗಿದ್ದ. ನಾಗರಿಕರು ಮತ್ತು ಭದ್ರತಾ ಸಿಬ್ಬಂದಿಯ ಹತ್ಯೆಗಳಲ್ಲಿ ಭಾಗಿಯಾಗಿದ್ದರು.ದಾರ್‌ಜೊತೆ ಹತ್ಯೆಗೊಳಗಾದ ಇಬ್ಬರುಎಲ್ ಇಟಿ ಭಯೋತ್ಪಾದಕರು ಮೋಮಿನ್‌ಗುಲ್ಜಾರ್ ಮತ್ತು ಫಾಹಿಮ್ ಅಹ್ಮದ್ ಬಾಬಾ ಎಂದುಗುರುತಿಸಲಾಗಿದೆ. 18 ಹತ್ಯೆಗಳಲ್ಲಿ ಭಾಗಿಯಾಗಿದ್ದವರನ್ನುಎನ್‌ಕೌಂಟರ್ ಮಾಡಿರುವುದು ನಮಗೆ ದೊಡ್ಡ ಸಾಧನೆಯಾಗಿದೆ.ಈ ಕಾರ್ಯಾಚರಣೆಯಲ್ಲಿ ಭದ್ರತಾ ಸಿಬ್ಬಂದಿ, ನಾಗರಿಕರು ಮತ್ತುಅಲ್ಪಸಂಖ್ಯಾತರು ಸೇರಿದ್ದಾರೆಎಂದು ಕಾಶ್ಮೀರದ ಪೊಲೀಸ್ ಮಹಾನಿರೀಕ್ಷಕ ವಿ ಕೆ ಬಿರ್ಡಿ ತಿಳಿಸಿದ್ದಾರೆ.

## ಏರ್‌ಇಂಡಿಯಾ

ಮ್ಯಾನೇಜ್‌ಮೆಂಟ್ ಇಂದು ಕ್ಯಾಬಿನ್ ಸಿಬ್ಬಂದಿ ಸದಸ್ಯರೊಂದಿಗೆಟೌನ್‌ಹಾಲ್ ಸಭೆ ನಡೆಸಲಿದೆಎಂದು ಮೂಲಗಳು ತಿಳಿಸಿವೆ. 'ಯಾವುದೇ ಸಮರ್ಥನೀಯಕಾರಣವಿಲ್ಲದೆರಜೆ ಹಾಕಿರುವುದು ತಿಳಿದುಬಂದಿದೆ' ಎಂದು 25 ಸಿಬ್ಬಂದಿಯನ್ನು ವಜಾಗೊಳಿಸಿರುವ ಬಗ್ಗೆ ಏರ್‌ಲೈನ್ ಸ್ಪಷ್ಟನೆ ನೀಡಿದೆ.

ಹೆಚ್ಚಿನ ಸಂಖ್ಯೆಯ ವಿಮಾನಗಳನ್ನು ರದ್ದುಗೊಳಿಸಬೇಕಾಗಿತ್ತು. ಇದರಿಂದಾಗಿ ಸಂಪೂರ್ಣ ವೇಳಾಪಟ್ಟಿ ಬದಲಾಯಿತು. ಇದುಕಂಪನಿಯಗೌರವಾನ್ವಿತ ಪ್ರಯಾಣಿಕರಿಗೆಅನಾನುಕೂಲತೆ ಉಂಟುಮಾಡಿತು.ನಿಮ್ಮಕಾರ್ಯವು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ.ಕಂಪನಿಗೆ ತೀವ್ರ ಮುಜುಗರವಾಗಿದ್ದಲ್ಲದೇ ಹಣಕಾಸು ನಷ್ಟ ಕೂಡ ಆಗಿದೆ ಎಂದು ಸಂಸ್ಥೆ ಸ್ಪಷ್ಟಪಡಿಸಿದೆ.



## ಮಲೆಮಹದೇಶ್ವರ ಬೆಟ್ಟದಲ್ಲಿ ಜನಸಾಗರ

**ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಅಕ್ಷಯ ತದಿಗೆ ಅಮವಾಸ್ಯೆ ಹಿನ್ನಲೆಯಲ್ಲಿ ಬುಧವಾರ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪವಾಡ ಪುರುಷ ಮಹದೇಶ್ವರ ದರ್ಶನ ಪಡೆದು ವಿವಿಧ ಸೇವೆಗಳನ್ನು ಮಹದೇಶ್ವರನಿಗೆ ಸಮರ್ಪಿಸಿದರು. ಕರ್ನಾಟಕ ತಮಿಳುನಾಡು ಗಡಿ ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಲೆಮಹದೇಶ್ವರ ಬೆಟ್ಟದಲ್ಲಿ ಅಮವಾಸ್ಯೆ ದಿನದಂದು ಹೆಚ್ಚಿನ ಭಕ್ತರು ಆಗಮಿಸುವುದು ವಾಡಿಕೆ ಅದಂತೆ ಅಕ್ಷತದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವರ ದರ್ಶನ ಪಡೆಯುವ ಮೂಲಕ ಭಕ್ತಿ ಪರಕಾಷ್ಟೆ ಮೆರೆದರು.**

# ಪ್ರತಿಷ್ಠಿತ ಶಾಲೆಗಳ 6ನೇ ತರಗತಿಗೆ ಸೇರಲು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಂದ ಅರ್ಜಿ

**ಬೆಂಗಳೂರು ಗ್ರಾಮಾಂತರ:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024-25ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಿಗೆ 06ನೇ ತರಗತಿ(ಆಂಗ್ಲ ಮಾಧ್ಯಮ) ಸೇರ ಬಯಸುವ ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿಯ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಶಿಕ್ಷಣವನ್ನು ಕೊಡಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಪ್ರತಿಷ್ಠಿತ ಶಾಲೆಗಳನ್ನು ಗುರುತಿಸಿ, ಅಂತಹ ವಸತಿ ಶಾಲೆಗಳಿಗೆ ಅರ್ಹತಾ ಪರೀಕ್ಷೆಯ ಮೂಲಕ ಅರ್ಹ ವಿದ್ಯಾರ್ಥಿಗಳನ್ನು ದಾಖಲು ಮಾಡಿಸಿ, ಆ ವಿದ್ಯಾಸಂಸ್ಥೆಗಳು/ಶಾಲೆಗಳಿಗೆ ಭರಿಸಬೇಕಾದ ಎಲ್ಲಾ ರೀತಿ ಶುಲ್ಕ, ಸಮವಸ್ತ್ರ, ಪಠ್ಯಪುಸ್ತಕ, ಪ್ರವಾಸ ಭತ್ಯೆ ಮತ್ತು ಇತರೆ ವೆಚ್ಚಗಳನ್ನು ಹಾಗೂ ವಸತಿ ಮತ್ತು ಭೋಜನಾ ವೆಚ್ಚವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಭರಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಷರತ್ತುಗಳು, ಅರ್ಜಿ ನಮೂನೆ ಮತ್ತು ವಿವರಗಳನ್ನು ಉಪ ನಿರ್ದೇಶಕ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ ಮತ್ತು ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ಪಡೆದುಕೊಳ್ಳಬಹುದಾಗಿದ್ದು ಅರ್ಜಿ ಸಲ್ಲಿಸಲು ಮೇ 21 ಕೊನೆಯ ದಿನವಾಗಿದೆ.

### ವಿಶೇಷ ಸೂಚನೆ

**ಪ್ರವೇಶ ಪರೀಕ್ಷೆಯನ್ನು ದಿನಾಂಕ 28.05.2024ರಂದು ಮಂಗಳವಾರ ಬೆಳಗ್ಗೆ 10.30 ಯಿಂದ 1:30 ಗಂಟೆಯವರೆಗೆ ಸರ್ಕಾರಿ ಪದವಿ ಪೂರ್ವ ಕಾಲೇಜು ಹೊಸ ಬಸ್ ನಿಲ್ದಾಣದ ಎದುರು ದೇವನಹಳ್ಳಿ ಟೌನ್ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ನಡೆಸಲಾಗುವುದು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಡಾ.ಎನ್ ಶಿವಶಂಕರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ದೂ.ಸಂ.: 080-29787447, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ದೇವನಹಳ್ಳಿ ದೂ.ಸಂ.: 080- 27681784, ದೊಡ್ಡಬಳ್ಳಾಪುರ ದೂ.ಸಂ.: 080- 27623681, ನೆಲಮಂಗಲ ದೂ.ಸಂ.: 080- 27723172 ಹಾಗೂ ಹೊಸಕೋಟೆ ದೂ.ಸಂ.: 080- 27931528 ಅನ್ನು ಸಂಪರ್ಕಿಸಬಹುದಾಗಿದೆ.

# ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರ ನೇಮಕ

**ಬೆಂಗಳೂರು:** ಅಶೋಕ್ ಎನ್ ನಾಯಕ್, ಹಿರಿಯ ವಕೀಲರು ಮತ್ತು ಶ್ರೀಮತಿ ಜಯನಾ ಕೊಠಾರಿ, ಹಿರಿಯ ವಕೀಲರು ಇವರುಗಳನ್ನು ದಂಡ ಪ್ರಕ್ರಿಯಾ ಸಂಹಿತೆ 1975ರ ಕಲಂ:24ರ ಉಪಕಲಂ(8)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, (ಕೇಂದ್ರ ಅಧಿನಿಯಮ ಸಂಖ್ಯೆ:2/1974) ದಂಡ ಪ್ರಕ್ರಿಯಾ ಸಂಹಿತೆಯು ತಿದ್ದುಪಡಿಯಾದಂತೆ, (1978ರ ತಿದ್ದುಪಡಿ ಅಧಿನಿಯಮ) ಹಾಸನ ಜಿಲ್ಲೆ, ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆ ಮೊ.ಸಂ:107/2024, ಸಿ.ಐ.ಡಿ ಪೊಲೀಸ್ ಠಾಣೆ ಮೊ.ಸಂ:20/2024, ಮೈಸೂರು ಜಿಲ್ಲೆ ಕೆ.ಆರ್.ನಗರ ಪೊಲೀಸ್ ಠಾಣೆ ಮೊ.ಸಂ:149/2024 ಮತ್ತು ಸರ್ಕಾರದ ಆದೇಶ ಸಂಖ್ಯೆ: ಒಇ 51 ಸಿಐಡಿ 2024, ದಿನಾಂಕ:28.04.2024 ರಂತೆ ಸಿ.ಐ.ಡಿ ಘಟಕದಲ್ಲಿ ರಚಿಸಿರುವ ವಿಶೇಷ ತನಿಖಾ ತಂಡದಿಂದ ದಾಖಲಾಗಿರುವ ಹಾಗೂ ಇನ್ನು ಮುಂದೆ ದಾಖಲಿಸಲಾಗುವ ಎಲ್ಲಾ ಪ್ರಕರಣಗಳಲ್ಲಿ ಸಂಬಂಧಪಟ್ಟ ಮಾನ್ಯ ವಿಚಾರಣಾ ಮತ್ತು ಜಿಲ್ಲಾ ಸತ್ರ ನ್ಯಾಯಾಲಯಗಳಲ್ಲಿ ಹಾಜರಾಗಲು ಮತ್ತು ಪ್ರಕರಣವನ್ನು ನಡೆಸಲು ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರುಗಳನ್ನಾಗಿ ಮುಂದಿನ ಆದೇಶದವರೆಗೆ ಸರ್ಕಾರ ನೇಮಿಸಿ ಆದೇಶಿಸಿದೆ ಎಂದು ಒಳಾಡಳಿತ (ಪೊಲೀಸ್ ಸೇವೆಗಳು- ಬಿ)ಇಲಾಖೆಯ ಅಧೀನ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದುರಾಸೆಯ ಪ್ರತಿಫಲವೇ ಇಂದಿನ ವಾತಾವರಣಕ್ಕೆ ಮುಖ್ಯ ಕಾರಣ

**ತಿಪಟೂರು:** ಸೂರ್ಯದೇವನ ತಾಪಮಾನಕ್ಕೆ ವರುಣದೇವನ ಅವಕೃಪೆಗೆ ದುರಾಸೆಯ ಪ್ರತಿಫಲವೇ ಇಂದಿನ ವಾತಾವರಣಕ್ಕೆ ಮುಖ್ಯ ಕಾರಣವಾಗಿದೆ ಎಂದು ಶ್ರೀ ಕಾಡಸಿದ್ದೇಶ್ವರ ಮಠದ ಕಿರಿಯ ಶ್ರೀಗಳಾದ ಶ್ರೀ ಅಭಿನವ ಕಾಡಸಿದ್ದೇಶ್ವರ ಶ್ರೀಗಳು ಅಭಿಪ್ರಾಯಪಟ್ಟರು. ಶ್ರೀಮಠದಲ್ಲಿ ಏರ್ಪಡಿಸಿದ್ದ ಅಮಾವಾಸ್ಯೆ ಪೂಜೆ ಶ್ರೀ ಕಾಡಸಿದ್ದೇಶ್ವರ ಗದ್ದುಗೆಗೆ ಅಭಿಷೇಕ ಅಲಂಕಾರ



ನೆರವೇರಿಸಿ ನೆರೆದಿದ್ದ ನೂರಾರು ಭಕ್ತರಿಗೆ ಆಶೀರ್ವಚನ ನೀಡಿ ಮಾತನಾಡುತ್ತಾ ಆರೋಗ್ಯದ ಮುಖ್ಯ ಸಂಕೇತವೇ ಭಕ್ತಿ, ಧ್ಯಾನ, ಗುರು ಹಿರಿಯರಲ್ಲಿ ಪೂಜ್ಯ ಮನೋಭಾವ ಕಾಣುತ್ತಾ ನಿತ್ಯ ಸ್ಮರಣೆಯಲ್ಲಿ ದೇವರು ಮತ್ತು ಗುರು ಹಿರಿಯರನ್ನು ಸ್ಮರಿಸಿ ವರುಣದೇವನನ್ನು ಪ್ರಾರ್ಥಿಸಬೇಕು ನಂತರ ದಿನಗಳಲ್ಲಿ ನೀವೇ ಪ್ರತಿಫಲವನ್ನು ಕಾಣುತ್ತೀರಿ, ಪ್ರತಿ ಕುಟುಂಬದ ಸದಸ್ಯರು ಹುಟ್ಟುಹಬ್ಬ ಆಚರಿಸಿದ ದಿನದಂತೆ ಒಂದು ಸಸಿಯನ್ನು ನೆಟ್ಟು ಪೋಷಿಸಿ ಪ್ರಕೃತಿ ಉಳಿಸಿದಾಗ ಮುಂದಿನ ಯುವ ಪೀಳಿಗೆಗೆ ಆರೋಗ್ಯದ ಸಂಪತ್ತು ಸಿಗುತ್ತದೆ, ಶ್ರೀಮಠದಲ್ಲಿ ವರುಣದೇವನ ಕೃಪೆಗೆ ಸಂಕಲ್ಪ ಪೂಜಾ ಕೈಂಕರ್ಯಗಳು ಹಿರಿಯ ಶ್ರೀಗಳ ಸಮ್ಮುಖದಲ್ಲಿ ನಡೆದಿವೆ ವರುಣದೇವನ ಕೃಪೆ ಮುಂದಿನ ದಿನಗಳಲ್ಲಿ ಆಗುತ್ತದೆ ಉತ್ತಮ ವಾತಾವರಣ ಸೃಷ್ಟಿಯಾಗುತ್ತದೆ ಋಷಿ ಮುನಿಗಳು ಧ್ಯಾನ, ಭಕ್ತಿ, ತ್ಯಾಗದಿಂದ ಆರೋಗ್ಯಕರ ಜೀವನ ಸಾಗಿಸಿದ ಉದಾಹರಣೆ ಕಣ್ಮುಂದೆ ನೋಡುತ್ತಿದ್ದೇವೆ. ದುರಾಸೆಯ ಮನೋಭಾವ ಮರೆತು ತ್ಯಾಗ, ದಾನ, ಸೇವಾ ಮನೋಭಾವ ಜೀವನಕ್ಕೆ ಅಳವಡಿಸಿಕೊಳ್ಳಬೇಕು ಎಂದು ಕರೆಕೊಟ್ಟರು.

# ಡಿ.ಇಲ್.ಡಿ/ ಡಿ.ಪಿ.ಇಡಿ ದಾಖಲಾತಿಗಾಗಿ ಅರ್ಜಿ ಆಹ್ವಾನ

**ಚಿಕ್ಕಬಳ್ಳಾಪುರ:** 2024-25 ನೇ ಸಾಲಿನ ಡಿ.ಇಲ್.ಡಿ/ ಡಿ.ಪಿ.ಇಡಿ ದಾಖಲಾತಿಗಾಗಿ ಇಲಾಖಾ ವೆಬ್ ಸೈಟ್ www.schooleducation.karnataka.govi.inನಲ್ಲಿ ಪ್ರಕಟಿಸಲಾಗಿದ್ದು, ಮಾರ್ಗಸೂಚಿಯನ್ವಯ ಆಫ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಜೂನ್ 5 ಕೊನೆಯ ದಿನಾಂಕವಾಗಿರುತ್ತದೆ ಎಂದು ಡಯಟ್ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರಾದ ಮುನಿಕೆಂಪೇಗೌಡ.ಎಂ ಅವರು ಪ್ರಕಟಣೆಯಲ್ಲಿ ತಿಳಿಸಿದರು.

# ಬಸವ ಜಯಂತಿ, ಹೇಮರೆಡ್ಡಿ ಮಲ್ಲಮ್ಮ ಜಯಂತಿ

**ಚಿಕ್ಕಬಳ್ಳಾಪುರ:** ಜಿಲ್ಲಾಡಳಿತ ವತಿಯಿಂದ ಬಸವ ಜಯಂತಿ ಮತ್ತು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಮೇ 10 ರಂದು ಬೆಳಿಗ್ಗೆ 10:30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ 2ನೇ ಮಹಡಿ ಸಭಾಂಗಣದಲ್ಲಿ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರಳ ಮತ್ತು ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಎನ್. ಮನಿಷ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿವಿಧೆಡೆ ವಿದ್ಯುತ್ ವ್ಯತ್ಯಯ

**ಚಾಮರಾಜನಗರ:** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸಂತೆಮರಹಳ್ಳಿ ಉಪ ವಿಭಾಗ ವ್ಯಾಪ್ತಿಯ 66/11 ಕೆವಿ ಸಂತೆಮರಹಳ್ಳಿ ವಿದ್ಯುತ್ ಮಾರ್ಗವನ್ನು ಲಿಲೋ ಮಾರ್ಗವಾಗಿ ಮಾರ್ಪಾಡು ಮಾಡುವ ಕಾಮಗಾರಿಯನ್ನು ಮೇ 9 ರಂದು ಹಮ್ಮಿಕೊಂಡಿರುವುದರಿಂದ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜಾಗುವ ಎಲ್ಲಾ 11 ಕೆವಿ ಮಾರ್ಗಗಳಿಗೆ ಅಂದು ಬೆಳಿಗ್ಗೆ 6.30 ರಿಂದ ಸಂಜೆ 5.30 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಂತೇಮರಹಳ್ಳಿ, ಸಂತೇಮರಹಳ್ಳಿ ಮೋಳೆ, ಹೊಸಮೋಳೆ, ಕೆಂಪನಪುರ, ಚುಂಗಡಿಪುರ, ಮಹಂತಾಳಪುರ, ಹುಲ್ಲೇಪುರ, ನಡುಕಲಮೋಳೆ, ಬಸವಟ್ಟಿ, ತೆಳ್ಳನೂರು, ಕಾವುದವಾಡಿ, ಬಾಣಹಳ್ಳಿ, ಹೆಗ್ಗವಾಡಿ, ಮೂಡಲಅಗ್ರಹಾರ, ವಿವೇಕಾನಂದ ಕಾಲೋನಿ, ಹೆಗ್ಗವಾಡಿಪುರ, ದೇಶವಳ್ಳಿ, ಕುದೇರು, ದೇಮಹಳ್ಳಿ, ಕಮರವಾಡಿ, ಹೆಬಚಹಳ್ಳಿ, ಅಂಕಶೆಟ್ಟಿಮೋಳೆ, ದೇಮಹಳ್ಳಿಮೋಳೆ, ಕೊನ್ನುಂಡಿ, ಯಲಕ್ಕೂರು, ತೆಂಕಲಮೋಳೆ, ಬಡಗಲಮೋಳೆ, ಅಂಬಳೆ, ಕಂದಹಳ್ಳಿ, ದುಗ್ಗಹಟ್ಟಿ, ಹೊನ್ನೂರು ಗ್ರಾಮಗಳು ಹಾಗೂ ಐಪಿ ಲಿಮಿಟ್ ಗಳ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂ.ಸಂ 1912 ಸಂಪರ್ಕಿಸುವಂತೆ ನಿಗಮದ ಚಾಮರಾಜನಗರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೆಳೆ ಹಾನಿ ಸಂಬಂಧ ಮಾಹಿತಿ ಪಡೆಯಲು ಸಹಾಯವಾಣಿ ಸ್ಥಾಪನೆ

**ಮೈಸೂರು:** ಬೆಳೆ ಹಾನಿ ಪರಿಹಾರ ಪಾವತಿ ಸಂಬಂಧ ಮಾಹಿತಿಯನ್ನು ಪಡೆದುಕೊಳ್ಳಲು ರೈತರುಗಳಿಗೆ ಅನುಕೂಲವಾಗುವಂತೆ ಜಿಲ್ಲಾ ವ್ಯಾಪ್ತಿಯಲ್ಲಿ ಸಹಾಯವಾಣಿಯನ್ನು ತೆರೆಯಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿಯ ದೂ.ಸಂ:0821-2423800, ಸಹಾಯವಾಣಿ ಸಂ: 1077, ಮೈಸೂರು ಉಪವಿಭಾಗದ ಉಪವಿಭಾಗಾಧಿಕಾರಿಗಳ ಕಚೇರಿ ದೂ.ಸಂ:0821-2422100, ಹುಣಸೂರು ಉಪವಿಭಾಗದ ಉಪ ವಿಭಾಗಾಧಿಕಾರಿಗಳ ಕಚೇರಿಯ ದೂ.ಸಂ:9731825346, ಮೈಸೂರು ತಾಲ್ಲೂಕು ಕಛೇರಿಯ ದೂ.ಸಂ: 0821-2414812, ನಂಜನಗೂಡು ತಾಲ್ಲೂಕು ಕಛೇರಿ ದೂ.ಸಂ: 08221-223108, ತಿ.ನರಸೀಪುರದ ತಾಲ್ಲೂಕು ಕಛೇರಿಯ ದೂ.ಸಂ:08227-260216, ಹುಣಸೂರಿನ ತಾಲ್ಲೂಕು ಕಛೇರಿಯ ದೂ.ಸಂ:08222-252959, ಕೆ.ಆರ್.ನಗರ ತಾಲ್ಲೂಕು ಕಛೇರಿಯ ದೂ.ಸಂ: 08223-262371, ಸಾಲಿಗ್ರಾಮ ತಾಲ್ಲುಕು ಕಛೇರಿಯ ದೂ.ಸಂ:08223-283833, ಪಿರಿಯಾಪಟ್ಟಣ ತಾಲ್ಲೂಕು ಕಛೇರಿಯ ದೂ.ಸಂ: 08223-274175, ಹೆಚ್.ಡಿ.ಕೋಟೆ ತಾಲ್ಲೂಕು ಕಛೇರಿಯ ದೂ.ಸಂ:08228-255325, ಸರಗೂರು ತಾಲ್ಲೂಕು ಕಛೇರಿಯ 08228-296100 ನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು ಎಂದು ಜಿಲ್ಲಾಧಿಕಾರಿಗಳಾದ ಡಾ.ರಾಜೇಂದ್ರ ಕೆ.ವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿ ವೇತನಕ್ಕೆ ಅರ್ಜಿ

**ಮೈಸೂರು:** 2023-24 ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲ್ಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ www.ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಲು ಮೇ 20 ಅಂತಿಮ ದಿನಾಂಕವಾಗಿದ್ದು, ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು (ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ) ನಲ್ಲಿ ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆಯ ದೂ.ಸಂ: 0821-2520910 ಅನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಗ್ರೇಡ್-1 ಅವರು ತಿಳಿಸಿದ್ದಾರೆ.

# ತಾಮ್ರದ ನಾಣ್ಯಗಳ ಹಸ್ತಾಂತರ

**ಮೈಸೂರು:** ಕುಕನೂರು ಗ್ರಾಮದ ಕಿಲ್ಲೇದ ಓಣಿಯ ಬುನಾದಿಯಲ್ಲಿ ವಶಪಡಿಸಿಕೊಂಡಿದ್ದಂತಹ 46 ಕೆ.ಜಿ. 180 ಗ್ರಾಂ. ತೂಕದ ಪ್ರಾಚೀನ ಕಾಲದ ತಾಮ್ರದ ನಾಣ್ಯಗಳು ಕೊಪ್ಪಳ ಜಿಲ್ಲೆ ಯಲಬುರ್ಗಾ ವ್ಯಾಪ್ತಿಗೆ ಸೇರಿದ್ದವಾಗಿದ್ದು, ಇದನ್ನು ಕೊಪ್ಪಳ ಜಿಲ್ಲೆ ಯಲಬುರ್ಗಾ ನ್ಯಾಯಾಲಯದಿಂದ ದಿ.25.03.2024 ರಂದು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕಛೇರಿಗೆ ಹಸ್ತಾಂತರಿಸಲಾಗಿದೆ ಎಂದು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕೋಲಾರ ಜಿಲ್ಲಾ ರೈತ ಬಿಜೆಪಿ ರೈತ ಮೋರ್ಚಾ ಆರೋಪ

# ಜಾನುವಾರುಗಳಿಗೆ ವಂಚಿಸಿದ ಸರ್ಕಾರ

**ಕೋಲಾರ:** ಕರ್ನಾಟಕ ರಾಜ್ಯದಲ್ಲಿ 1 ಕೋಟಿ 15 ಲಕ್ಷ ಪ್ರಮುಖ ಜಾನುವಾರುಗಳಿದ್ದು,1 ಕೋಟಿ 72 ಲಕ್ಷ ಚಿಕ್ಕ ಜಾನುವಾರುಗಳಿವೆ ಇವುಗಳ ಸಂರಕ್ಷಣೆಯನ್ನು ಮಾಡುವಲ್ಲಿ ಕಾಂಗ್ರೆಸ್ ಸರ್ಕಾರವು ವಿಫಲಗೊಂಡಿದೆ ಎಂದು ಕೋಲಾರ ಜಿಲ್ಲಾ ರೈತ ಬಿಜೆಪಿ ರೈತ ಮೋರ್ಚಾ ಆರೋಪಿಸಿದೆ.

2023-24ರಲ್ಲಿ ಕರ್ನಾಟಕ ರಾಜ್ಯದ 196 ತಾಲ್ಲೂಕುಗಳು ತೀವ್ರ ಬರಕ್ಕೆ ಒಳಗಾಗಿದ್ದು ಮತ್ತು 27 ತಾಲ್ಲೂಕುಗಳು ಸಾಧಾರಣ ಬರಕ್ಕೆ ಒಳಗಾಗಿದೆ ಎಂದು ಸರ್ಕಾರ ಘೋಷಿಸಿತ್ತು. ಪ್ರಮುಖ ಜಾನುವಾರುಗಳಿಗೆ ಪ್ರತಿದಿನ 6 ಕೆ.ಜಿ ಒಣ ಮೇವಿನ ಅವಶ್ಯಕತೆಯಿದ್ದು, ಚಿಕ್ಕ ಜಾನುವಾರುಗಳಿಗೆ ( ಕುರಿ ಮತ್ತು ಆದು) 1/2 ಕೆ.ಜಿ ಒಣ ಮೇವು ಅವಶ್ಯಕತೆಯಿದೆ. ಈ ಕೆಳಗಿನ ಆರೋಪಗಳಿಗೆ ರಾಜ್ಯ ಸರ್ಕಾರ ಉತ್ತರಿಸಬೇಕಾಗಿದೆ ಎಂದು ಕೋಲಾರ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಆನಂದ್ ಗೌಡ ಆರ್, ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಬಿಜೆಪಿ ಈ. ಶಿವಣ್ಣ, ಎ. ಹನುಮಪ್ಪ, ರೈತ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಬಿ.ಕೆ.ನಾರಾಯಣಶೆಟ್ಟಿ, ಕೋಲಾರ ಜಿಲ್ಲಾ ರೈತ ಮೋರ್ಚಾ ಕಾರ್ಯಕಾರಿನಿ ಸದಸ್ಯ ಓಹಿಲೇಶ್, ಮುಳಬಾಗಿಲು ಮಂಡಲ ರೈತ ಮೋರ್ಚಾ ಅಧ್ಯಕ್ಷ ಆರ್. ಲಕ್ಷ್ಮೀ ನಾರಾಯಣಶೆಟ್ಟಿ ಆಗ್ರಹಿಸಿದ್ದಾರೆ.

ಹಸಿರು ಮೇವನ್ನು ಉತ್ಪಾದನೆ ಮಾಡಲು ಮೇವು ಬೀಜಗಳನ್ನು ರೈತರಿಗೆ ನೀಡಲಾಗಿದೆ. ಎಂದು ಸರ್ಕಾರ ಹೇಳುತ್ತಿದೆ. ಈ ಕಾರ್ಯಕ್ರಮವು ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲ ಎಂದು ಕಂಡುಬರುತ್ತದೆ, ಹಸಿರು ಮೇವನ್ನು ಬೆಳೆಯಲು ಗ್ರಾಮಗಳಲ್ಲಿರುವ ಗೋಮಾಳಗಳನ್ನು ಮತ್ತು ಖಾಲಿ ಜಾಗಗಳನ್ನು ಗುರುತಿಸಬೇಕಿತ್ತು, ಕೆರೆ ಮತ್ತು ನದಿ ಪಾತ್ರಗಳಲ್ಲಿ ಜಾಗವನ್ನು ಗುರುತಿಸಿ ಹಸಿರು ಮೇವನ್ನು ಬೆಳೆಯಬೇಕಿತ್ತು. ಈ ಯೋಜನೆಯು ಅನುಷ್ಠಾನವಾಗಿ ಇಲ್ಲದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ, ಮಿನಿ ಕಿಟ್ ನಲ್ಲಿ ಮೇವಿನ ಬೀಜಗಳನ್ನು ವಿತರಿಸಬೇಕು ಎಂಬ ಮಾರ್ಗ ಸೂಚಿಯನ್ನು ರಾಜ್ಯ ವಿಪತ್ತು ಪ್ರತಿಕ್ರಿಯಾ ನಿಧಿ ಮತ್ತು ವಿವಿಧ ಇಲಾಖೆಗಳ ಸೂಚನೆಯನ್ನು ಪಾಲಿಸಲು ಸರ್ಕಾರ ವಿಫಲವಾಗಿದೆ, ಜಾನುವಾರುಗಳ ಆರೋಗ್ಯವನ್ನು ಮತ್ತು ಜಾನುವಾರುಗಳನ್ನು ಕಸಾಯಿ ಖಾನೆಗಳಿಗೆ ಮಾರುವುದನ್ನು ತಪ್ಪಿಸಲು ಜಾನುವಾರುಗಳಿಗೆ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಬೇಕಿತ್ತು. ಈ




ಕಾರ್ಯಕ್ರಮವು ರಾಜ್ಯದಲ್ಲಿ ಸಮರ್ಪಕವಾಗಿ ನಡೆದಿಲ್ಲ, ಹಗಲು ಮತ್ತು ರಾತ್ರಿ ಜಾನುವಾರುಗಳಿಗೆ ಮೇವು, ಆಹಾರ, ನೀರು, ವಸತಿ ಮತ್ತು ಆರೋಗ್ಯವನ್ನು ನೀಡಲು ಪ್ರತಿ 50,000/- ಜಾನುವಾರುಗಳ ಸಂಖ್ಯೆಗೆ ಶಿಬಿರಗಳನ್ನು ಆರಂಭಿಸಬೇಕಿತ್ತು, ರಾಜ್ಯದಲ್ಲಿ 460 ಜಾನುವಾರುಗಳ ಶಿಬಿರಗಳ ಅವಶ್ಯಕತೆ ಯಿದ್ದು ಎಷ್ಟು ಜಿಲ್ಲೆಗಳಿಲ್ಲಿ ವಸತಿ ಶಿಬಿರ ಗಳನ್ನು ಆರಂಭಿಸಿದ್ದಾರೆ ಎಂಬುವುದನ್ನು ಮಾನ್ಯ ರಾಜ್ಯ ಸರ್ಕಾರದ ಜವಾಬ್ದಾರಿತ ಮುಖ್ಯಮಂತ್ರಿಗಳು ಕರ್ನಾಟಕದ ಜನರಿಗೆ ತಿಳಿಸಬೇಕಾಗಿದೆ, ಹೋಬಳಿಗಳಲ್ಲಿ ಮೇವು ಡಿಪೋಗಳನ್ನು ಕಾಣದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಈ ಯೋಜನೆಯ ವಿಫಲತೆ ಮುಗ್ಧ ಜಾನುವಾರುಗಳಿಗೆ ಕಾಂಗ್ರೆಸ್ ಸರ್ಕಾರ ಮಾಡಿರುವ ದ್ರೋಹ. 7. ಜಾನುವಾರುಗಳಿಗೆ ತಗಲುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಚುಚ್ಚುಮದ್ದುಗಳು, ಪ್ರತಿ ಜೀವಕ ಔಷಧಿಗಳು ಮತ್ತು ಇತರೆ ಔಷಧಿಗಳನ್ನು ಸರಿಯಾದ ರೀತಿಯಲ್ಲಿ ರೈತರಿಗೆ ತಲುಪಿಸಿಲ್ಲ ಎಂದು ದೂರಿದರು.

ರಾಜ್ಯದ 713 ಹೋಬಳಿಗಳಲ್ಲಿ ಮೇವು ಬ್ಯಾಂಕುಗಳನ್ನು ಪ್ರಾರಂಭಿಸಬೇಕಿತ್ತು, ಜಾನುವಾರುಗಳಿಗೆ ಪೂರಕ ಪೋಷಣ ಔಷಧಿಗಳನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡದೇ ಇರುವುದರಿಂದ ಕಳಪೆ ಸಂತಾನೋತ್ಪತ್ತಿ ಆಗುವ ಸಾಧ್ಯತೆಯಿದ್ದು ಮುಂದಿನ ದಿನಗಳಲ್ಲಿ ಹಾಲು ಉತ್ಪಾದನೆ ಮತ್ತು ಜಾನುವಾರುಗಳ ಸಂತತಿ ಕಡಿಮೆಯಾಗುವ ಸಾಧ್ಯತೆ ಇದೆ. ಈ ಆರೋಪಕ್ಕೆ ಸರ್ಕಾರ ಉತ್ತರಿಸಬೇಕಾಗಿದೆ, 12.05 ಲಕ್ಷ ಕಿರು ಮೇವು ಕಿಟ್‌ಗಳನ್ನು ನೀರಾವರಿ ಪ್ರದೇಶಗಳಿಗೆ ನೀಡಲು ರಾಷ್ಟ್ರೀಯ ಮತ್ತು ರಾಜ್ಯ ಪ್ರತಿಕ್ರಿಯೆ ನಿಧಿ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ ಆದರೆ ಯಾರಿಗೆ ಕಿಟ್‌ಗಳನ್ನು ವಿತರಿಸಿದ್ದಾರೆ ಎಂಬುದನ್ನು ರೈತರಿಗೆ ತಿಳಿಸಬೇಕಾಗಿದೆ, ಜಿಲ್ಲಾ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳು, ರೈತರಿಗೆ ಜಾಗೃತಿ ಮತ್ತು ಮಾಹಿತಿಯನ್ನು ನೀಡಲು ವಿಫಲವಾಗಿದ್ದಾರೆ ಎಂದು ಕಂಡುಬರುತ್ತಿದೆ. ಇಲಾಖೆ ವತಿಯಿಂದ ರಾಜ್ಯದಲ್ಲಿ ಎಷ್ಟು ಮಾಹಿತಿ ಮತ್ತು ಜಾಗೃತಿ ಶಿಬಿರಗಳನ್ನು ಏರ್ಪಡಿಸಿದ್ದಾರೆ ಎಂದು ಕರ್ನಾಟಕದ ಜನರಿಗೆ ತಿಳಿಸಬೇಕಾಗಿದೆ, ಪಶು ಆಹಾರದ ಪ್ರತಿ ಮೂಟೆಗೆ ಬೆಲೆ 200 ರಿಂದ 300 ರೂಗಳನ್ನು ಅಧಿಕ ಮಾಡಲಾಗಿದೆ ಇದನ್ನು ಸರ್ಕಾರ ಪರಿಶೀಲಿಸಿ ಬೇಕು. ಈ ವಿಷಯ ರೈತರಿಗೆ ಬಹಳ ತೊಂದರೆ ಆಗಿದೆ. ಈ ಎಲ್ಲಾ ಮೇಲ್ಕಂಡ ಆರೋಪಗಳಿಗೆ ಉತ್ತರ ನೀಡಬೇಕಾಗಿರುವ ಜವಾಬ್ದಾರಿ ರಾಜ್ಯ ಸರ್ಕಾರಕ್ಕಿದೆ.

ತಮ್ಮ ವ್ಯಾಪ್ತಿಯಲ್ಲಿ ಬರುವ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಣೆಯನ್ನು ಮಾಡದೆ ರಾಜ್ಯ ಸರ್ಕಾರವು ರಾಜ್ಯದ ಮುಗ್ಧ ಜೀವಿಗಳಿಗೆ ದ್ರೋಹ ಬಗೆಯುವ ಮೂಲಕ ರಾಜ್ಯದ ಬಹು ಸಂಖ್ಯಾತ ಹಿಂದೂಗಳ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಕೋಲಾರ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಆನಂದ್ ಗೌಡ ಆರ್, ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಬಿಜೆಪಿ ಈ. ಶಿವಣ್ಣ, ಎ. ಹನುಮಪ್ಪ, ರೈತ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಬಿ.ಕೆ.ನಾರಾಯಣಶೆಟ್ಟಿ, ಕೋಲಾರ ಜಿಲ್ಲಾ ರೈತ ಮೋರ್ಚಾ ಕಾರ್ಯಕಾರಿನಿ ಸದಸ್ಯ ಓಹಿಲೇಶ್, ಮುಳಬಾಗಿಲು ಮಂಡಲ ರೈತ ಮೋರ್ಚಾ ಅಧ್ಯಕ್ಷ ಆರ್. ಲಕ್ಷ್ಮೀ ನಾರಾಯಣಶೆಟ್ಟಿ ಆರೋಪಿಸಿದ್ದಾರೆ.

# ವಿಜಯಪುರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನಾಚರಣೆ

**ವಿಜಯಪುರ:** ಪಟ್ಟಣದ ಯಲುವಹಳ್ಳಿ ರಸ್ತೆಯಲ್ಲಿರುವ ಸ್ವಾಮಿ ವಿವೇಕಾನಂದ ಐ.ಟಿ.ಐ.ಕಾಲೇಜಿನಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಬುಧವಾರ ತಾಲ್ಲೂಕು ಅಧ್ಯಕ್ಷ ನಂಜೇಗೌಡ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನಾಚರಣೆ ಆಯೋಜನೆ ಮಾಡಲಾಗಿತ್ತು.

ತಾಲ್ಲೂಕು ಕಸಾಪ ಘಟಕದ ಅಧ್ಯಕ್ಷ ನಂಜೇಗೌಡ ಮಾತನಾಡಿ, ಸಾಹಿತ್ಯ ಪರಿಷತ್ತಿನ ಕೆಲಸ ಮಾಡಲು ಸಾಹಿತಿಗಳೇ ಆಗಬೇಕೆಂದೇನೂ ಇಲ್ಲ. ಕನ್ನಡ ಓದು ಬರಹ ಬರುವವರು ಯಾರು ಬೇಕಾದರೂ ಸಾಹಿತ್ಯ ಪರಿಷತ್ತಿನಲ್ಲಿ ಕೆಲಸ ಮಾಡಬಹುದು. ಪ್ರತಿಯೊಬ್ಬರೂ ಕನ್ನಡ ಭಾಷೆಗೆ ಪ್ರೋತ್ಸಾಹ ನೀಡಬೇಕು. ಒಂದು ಸಂಸ್ಥೆ ಹುಟ್ಟು ಹಾಕಬೇಕಾ ದರೆ ಸಾಕಷ್ಟು ಕಷ್ಟನಷ್ಟಗಳನ್ನು ಎದುರಿಸಬೇಕಾಗಿದೆ. ಬಹುತೇಕ ಸಂಸ್ಥೆಗಳು ಸ್ಥಾಪನೆಯಾದ ಕೆಲವೇ ದಿನಗಳಲ್ಲಿ ಇಲ್ಲವೇ ಐದತ್ತು ವರ್ಷ ಗಳಲ್ಲಿ ಮುಚ್ಚಿಹೋಗುತ್ತವೆ. ಸಾಹಿತಿ ಗಳು, ಬುದ್ಧಿಜೀವಿಗಳೆಲ್ಲರೂ ಹುಟ್ಟು ಹಾಕಿರುವ ಸಾಹಿತ್ಯ ಪರಿಷತ್ತು ನೂರು ವರ್ಷ ಪೂರೈಸಿ ಗಟ್ಟಿಯಾಗಿ ನಿಂತಿದೆ ಅದನ್ನು ಮುನ್ನಡೆಸಿಕೊಂಡು ಹೋಗುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು.

ಹಿರಿಯ ರಂಗಕಲಾವಿದ ರಬ್ಬನಹಳ್ಳಿ ಕೆಂಪಣ್ಣ ಮಾತನಾಡಿ, ಕನ್ನಡ ಭಾಷೆಯ ಹಿರಿಮೆಯನ್ನು ಜಗತ್ತಿಗೆ ಸಾರಬೇಕು, ಇಲ್ಲಿನ




ಕವಿಗಳು, ಸಾಹಿತಿಗಳು, ಲೇಖಕರು, ದಾಸರು, ಶರಣರು ಹೀಗೆ ಎಲ್ಲಾ ವಿಭಾಗಗಳಲ್ಲಿನ ಮಹನೀಯರನ್ನು ಪ್ರಪಂಚಕ್ಕೆ ಪರಿಚಯಿಸಬೇಕು ಎನ್ನುವ ನಿಟ್ಟಿನಲ್ಲಿ ಹುಟ್ಟುಹಾಕಿದ ಸಾಹಿತ್ಯ ಪರಿಷತ್ತು, ಅನೇಕ ಸವಾಲುಗಳ ನಡುವೆ, ಮುನ್ನಡೆಯುತ್ತಿದೆ. ಇಂತಹ ಉತ್ತಮ ಸಂಸ್ಥೆಯನ್ನು ಕಟ್ಟಿದ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ.ವಿಶ್ವೇಶ್ವರಯ್ಯ, ಹಾಗೂ ಸರ್.ಮಿರ್ಜಾ ಇಸ್ಮಾಯಿಲ್ ಅವರನ್ನು ನಾವೆಲ್ಲರೂ ನೆನೆಯಬೇಕಿದೆ. ಮಮ್ಮಿ, ಡ್ಯಾಡಿ ಸಂಸ್ಕೃತಿಯಿಂದ ಅಪ್ಪ, ಅಮ್ಮನ ಸಂಸ್ಕೃತಿಗೆ ಮರಳಬೇಕಿದೆ ಎಂದರು. ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಚಂದ್ರಶೇಖರ ಹಡಪದ್ ಮಾತನಾಡಿ, ಯುವಜನರು ಕನ್ನಡಾಭಿಮಾನವನ್ನು ಬೆಳೆಸಿಕೊಂಡು, ಮುಂದಿನ ಪೀಳಿಗೆಗೆ ಕನ್ನಡ ಭಾಷೆ, ಸಾಹಿತ್ಯ ಮಹತ್ವವನ್ನು ತಿಳಿಸುವ ಕೆಲಸ ಮಾಡಬೇಕು ಎಂದರು.

ಜಾನಪದ ಕಲಾವಿದ ಹೊಸಹಳ್ಳಿ ವಾಸುದೇವ್ ಅವರು ಜಾನಪದ ಗೀತೆಗಳನ್ನು ಹಾಡುವ ಮೂಲಕ ಎಲ್ಲರನ್ನೂ ರಂಜಿಸಿದರು.

ತಾಲ್ಲೂಕು ಕಲಾವಿದರ ಸಂಘದ ಅಧ್ಯಕ್ಷ ಮೋಹನ್ ಬಾಬು, ತಾಲ್ಲೂಕು ಕಸಾಪ ಕಾರ್ಯದರ್ಶಿ ಎ.ಬಿ.ಪರಮೇಶಯ್ಯ, ಸ್ವಾಮಿ ವಿವೇಕಾನಂದ ಐ.ಟಿ.ಐ.ಕಾಲೇಜಿನ ಪ್ರಾಂಶುಪಾಲ ಶ್ರೀನಾಥ್, ಅಶ್ವಥಗೌಡ, ಮುನಿವೆಂಕಟರಮಣಪ್ಪ, ಸುಬ್ರಮಣಿ, ಜೆ.ಆರ್.ಮುನಿವೀರಣ್ಣ, ಕನಕರಾಜು, ಶರಣಯ್ಯ ಹಿರೇಮಠ, ಬೈರೇಗೌಡ, ಶಿಕ್ಷಕರಾದ ರಾಜಶೇಖರಾಚಾರ್, ಹಾಜರಿದ್ದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಬಸವದಳದ ಹಿರಿಯ ಶರಣರಾದ ಮ ಜಯದೇವ್,ಹಾಗೂ ಬೇಕರಿ ಶಿವಣ್ಣ ಮತ್ತು ಸ್ವಾಮಿ ವಿವೇಕಾನಂದ ಐಟಿಐ ಕಾಲೇಜಿನ ಪ್ರಾಂಶುಪಾಲ ಶ್ರೀನಾಥ್ ಲೇಖಕ ಶ್ರೀನಿವಾಸಮೂರ್ತಿರವರನ್ನು ಸನ್ಮಾನಿಸಲಾಯಿತು.

# ಗಾಣದಾಳುವಿನಲ್ಲಿ ಮನೆಗೆ ಬೆಂಕಿ

## ಲಕ್ಷಾಂತರ ರೂ. ವಸ್ತುಗಳು ನಷ್ಟವಾಗಿರುವ ಸಾಧ್ಯತೆ



**ಹುಳಿಯಾರು:** ಆಕಸ್ಮಿಕ ಬೆಂಕಿಯಿಂದ ಮನೆ ಸುಟ್ಟು ಭಸ್ಮವಾಗಿ ಲಕ್ಷಾಂತರ ರೂ. ನಷ್ಟವಾಗಿರುವ ಘಟನೆ ಹುಳಿಯಾರು ಹೋಬಳಿಯ ಗಾಣದಾಳು ಗ್ರಾಮದಲ್ಲಿ ಬುಧವಾರ ಬೆಳಗ್ಗೆ ಜರುಗಿದೆ. ಗಾಣದಾಳು ಗ್ರಾಮದ ಗಂಗಾಧರಯ್ಯ ಎಂಬುವವರ ಮನೆ ಬೆಂಕಿಗೆ ಆಹುತಿಯಾಗಿದ್ದು ಮನೆಯ ಅಟ್ಟದಲ್ಲಿದ್ದ ತೆಂಗಿನ ಕೊಬ್ಬರಿಗೆ ಮೊದಲು ಬೆಂಕಿ ತಗುಲಿದೆ. ಬೆಂಕಿ ಹೊತ್ತಿರುವುದು ಮನೆಯವರ ಗಮನಕ್ಕೆ ಬರುವಷ್ಟರಲ್ಲಿ ಅಟ್ಟದ ಮೇಲಿದ್ದ ಕೊಬ್ಬರಿ ಒಂದಕ್ಕೊಂದು ಒತ್ತಿ ಉರಿದು ಮೇಲ್ಚಾವಣಿಯ ಮರಮುಟ್ಟು ಸಹ ಉರಿಯಲಾರಂಭಿಸಿದೆ. ತಕ್ಷಣ ಅಗ್ನಿಶಾಮಕ ದಳಕ್ಕೆ ಮಾಹಿತಿ ತಿಳಿಸಿ ಬೆಂಕಿ ನಂದಿಸಲು ಪ್ರಯತ್ನಿಸಿದರಾದರು ಸಾಧ್ಯವಾಗಲಿಲ್ಲ.

ಅಗ್ನಿಶಾಮಕ ಸಿಬ್ಬಂದಿ ಬಂದು ಬೆಂಕಿ ನಂದಿಸುವಷ್ಟರಲ್ಲಿ 500 ಕೊಬ್ಬರಿ, ಮನೆಯ ಮೇಲ್ಚಾವಣಿಯ ಮರಮುಟ್ಟು, ಟಿವಿ, ಮಂಚ, ಬೀರು ಸೇರಿದಂತೆ ಬಟ್ಟೆ, ಪಾತ್ರೆ, ದವಸ ಧಾನ್ಯ ಸುಟ್ಟು ಭಸ್ಮವಾಗಿದೆ.

# ಕಾರೆಹಳ್ಳಿ ಮೇವು ಬ್ಯಾಂಕ್ ಸಿಬ್ಬಂದಿಗೆ ಊಟವಿಲ್ಲ!

**ಹುಳಿಯಾರು:** ಬರಗಾಲದ ಹಿನ್ನೆಲೆಯಲ್ಲಿ ರೈತರ ಜಾನುವಾರುಗಳಿಗೆ ಮೇವು ಒದಗಿಸುವ ಸಲುವಾಗಿ ಹುಳಿಯಾರು ಹೋಬಳಿಯ ಕಾರೇಹಳ್ಳಿ ಶ್ರೀರಂಗನಾಥ ಸ್ವಾಮಿ ದೇವಸ್ಥಾನದ ಬಳಿ ತಾಲೂಕು ಆಡಳಿತದಿಂದ ಮೇವು ಬ್ಯಾಂಕ್ ಆರಂಭಿಸಲಾಗಿದೆ. ಯಾವುದೇ ಗೊಂದಲ, ವಿವಾದ ಇಲ್ಲದೆ ನಿರಾತಂಕವಾಗಿ ಮೇವು ಬ್ಯಾಂಕ್ ನಡೆಯುತ್ತಿದ್ದರೂ ಸಹ ಅಲ್ಲಿನ ಸಿಬ್ಬಂದಿಗಳಿಗೆ ಊಟವಿಲ್ಲದೆ ಉಪವಾಸದಲ್ಲಿ ಕೆಲಸ ನಿರ್ವಹಿಸುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ.

ತಾಲೂಕು ಪಶುಪಾಲನ ಇಲಾಖೆ ರೈತರ ಜಾನುವಾರು ಸಂಖ್ಯೆಯನ್ನು ಗುರುತಿಸಿ ಟೋಕನ್ ಕೊಟ್ಟು ಕಳುಹಿಸುತ್ತಿರುವುದರಿಂದ ನೂಕು ನುಗ್ಗಲು ಇಲ್ಲದೆ ಅನಾಯಾಸವಾಗಿ ರೈತರು ಮೇವು ಖರೀದಿಸಿ ಹಿಂದಿರುಗುತ್ತಿದ್ದಾರೆ. ಮೇವು ಲಭ್ಯತೆಗೆ ಅನುಗುಣವಾಗಿ ನಿತ್ಯ 150 ರಿಂದ 200 ರೈತರು ಬರುತ್ತಿದ್ದು ಇವರೆಲ್ಲರಿಗೂ ಯಾವುದೇ ಗೊಂದಲ ಇಲ್ಲದೆ, ತಾರತಮ್ಯ ಮಾಡದೆ ಮೇವು ವಿತರಿಸುವ ಮೂಲಕ ರೈತರ ಪ್ರಶಂಸೆಗೆ ಸಿಬ್ಬಂದಿಗಳು ಪಾತ್ರರಾಗುತ್ತಿದ್ದಾರೆ. ಆದರೆ ಬೆಳಗ್ಗೆಯಿಂದ ರಾತ್ರಿವರೆಗೂ ಹುಲ್ಲಿನ ಧೂಳಿನಲ್ಲಿ ದುಡಿಯುತ್ತಿರುವ ಈ ಸಿಬ್ಬಂದಿಗಳನ್ನು ತಾಲೂಕು ಆಡಳಿತ ಮರೆತಂತೆ ಕಾಣುತ್ತಿದೆ.

ಪಶು ಇಲಾಖೆಯಿಂದ ನೊಂದಣಿ ಕಾರ್ಡ್ ತರುವ ರೈತರಿಂದ ಕಾರ್ಡ್ ಪಡೆದು ಎಂಟ್ರಿ ಮಾಡಿಕೊಂಡು ಹಣ ಕಟ್ಟಿಸಿಕೊಂಡು ಮೇವಿನ ತೂಕ ಹಾಕಿ ರೈತರಿಗೆ ವಿತರಿಸುವವರೆಗೂ ನಿತ್ಯ ಕಂದಾಯ ಇಲಾಖೆ, ಪಶು ಇಲಾಖೆ, ಪೊಲೀಸ್ ಇಲಾಖೆ, ಗ್ರಾಮ ಪಂಚಾಯಿತಿಯ ಹತ್ತನ್ನೆರಡು ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರಿಗೆ ಕುಡಿಯುವ ನೀರಿನ ವ್ಯವಸ್ಥೆ ಬಿಟ್ಟರೆ ಮತ್ಯಾವ ವ್ಯವಸ್ಥೆಯನ್ನು



ಸಹ ಮಾಡಿಲ್ಲ ಎನ್ನುತ್ತಾರೆ ಹೆಸರೇಳಲಿಚ್ಚಿಸದ ಇಲ್ಲಿನ ಸಿಬ್ಬಂದಿ.

ಇಲ್ಲಿನ ಕೆಲ ಸಿಬ್ಬಂದಿಗಳಂತೂ ಹೊರ ರಾಜ್ಯಗಳಿಂದ ಬರುವ ಮೇವನ್ನು ಸಂಜೆವರೆಗೆ ವಿತರಣೆ ಮಾಡಿ ಉಳಿದ ಮೇವನ್ನ ಗೋಡನ್ ನಿಗೆ ಹಾಕಿಸಿ ಸ್ಥಳವನ್ನು ಸ್ವಚ್ಚಗೊಳಿಸಿ ಹೋಗುವಷ್ಟರಲ್ಲಿ ರಾತ್ರಿ 8 ಆಗುತ್ತದೆ. ಮೇವು ಬ್ಯಾಂಕ್ ಇರುವ ಸ್ಥಳದಲ್ಲಿ ಯಾವುದೇ ತಿಂಡಿ ಹೋಟೆಲ್‌ಗಳು ಇಲ್ಲದ ಕಾರಣ ಚಹಾ ಬಿಸ್ಕೆಟ್ ತಿಂದು ರಾತ್ರಿವರೆಗೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ಉಪವಾಸ ಇರುವುದನ್ನ ನೋಡಲಾರದೆ ಮಂಗಳವಾರ ಮಧ್ಯಾಹ್ನ ಊಟವನ್ನು ಇಲ್ಲಿನ ಸಿಬ್ಬಂದಿಯೇ ಹುಳಿಯಾರಿನಿಂದ ತರುಹಿಸಿ ಕೊಟ್ಟಿದ್ದಾರೆ. ಉಳಿದಂತೆ ರಾತ್ರಿ 8 ರವರೆವಿಗೆ ಉಪವಾಸವಿದ್ದು ಕೆಲಸ ಮಾಡಿದ್ದಾರೆ.

ಬೆಳಗ್ಗೆ 10 ಗಂಟಗೆ ಕೆಲಸ ಆರಂಭಿಸಿದವರು ಸಂಜೆ 3 ಆದರೂ ಬಿಡುವಿಲ್ಲದೆ ರೈತರಿಗೆ ಮೇವು ವಿತರಿಸುತ್ತಿದ್ದಾರೆ. ಇವರಿಗೆ ಆಗಾಗ ಚಹಾ ಬಿಸ್ಕೇಟು, ಮಜ್ಜಿಗೆ ಹಾಗೂ ಮಧ್ಯಾಹ್ನ ಊಟ ಕೊಟ್ಟರೆ ಒತ್ತಡದ ಕೆಲಸದ ನಡುವೆ ಸ್ವಲ್ಪ ವಿಶ್ರಾಂತಿ ಸಿಗುವ ಜೊತೆಗೆ ದೈಹಿಕ ಚೈತನ್ಯ ಸಿಗುತ್ತದೆ. ಇನ್ನಾದರೂ ಈ ಸಿಬ್ಬಂದಿಗಳ ಅಗತ್ಯತೆಗಳ ಬಗ್ಗೆ ತಾಲೂಕು ಆಡಳಿತ ಕಾಳಜಿವಹಿಸುವುದೇ ಕಾದು ನೋಡಬೇಕಿದೆ.

## ಪ್ರಥಮ ಪಿಯು ದಾಖಲಾತಿಗೆ ಅರ್ಜಿ

**ಕೋಲಾರ:** ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಪ್ರಥಮ ಪಿ.ಯುಸಿ.(ವಿಜ್ಞಾನ ವಿಭಾಗ) ದಾಖಲಾತಿಗಾಗಿ ಕೋಲಾರ ಜಿಲ್ಲೆಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜು, ಪಾರ್ಶ್ವಗಾನಹಳ್ಳಿ ಮತ್ತು ಕೆ.ಜಿ.ಎಫ್ ಸುಮತಿನಗರ ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜುಗಳಲ್ಲಿ ಅರ್ಜಿಗಳನ್ನು ಕಛೇರಿಯ ವೇಳೆಯಲ್ಲಿ ಮೇ 13 ರಿಂದ 23 ರೊಳಗೆ ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಕಾಲೇಜುಗಳಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಾದ ಶಂಕರ್ ಪ್ರಸಾದ್ ರವರ ಮೊಬೈಲ್ ಸಂಖ್ಯೆ:6360811262 ಹಾಗೂ ಕೆ.ವಿ.ನಾಗರಾಜ್ ರವರ ಮೊಬೈಲ್ ಸಂಖ್ಯೆ:9880322844 ಸಂಪರ್ಕಿಸಬಹುದುದೆಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 6ನೇ ತರಗತಿ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನ

**ಕೋಲಾರ:** ಪ್ರಸಕ್ತ ಸಾಲಿನಲ್ಲಿ ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲು ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿ ಕುಟುಂಬದ ಆದಾಯ ಮಿತಿ ರೂ.2.00 ಲಕ್ಷ ಮೀರಿರಬಾರದು. ಸಫಾಯಿ ಕರ್ಮಚಾರಿ ಮಕ್ಕಳಿಗೆ ಶಾಲೆ ಪ್ರವೇಶ ಯೋಜನೆಯಲ್ಲಿ ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗುವುದು. 5ನೇ ತರಗತಿಯಲ್ಲಿ ಶೇ.60% ಅಂಕ ಪಡೆದಿರಬೇಕು. ಅರ್ಜಿಗಳು ವಿತರಿಸುವ ಸ್ಥಳ ಸಮಾಜ ಕಲ್ಯಾಣ ಇಲಾಖೆ ಶ್ರೀನಿವಾಸಪುರ ರಸ್ತೆ ಜಂಟಿ ನಿರ್ದೇಶಕರ ಕಛೇರಿಯ ಡಾ|| ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಮೇ 21 ಸಂಜೆ 5:00 ಗಂಟೆಯೊಳಗೆ ಸಲ್ಲಿಸಬಹುದೆಂದು ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚೌಡಮ್ಮನ ಕಳಸೋತ್ಸವ

**ಹುಳಿಯಾರು:** ಹುಳಿಯಾರು ಸಮೀಪದ ತೊರೆಸೂರಗೊಂಡನಹಳ್ಳಿಯಲ್ಲಿ ಶ್ರೀಬಸವೇಶ್ವರಸ್ವಾಮಿ ಮತ್ತು ಶ್ರೀಆದಿಶಕ್ತಿ ಚೌಡಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕಳಸೋತ್ಸವವು ಅತ್ಯಂತ ವೈಭವದಿಂದ ಮಂಗಳವಾರ ಜರುಗಿತು. ಶ್ರೀ ಆದಿಶಕ್ತಿ ಚೌಡೇಶ್ವರಿ ಅಮ್ಮನವರ ಹೊಳೆಸೇವೆ, ಗಂಗಾಪೂಜೆ ನಂತರ ಹೊಳೆಯಲ್ಲಿ ಕಳಸ ಸ್ಥಾಪಿಸುವ ಮೂಲಕ ಉತ್ಸವ ಆರಂಭವಾಯಿತು. ಉತ್ಸವದಲ್ಲಿ ಹುಳಿಯಾರು, ಗೂಬೆಹಳ್ಳಿ, ದೊಡ್ಡಬಿದರೆ, ಸಂಗೇನಹಳ್ಳಿ, ಗರಗದಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಹೆಣ್ಣು ಮಕ್ಕಳು ಭಕ್ತಿ ಪೂರ್ವಕವಾಗಿ ಶ್ರೀ ಅಮ್ಮನವರ ಕಳಸವನ್ನು ತಲೆ ಮೇಲೆ ಹೊತ್ತು ನಡೆಮುಡಿಯೊಂದಿಗೆ ಮೂಲ ಸ್ಥಾನಕ್ಕೆ ಆಗಮಿಸಿದರು. ದೂತರಾಯನ ಜೊತೆ ಶ್ರೀ ಚೌಡಮ್ಮನವರ ಕಳಸೋತ್ಸವವು ಮಂಗಳವಾದ್ಯಗಳೊಂದಿಗೆ ಹೊಳೆಯಿಂದ ಹೊರಟು ಗ್ರಾಮದ ಪ್ರಮುಖ ಬೀದಿಗಳ ಮೂಲಕ ಚೌಡೇಶ್ವರಿ ಅಮ್ಮನವರ ದೇವಸ್ಥಾನ ತಲುಪಿದ ಕಳಸೋತ್ಸವವನ್ನು ಅಪಾರ ಸಂಖ್ಯೆಯಲ್ಲಿ ಭಕ್ತಾಧಿಗಳು ವೀಕ್ಷಿಸಿದರು.ನಂತರ ಘಟೆ ಉತ್ಸವ, ಸಿಡಿ, ಶ್ರೀ ಆದಿಶಕ್ತಿ ಚೌಡೇಶ್ವರಿ ಅಮ್ಮನವರ ಪುಷ್ಪಾಲಂಕಾರದ ವಾನದ ಉತ್ಸವ ಸೇರಿದಂತೆ ಅನೇಕ ಧಾರ್ಮಿಕ ಕೈಂಕರ್ಯಗಳನ್ನು ಮಾಡಲಾಯಿತು. ಎಲ್ಲಾ ಧಾರ್ಮಿಕ ಕೈಂಕರ್ಯಗಳನ್ನು ಗ್ರಾಮಸ್ಥರು ಉಪಸ್ಥಿತರಿದ್ದು ಶ್ರದ್ಧಾಭಕ್ತಿಯಿಂದ ನಡೆಸಿದರು.




## ರಸ್ತೆ ಅಪಘಾತ ಓರ್ವ ಸಾವು

**ಚಾಮರಾಜನಗರ:** ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಸಿಂಗನಲ್ಲೂರು ಬಳಿ ಖಾಸಗಿ ಬಸ್ ಹಾಗೂ ಬೈಕ್ ನಡುವೆ ರಸ್ತೆ ಅಪಘಾತ ಓರ್ವ ಸ್ಥಳದಲ್ಲಿ ಮೃತಪಟ್ಟಿರುವ ಘಟನೆ ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಸಿಂಗನಲ್ಲೂರು ಬಳಿ ಬುಧವಾರ ವೇಳೆ ಜರುಗಿದೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಸಿಂಗನಲ್ಲೂರು ಗ್ರಾಮದ ಶ್ರೀದರ್ (44) ಮೃತ ಪಟ್ಟಂತಹ ದುರ್ದೈವಿಯಾಗಿದ್ದಾರೆ. ಹನೂರು ಪಟ್ಟಣದಲ್ಲಿ ಬಾಳೆಹಣ್ಣುವ್ಯಾಪಾರ ಮಾಡಿಕೊಡುತ್ತಿದ್ದ ಶ್ರೀಧರ್ ಎಂದಿನಂತೆ ಬುಧವಾರ ಬೆಳ್ಳಿಗ್ಗೆ ಹನೂರಿಗೆ ಆಗಮಿಸಿ ತಮ್ಮ ಸ್ವಗ್ರಾಮಕ್ಕೆ ತೆರಳುತ್ತಿದ್ದಂತಹ ಸಂದರ್ಭದಲ್ಲಿ ಬಸ್ ಡಿಕ್ಕಿಹೊಡೆದು ಈ ಅವಘಡ ನಡೆದಿದೆ. ಪೊಲೀಸರು ಆಗಮಿಸಿ ಮಹಜರ್ ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

### ನೆಲಕಚ್ಚಿದ ಟ್ರಾನ್ಸ್‌ಫಾರ್ಮರ್‌ಗಳು, ವಿದ್ಯುತ್ ಕಂಬಗಳು | ಜನಜೀವನ ಅಸ್ತವ್ಯಸ್ತ

# ಆಲಿಕಲ್ಲು ಸಹಿತ ಬಿರುಗಾಳಿ ಮಳೆಗೆ ಬೆಚ್ಚಿದ ಜನ



**ಹುಳಿಯಾರು:** ಚಿಕ್ಕನಾಯಕನಹಳ್ಳಿ ತಾಲೂಕಿನ ಹಲವೆಡೆ ಮಂಗಳವಾರ ಮಧ್ಯಾಹ್ನದ ನಂತರ ಸಂಜೆಯವರೆಗೂ ಆಲಿಕಲ್ಲಿನ ಮೊದಲ ಮಳೆ ಸುರಿಯಿತು. ಗುಡುಗು ಸಹಿತ ಭಾರೀ ಮಳೆ-ಗಾಳಿಗೆ ಹಲವು ಕಡೆ ಮರಗಳು ಉರುಳಿಬಿದ್ದಿವೆ. ವಿದ್ಯುತ್ ಪೂರೈಕೆಯ ಟ್ರಾನ್ಸ್ ಫಾರ್ಮರ್‌ಗಳೂ, ವಿದ್ಯುತ್ ಕಂಬಗಳು ಉರುಳಿ ಬಿದ್ದಿವೆ.

ಹುಳಿಯಾರಿನಲ್ಲಿ ಹೀಗೆ ಮಳೆ ಸುರಿದಿರುವುದು ಬೇವು-ಬೆಲ್ಲದ ಉಗಾದಿ ಹಬ್ಬದಂತಿದೆ. ಒಂದೆಡೆ ರೈತರು ಮಳೆಯಿಂದಾಗಿ ಸಂಭ್ರಮಿಸುತ್ತಿದ್ದರೆ, ಇನ್ನೊಂದು ಕಡೆ ಮಳೆಯ ಕಾರಣದಿಂದ ಮನೆ, ತೋಟ, ಆಸ್ತಿ-ಪಾಸ್ತಿಗೆ ಉಂಟಾದ ಹಾನಿ ಹಾಗೂ ನಷ್ಟಕ್ಕೆ ಸಿಲುಕಿರುವವರ ಸಂಖ್ಯೆಯೂ ಕಮ್ಮಿಯಿಲ್ಲ. ಹುಳಿಯಾರು ಸಮೀಪದ ಲಕ್ಷ್ಮೀಪುರದ ನಿವಾಸಿ ಶಿವಣ್ಣ ಎಂಬುವವರ ಮನೆ ಮೇಲೆ ಮರದ ಕೊಂಬೆಯೊಂದು ಉರುಳಿಬಿದ್ದು ಮನೆಯ ಕಟ್ಟಡಕ್ಕೆ ಅಪಾರ ನಷ್ಟವುಂಟಾಗಿದೆ. ಹುಳಿಯಾರು ಹೋಬಳಿಯ ತಮ್ಮಡಿಹಳ್ಳಿ, ಕೆ.ಸಿಪಾಳ್ಯ ಸೇರಿದಂತೆ ಹಂದನಕೆರೆ ಹೋಬಳಿಯ ಸಬ್ಬೇನಹಳ್ಳಿ, ಪಾಪದಕೋಣ ಮತ್ತಿತರ ಕಡೆ ಹಾಗೂ ಕಂದಿಕೆರೆ ಭಾಗದಲ್ಲೂ ಮರಗಳು ಉರುಳಿ ಬಿದ್ದಿವೆ. ತಿಮ್ಮನಹಳ್ಳಿ ಸರ್ಕಾರಿ ಶಾಲೆಯ ಮೇಲ್ಛಾವಣಿ ಮಳೆಗಾಳಿಗೆ ಹಾರಿ ಬಿದ್ದಿದ್ದರೆ, ಕೆ.ಸಿ.ಪಾಳ್ಯದ ಚಂದ್ರಶೇಖರ್ ಎಂಬುವವರಿಗೆ ಸೇರಿದ ತೋಟದಲ್ಲಿ ತೆಂಗಿನ ಮರಗಳು ಉರುಳಿ ಬಿದ್ದು ಅಪಾರ ನಷ್ಟವುಂಟಾಗಿದೆ. ಬಳ್ಳೆಕಟ್ಟೆ ನರ್ಸರಿಯಲ್ಲಿ ರಾಶಿಗಟ್ಟಲೆ ಆಲಿಕಲ್ಲು ಸಂಗ್ರಹವಾಗಿ ಕರಗಿವೆ ಬೆಳಗುಲಿಯ ಪಾಪನಕೋಣ



ರಸ್ತೆಯಲ್ಲಿನ ಟ್ರಾನ್ಸ್ ಫಾರ್ಮರ್ ಮೇಲೆ ವಿದ್ಯುತ್ ಕಂಬ ಮುರಿದುಬಿದ್ದು ಅದು ಹಾನಿಗೊಳಗಾಗಿದೆ. ತಮ್ಮಡಿಹಳ್ಳಿಯ ಗೋಕುಲನಗರದಲ್ಲಿ ಟಿಸಿ ಮೇಲೆ ಮರ ಮುರಿದುಬಿದ್ದು ಟಿಸಿ ಮುರಿದುಕೊಂಡಿದೆ. ಮಳೆ ಬಂದದ್ದೇ ತಡ ಚಿಕ್ಕನಾಯಕನಹಳ್ಳಿ ಸೇರಿದಂತೆ ಹುಳಿಯಾರು ಪಟ್ಟಣ ಮತ್ತು ತಾಲ್ಲೂಕಿನ ಎಲ್ಲೆಡೆಯಲ್ಲೂ ವಿದ್ಯುತ್ ಕಡಿತಗೊಂಡಿದೆ. ಇದರ ನಡುವೆಯೂ ಏಳೆಂಟು ತಿಂಗಳಿಂದ ಮಳೆಯಿಲ್ಲದೆ ತೆಂಗು ಅಡಿಕೆ ಉಳಿಸಿಕೊಳ್ಳಲು ಪರದಾಡುತ್ತಿದ್ದ ರೈತರಿಗೆ ಈ ಮಳೆ ಮಂದಹಾಸ ಮೂಡವಂತೆ ಮಾಡಿದೆ.

### ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ: ಕುಮಾರ ಸೂಚನೆ

## ಪ್ರಾಣ ಹಾನಿಯಾಗದಂತೆ ಎಚ್ಚರಿಕೆ ವಹಿಸಿ

**ಮಂಡ್ಯ:** ಮಳೆಗಾಲ ಪ್ರಾರಂಭವಾಗುತ್ತಿದ್ದು, ಮಳೆ ಹಾಗೂ ಗಾಳಿಯಿಂದ ಪ್ರಾಣ ಹಾನಿಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ: ಕುಮಾರ ಅವರು ಸೂಚಿಸಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿಪತ್ತು ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇಲಾಖೆಗಳು ಮುನ್ನಚ್ಚರಿಕೆ ಕ್ರಮಗಳನ್ನು ವಹಿಸದೇ ಸಣ್ಣ ಪುಟ್ಟ ಕಾರಣಗಳಿಂದ ಮಳೆ ಅಥವಾ ಬಿರುಗಾಳಿಯಿಂದ ಪ್ರಾಣ ಹಾನಿಯಾದಲ್ಲಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದರ ಜೊತೆಗೆ ವಿಪತ್ತು ನಿರ್ವಹಣಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಈ ಬಾರಿ ಸಾಮಾನ್ಯ ಮಳೆಗಿಂತ ಅಧಿಕ ಮಳೆಯಾಗುವ ಸಾಧ್ಯತೆಯಿದೆ. ಮಳೆಯ ಜೊತೆ ಹೆಚ್ಚಿನ ಗಾಳಿಯು ಸಂಭವಿಸಲಿದ್ದು, ಕೂಡಲೇ ಎಲ್ಲಾ ಇಲಾಖೆಯವರು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದರು.

ದುರ್ಬಲ ಕೊಂಬೆಗಳನ್ನು ತೆರವುಗೊಳಿಸಿ ನಗರ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯಿತಿಗಳು ಅರಣ್ಯ ಇಲಾಖೆಯೊಂದಿಗೆ ಜಂಟಿಯಾಗಿ ಕಾರ್ಯನಿರ್ವಹಿಸಿ ಮರದ ದುರ್ಬಲ ಕೊಂಬೆಗಳನ್ನು ತೆರವುಗೊಳಿಸಿ ಎಂದರು.

ಮಳೆ ಬಂದ ಸಂದರ್ಭದಲ್ಲಿ ಮರಗಳು, ವಿದ್ಯುತ್ ಕಂಬಗಳು ಗಾಳಿಯಿಂದ ಬಿದ್ದು ಹೋದಲ್ಲಿ ಅವುಗಳನ್ನು ತಕ್ಷಣ ತೆರವುಗೊಳಿಸುವ ರೀತಿ ಇಲಾಖೆ ಸಜ್ಜಾಗಿರಬೇಕು. ಮಳೆಯ ಸಂದರ್ಭದಲ್ಲಿ ಕ್ಷಿಪ್ರವಾಗಿ ಕೆಲಸ ನಿರ್ವಹಿಸಲು ತಂಡಗಳನ್ನು ರಚಿಸಿ. ಸಾರ್ವಜನಿಕರಿಂದ ದೂರು ಬಾರದಂತೆ ಕೆಲಸನಿರ್ವಹಿಸಿ ಎಂದರು.

ಕಂಟ್ರೋಲ್ ರೂಂ ತಾಲ್ಲೂಕುವಾರು ತಾಲ್ಲೂಕು ಕಚೇರಿ, ತಾಲ್ಲೂಕು ಪಂಚಾಯತ್ ಕಚೇರಿ, ನಗರ ಸ್ಥಳೀಯ ಸಂಸ್ಥೆಗಳ ಕಚೇರಿ, ಚೆಸ್ಕಾಂ ಕಚೇರಿ, ಅರಣ್ಯ ಇಲಾಖೆಗಳಲ್ಲಿ 2 ದಿನದೊಳಗಾಗಿ ಕಂಟ್ರೋಲ್ ರೂಂ ತೆರೆದು ಸಾರ್ವಜನಿಕರು ಸಂಪರ್ಕಿಸಬಹುದಾದ




ದೂರವಾಣಿ ಸಂಖ್ಯೆಗಳ ವಿವರವನ್ನು ಮಾಹಿತಿಗಾಗಿ ಅನಾವರಣಗೊಳಿಸಬೇಕು ಎಂದರು.

ಒಳಚರಂಡಿಗಳ ಕಸ ಹಾಗೂ ಇನ್ನಿತರೆ ವಸ್ತುಗಳು ಸೇರಿಕೊಂಡು ಮಳೆ ನೀರು ಹರಿಯುವಿಕೆಗೆ ತೊಂದರೆಯಾಗುತ್ತದೆ. ಒಳಚರಂಡಿಯಲ್ಲಿರುವ ಕಸವನ್ನು ತೆರವುಗೊಳಿಸಿ ಎಂದರು.

ಮಳೆ ಹಾಗೂ ಬಿರುಗಾಳಿಯ ಸಂದರ್ಭದಲ್ಲಿ ಸಾರ್ವಜನಿಕರಿಗೆ ಮರಗಳ ಕೆಳಗಡೆ ವಾಹನಗಳ ನಿಲುಗಡೆ ಮಾಡದಂತೆ ಹಾಗೂ ಇನ್ನಿತರೆ ಮುಂಜಾಗ್ರತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಿ ಎಂದರು.

ಈ ಹಿಂದಿನ ಸಾಲುಗಳಲ್ಲಿ ಮಳೆಯಿಂದ ಮುಳುಗಡೆ ಅಥವಾ ತೊಂದರೆಯಾದ ಗ್ರಾಮಗಳನ್ನು ಪಟ್ಟಿ ಮಾಡಿಕೊಂಡು ಸಿದ್ಧತೆಗಳನ್ನು ಮಾಡಿಕೊಳ್ಳಿ. ನುರಿತ ಈಜುಗಾರರು, ಜೆ.ಸಿ.ಬಿ, ಹಿಟ್ಯಾಚಿ ಮಾಲೀಕರ ಸಂಪರ್ಕ ಸಂಖ್ಯೆಗಳನ್ನು ಸಂಗ್ರಾಹಿಸಿಟ್ಟಿಕೊಳ್ಳಿ ಎಂದರು.

ಮಳೆಯಿಂದ ಮನೆ ಹಾನಿ ಅಥವಾ ಬೆಳೆ ಹಾನಿಯಾದಲ್ಲಿ ತಕ್ಷಣ ಪರಿಶೀಲಿಸಿ ತಹಶೀಲ್ದಾರ್ ಜಿಲ್ಲಾಧಿಕಾರಿಗಳ ಕಚೇರಿಗೆ ವರದಿ ಸಲ್ಲಿಸಬೇಕು ಎಂದರು.

ಬೆಂಗಳೂರು- ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಳೆ ನೀರು ನಿಲ್ಲದಂತೆ ನೋಡಿಕೊಳ್ಳಬೇಕು.ಮಳೆ ನೀರು ನಿಂತಲ್ಲಿ ತೆರವುಗೊಳಿಸಲು ತಂಡಗಳನ್ನು ರಚಿಸಿ ದಿನದ 24 ಗಂಟೆ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ವಿದ್ಯುತ್ ಕಂಬಗಳು ಸುಸ್ಥಿತಿಯಲ್ಲಿರುವ ಬಗ್ಗೆ ಪರಿಶೀಲಿಸಿ ವರದಿ ನೀಡಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ: ಹೆಚ್. ಎಲ್ ನಾಗರಾಜು ಅವರು ಮಾತನಾಡಿ ಈ ಹಿಂದೆ ಮಳೆಯಾದ ಸಂದರ್ಭದಲ್ಲಿ ನಾಗಮಂಗಲ ಬಸ್ ನಿಲ್ದಾಣದಲ್ಲಿ ನೀರು ತುಂಬಿಕೊಂಡು ತೊಂದರೆಯಾಗಿತ್ತು. ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಿ. ಕೆರೆಗಳಲ್ಲಿ ಹೂಳು ತೆಗೆಯುವ ಕೆಲಸ ವ್ಯವಸ್ಥಿತವಾಗಿ ನಡೆಯಲಿ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸೀಫ್, ಪಾಂಡವಪುರ ಉಪವಿಭಾಗಾಧಿಕಾರಿ ಮಾರುತಿ, ಚೆಸ್ಕಾಂ ಅಧೀಕ್ಷಕ ಅಭಿಯಂತರ ಸೋಮಶೇಖರ್, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಕೃಷ್ಣ ಕುಮಾರ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ರೂಪಶ್ರೀ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಶ್ರೀಗಂಧ ಮೀಸಲು ಅರಣ್ಯ ಪ್ರದೇಶದಲ್ಲಿ ಕಾಡಾನೆ ಸೆರೆ

**ಚಾಮರಾಜನಗರ :** ಚಾಮರಾಜನಗರ ಜಿಲ್ಲೆಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಜಿ.ಎಸ್. ಬೆಟ್ಟ ವಲಯದ ಕಾಡಂಚಿನ ಗ್ರಾಮಗಳಾದ ಹಂಗಳ, ಕಲೀಗೌಡನಹಳ್ಳಿ ಮತ್ತು ದೇವರಳ್ಳಿ ವ್ಯಾಪ್ತಿಯಲ್ಲಿ ಕಳೆದ ಆರು

ತಿಂಗಳುಗಳಿಂದ ಕಾಡಾನೆಯೊಂದು ಲಗ್ಗೆ ಇಟ್ಟು ರೈತರ ಬೆಳೆಗಳನ್ನು ಅಪಾರವಾಗಿ ನಷ್ಟ ಮಾಡುತ್ತಿದ್ದ ಕಾಡಾನೆಯನ್ನು ಬುಧವಾರ ಬೆಳಗ್ಗೆ ಸೋಮನಾಥಪುರ ಸ್ಯಾಂಡಲ್ ಮೀಸಲು ಅರಣ್ಯ ಪ್ರದೇಶದಲ್ಲಿ ಸೆರೆಹಿಡಿದು ರಕ್ಷಿಸಲಾಯಿತು.

ಚಾಮರಾಜನಗರ ಜಿಲ್ಲೆಯ ಬಂಡೀಪುರ ರಾಷ್ಟ್ರೀಯ ಉದ್ಯಾನವನ ಹಾಗೂ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಹಿಮವದ್ ಗೋಪಾಲಸ್ವಾಮಿ ಬೆಟ್ಟ ವಲಯ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಲ್ಲಿ ಉಪಟಳ ನೀಡುತ್ತಿದ್ದ 40 ವರ್ಷದ ಕಾಡಾನೆಯನ್ನು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಬಂಡೀಪುರ ಅರಣ್ಯಾಧಿಕಾರಿ ಎಸ್ ಪ್ರಭಾಕರನ್ ನೇತೃತ್ವದಲ್ಲಿ ಕುಮ್ಕಿ ಸಾಕಾನೆಗಳಾದ ಈಶ್ವರ, ಕಂಜನ್, ಶ್ರೀರಾಮ, ಲಕ್ಷ?ಮಣ ಹಾಗೂ ರಾಂಪುರ ಆನೆ ಶಿಬಿರದ ರೋಹಿತ್ ಮತ್ತು ಸಾಕಾನೆ ಮೇಲ್ವಿಚರಣಾ ಸಿಬ್ಬಂದಿಗಳನ್ನೊಳಗೊಂಡ ಕಾರ್ಯಾಚರಣೆಯ ತಂಡದ ನಿರಂತರ ಶ್ರಮದೊಂದಿಗೆ ಸೆರೆ ಹಿಡಿಯುವ ಕಾರ್ಯಾಚರಣೆಯು ಯಶಸ್ವಿಯಾಗಿದೆ. ಸಹಾಯಕ ಅರಣ್ಯಾಧಿಕಾರಿ ನವೀನ್, ವಲಯ ಅರಣ್ಯಾಧಿಕಾರಿಗಳಾದ ಮಂಜುನಾಥ್ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಸೆರೆ ಹಿಡಿದ ಆನೆಯನ್ನು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಜನಸಮುದಾಯ ಪ್ರದೇಶಕ್ಕೆ ಹತ್ತಿರವಿಲ್ಲದಂತ ಅರಣ್ಯ ಪ್ರದೇಶದ ಮಧ್ಯಭಾಗ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ.



## ಡಿಪ್ಲೊಮಾ ಇನ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಗಾಗಿ ಅರ್ಜಿ

**ಬೆಂಗಳೂರು:** ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು ಇದರ ಅಂಗ ಸಂಸ್ಥೆಯಾದ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು ವತಿಯಿಂದ ನಡೆಸಲಾಗುವ ಡಿಪ್ಲೊಮಾ ಇನ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಯನ್ನು ಜುಲೈ 1 ರಿಂದ ಪ್ರಾರಂಭಿಸಲಾಗುತ್ತಿದ್ದು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಮತ್ತು ರಾಮನಗರ ಜಿಲ್ಲೆಗಳ ಖಾಸಗಿ ಅಭ್ಯರ್ಥಿಗಳಿಂದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಂದ ಮತ್ತು ಎಲ್ಲಾ ವಿವಿಧ ಸಹಕಾರ ಸಂಘ/ಬ್ಯಾಂಕ್‌ಗಳ ಉದ್ಯೋಗಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ತರಬೇತಿ ಪಡೆಯುವುದರಿಂದ ಸಹಕಾರ ಸಂಘ / ಸಂಸ್ಥೆಗಳ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ಅನುಕೂಲವಾಗುತ್ತದೆ ಮತ್ತು ನೇಮಕಾತಿ ಪ್ರಕ್ರಿಯೆಯಲ್ಲಿ ಅದ್ಯತೆ ನೀಡಲಾಗುವುದು.

ಈತರಬೇತಿಪಡೆಯಲುಕನಿಷ್ಠವಿದ್ಯಾರ್ಹತೆಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಖಾಸಗಿ ಅಭ್ಯರ್ಥಿಗಳಿಗೂ ಸಹ ಪ್ರವೇಶ ಪಡೆಯಲು ಅವಕಾಶವಿರುತ್ತದೆ. ವಯೋಮಿತಿ 16 ವರ್ಷ ದಾಟಿದವರಾಗಿರಬೇಕು. ಅರ್ಜಿಯನ್ನು ಮೇ 31 ರ ಒಳಗಾಗಿ ಸಲ್ಲಿಸುವುದು. ತರಬೇತಿ ಪಡೆಯುವ ಎಲ್ಲಾ ಅಭ್ಯರ್ಥಿಗಳಿಗೆ ಮಾಹೆಯಾನ ರೂ. 500/- ಶಿಷ್ಯ ವೇತನ ನೀಡಲಾಗುವುದು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಮಾಸಿಕ ರೂ. 600/- ಶಿಷ್ಯ ವೇತನ ನೀಡಲಾಗುವುದು. ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್, ಸಹಕಾರ ಭವನ, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಕಟ್ಟಡ, ನಂ 1/3, 2ನೇ ಮಹಡಿ, 3ನೇ ಮುಖ್ಯರಸ್ತೆ, ಕನ್ನಡ ಸಾಹಿತ್ಯ ಪರಿಷತ್ ಹಿಂಭಾಗ, ಮಕ್ಕಳಕೂಟ ಹತ್ತಿರ, ಚಾಮರಾಜಪೇಟೆ, ಬೆಂಗಳೂರು ಹಾಗೂ ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಈ ಜಿಲ್ಲೆಯ ಜಿಲ್ಲಾ ಸಹಕಾರ ಸಂಘಗಳಲ್ಲೂ ಸಹ ಅರ್ಜಿ ದೊರೆಯುತ್ತದೆ. 9902189872, 9036256781 ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಚಾಲಕ-ಕಂ-ನಿರ್ವಾಹಕ ನೇಮಕಾತಿ

**ಬೆಂಗಳೂರು:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಚಾಲಕ-ಕಂ-ನಿರ್ವಾಹಕ ಹುದ್ದೆಗಳ ನೇರ ನೇಮಕಾತಿಗಾಗಿ ಹೊರಡಿಸಲಾಗಿದ್ದ ಅಧಿಸೂಚನೆಯನ್ವಯ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳಿಗೆ ಮಾರ್ಚ್ 6 ರಿಂದ ಮೂಲ ದಾಖಲಾತಿ / ದೇಹದಾಡ್ಯತೆ ಪರಿಶೀಲನೆಯನ್ನು ಪ್ರಾರಂಭಿಸಲಾಗಿದ್ದು, ಪ್ರಸ್ತುತ ಸದರಿ ಪರಿಶೀಲನಾ ಕಾರ್ಯವನ್ನು ಮೇ 15 ರಿಂದ ಬೆಂಗಳೂರಿನ ಶಾಂತಿನಗರದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಛೇರಿಯಲ್ಲಿ ಮುಂದುವರೆಸಲಾಗುತ್ತಿದೆ. ಈ ಸಂಬಂಧ ಅಭ್ಯರ್ಥಿಗಳು ಮೇ 8 ರಿಂದ ನಿಗಮದ ಅಧಿಕೃತ ವೆಬ್-ಸೈಟ್ ksrtcjobs.karnataka.gov.in ರಲ್ಲಿ ಕರೆಪತ್ರವನ್ನು ಡೌನ್-ಲೋಡ್ ಮಾಡಿಕೊಂಡು ಕರೆಪತ್ರದಲ್ಲಿ ತಿಳಿಸಿರುವ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ನಿಗದಿತ ದಿನಾಂಕ ಹಾಗೂ ಸಮಯಕ್ಕೆ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ. ವಿಶೇಷ ಸೂಚನೆ: ಪ್ರಸ್ತುತ ಅಭ್ಯರ್ಥಿಗಳ ಮೂಲ ದಾಖಲಾತಿ / ದೇಹದಾಡ್ಯತೆ ಪರಿಶೀಲನೆ ಮಾತ್ರ ನಡೆಸಲಾಗುತ್ತಿದೆ. ಅರ್ಹರಾದ ಅಭ್ಯರ್ಥಿಗಳಿಗೆ ಚಾಲನಾ ವೃತ್ತಿ ಪರೀಕ್ಷೆ ನಡೆಸುವ ಕುರಿತು ಪ್ರತ್ಯೇಕ ದಿನಾಂಕ / ಸ್ಥಳವನ್ನು ನಿಗಧಿಪಡಿಸಲಾಗುವುದು. ಸದರಿ ಹುದ್ದೆಯ ಆಯ್ಕೆಯು ಗಣಕೀಕೃತ ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಹಾಗೂ ಅಧಿಸೂಚನೆ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ಮೀಸಲಾತಿ ನಿಯಮಗಳಿಗೆ ಅನುಗುಣವಾಗಿ ಪಾರದರ್ಶಕವಾಗಿ ನಡೆಯುವುದರಿಂದ ಮಾನವ ಹಸ್ತಕ್ಷೇಪ ಇರುವುದಿಲ್ಲ.

## ಅಕ್ಷಯ ತೃತೀಯ ದಿನ ಬಾಲ್ಯವಿವಾಹ ನಡೆಯದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಿ

**ಬೆಂಗಳೂರು ಗ್ರಾಮಾಂತರ :** ಮೇ 10 ರಂದು ಬಸವ ಜಯಂತಿ ಹಾಗೂ ಅಕ್ಷಯ ತೃತೀಯ ದಿನವಾದ ಕಾರಣ ಈ ಸಂದರ್ಭದಲ್ಲಿ ವೈಯಕ್ತಿಕ ವಿವಾಹಗಳು ಹಾಗೂ ಸಾಮೂಹಿಕ ವಿವಾಹಗಳು ನಡೆಯುವ ಸಾಧ್ಯತೆ ಹೆಚ್ಚಾಗಿದ್ದು, ಇಂತಹ ವಿವಾಹಗಳಲ್ಲಿ ಬಾಲ್ಯವಿವಾಹಗಳು ನಡೆಯುವ ಸಾಧ್ಯತೆಯೂ ಸಹ ಹೆಚ್ಚಿರುತ್ತದೆ. ಈಗಾಗಲೇ ಶಾಲೆ ಬಿಟ್ಟ ಮಕ್ಕಳ ಅನುಸರಣೆ ಮಾಡಿ ಬಾಲ್ಯವಿವಾಹಕ್ಕೆ ಒಳಗಾಗದಂತೆ ಸೂಕ್ತ ಕ್ರಮಕೈಗೊಳ್ಳುವುದು. ಈ ಸಮಯದಲ್ಲಿ ಯಾವುದೇ ಬಾಲ್ಯವಿವಾಹಗಳು ನಡೆಯದಂತೆ ಸೂಕ್ತ ಮುನ್ನೆಚ್ಚರಿಕೆ ಕ್ರಮವಹಿಸಬೇಕು. ಜಿಲ್ಲೆಯ ಸಾಮೂಹಿಕ ವಿವಾಹಗಳು ನಡೆಯಲು ಸಾಧ್ಯತೆಗಳಿರುವಂತಹ ಪ್ರಸಿದ್ದ ದೇವಸ್ಥಾನಗಳಾದ ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಮಣ್ಯ, ಮಧುರೆ ದೇವಸ್ಥಾನ, ನೆಲಮಂಗಲ ತಾಲ್ಲೂಕಿನ ಶಿವಗಂಗೆ, ದೇವಹಳ್ಳಿ ತಾಲ್ಲೂಕಿನ ತಿಮ್ಮರಾಯಸ್ವಾಮಿ ಬೆಟ್ಟ(ಅವತಿ) ಹಾಗೂ ಹೊಸಕೋಟೆ ತಾಲ್ಲೂಕಿನ ಶ್ರೀ ಕಾಳಬೈರವ ದೇವಸ್ಥಾನ ಜಡಿಗೇನಹಳ್ಳಿ, ಅನುಗೊಂಡನಹಳ್ಳಿಯ ಮದ್ದೂರಮ್ಮ ದೇವಸ್ಥಾನದ ಮುಖ್ಯಸ್ಥರಿಗೆ ಸಾಮೂಹಿಕ ವಿವಾಹಗಳಲ್ಲಿ ಹಾಗೂ ಕಲ್ಯಾಣ ಮಂಟಪಗಳಲ್ಲಿ ಯಾವುದೇ ಬಾಲ್ಯವಿವಾಹಗಳಿಗೆ ಅವಕಾಶ ಮಾಡಿಕೊಡಬಾರದೆಂದು ಬಾಲ್ಯವಿವಾಹ ಕಾಯ್ದೆಯ ಕುರಿತು ಅವರಿಗೆ ತಿಳಿಸಿ, ಅರಿವು ಮೂಡಿಸಬೇಕು. ಎಲ್ಲಾ ವೃತ್ತದ ಮೇಲ್ವಿಚಾರಿಕಿಯವರಿಗೆ, ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ, ಆಯಾ ಗ್ರಾಮಗಳಲ್ಲಿ ಬಾಲ್ಯವಿವಾಹ ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೇಸಿಗೆ ಕಾಲದಲ್ಲಿ ರೇಷ್ಮೆ ಹುಳು ಸಾಕಾಣಿಕೆ, ಬೆಳೆ ನಿರ್ವಹಣೆ

**ಕೋಲಾರ:** ಬೇಸಿಗೆ ಕಾಲದಲ್ಲಿ ಉಷ್ಣಾಂಶ ಹೆಚ್ಚಿದ್ದು, ತೇವಾಂಶ ಕಡಿಮೆಯಾಗುವ ಕಾರಣ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಏರುಪೇರಾಗಿ ಹುಳುಗಳು ಹಾಲು ಮತ್ತು ಸಪ್ಪೆ ರೋಗಕ್ಕೆ ತುತ್ತಾಗುವ ಸಂಭವವಿರುತ್ತದೆ. ಆದ್ದರಿಂದ ಬೇಸಿಗೆ ಕಾಲದಲ್ಲಿ ರೇಷ್ಮೆ ಕೃಷಿಕರು ಬೆಳೆ ಸಂರಕ್ಷಣೆ ಮಾಡಲು ಮುಂಜಾಗ್ರತೆ ಕ್ರಮಗಳನ್ನು ಅನುಸರಿಸಬೇಕು.

ರೇಷ್ಮೆ ಹುಳು ಸಾಕಾಣಿಕೆ ಮನೆಯ ಸುತ್ತಲೂ ಗೋಡೆಗಳ ಮೇಲೆ ಬಿಸಿಲು ಬೀಳದಂತೆ ತೆಂಗಿನ ಗರಿಯಿಂದ ಚಪ್ಪರ ಹಾಕಬೇಕು. ಅದರಲ್ಲೂ ದಕ್ಷಿಣ ಮತ್ತು ಪಶ್ಚಿಮದ ಗೋಡೆಗಳಿಗೆ ಬಿಸಿಲು ಬೀಳದಂತೆ ಎಚ್ಚರವಹಿಸಿ ಚಪ್ಪರ ಹಾಕಿ ಹಾಗೂ ಕಿಟಕಿಗಳಿಗೆ ಗೋಣಿತಾಟುಗಳನ್ನು ಹಾಕಿ ಆಗಿಂದಾಗ್ಗೆ ನೀರಿನಿಂದ ನೆನೆಸಬೇಕು.

ರೇಷ್ಮೆ ಹುಳು ಸಾಕಾಣಿಕೆ ಮನೆಯ ಮೇಲ್ಛಾವಣಿ ಬಿಸಿಲಿನಿಂದ ಕಾಯದಂತೆ ಶೇಡ್‌ನೆಟ್‌ಗಳನ್ನು ಹೊದಿಸಬೇಕು. ರೇಷ್ಮೆ ಹುಳು ಸಾಕಾಣಿಕೆ ಮನೆಯ ಮೇಲ್ಛಾವಣಿ ಆರ್.ಸಿ.ಸಿ. ಆಗಿದ್ದರೆ ತುಂತುರು ನೀರಾವರಿ ಮೂಲಕ ಬೆಳಿಗ್ಗೆ 11-30 ರಿಂದ 12-00 ಗಂಟೆಗೆಗೊಮ್ಮೆ ಮತ್ತು ಸಂಜೆ 4-00 ರಿಂದ 5-00 ಗಂಟೆಗೆಗೊಮ್ಮೆ ನೀರು ಹಾಯಿಸಬೇಕು. ಆರ್.ಸಿ.ಸಿ. ಮನೆಗಳ ಮೇಲ್ಛಾವಣಿಗೆ ಹುಳು ಸಾಕಾಣಿಕೆ ಕೂಲ್ ಸಮ್ ಬಳಿಯಬೇಕು. ಇದರಿಂದ ಮೇಲ್ಛಾವಣಿ ಬಿಸಿಲಿಗೆ ಕಾಯುವುದಿಲ್ಲ ಹಾಗೂ ಇದರಿಂದ 3-4 ಸೆ. ಉಷ್ಣಾಂಶ ಕಡಿಮೆಯಾಗುತ್ತದೆ.

ಹುಳು ಸಾಕಾಣಿಕೆ ಹಿಪ್ಪುನೇರಳೆ ಸೊಪ್ಪನ್ನು ತಂಪು ಹೊತ್ತಿನಲ್ಲಿ ತರಬೇಕು ಹಾಗೂ ಬೆಳಿಗ್ಗೆ ಮತ್ತು ರಾತ್ರಿ ವೇಳೆಯಲ್ಲಿ ಹುಳುಗಳಿಗೆಕೊಡಬೇಕು. ಒಂದು ಸೊಪ್ಪಿನ ಪ್ರಮಾಣವನ್ನು ಎರಡು ಭಾಗಮಾಡಿ 11-00ಗಂಟೆಗೆ ಮತ್ತು ಮದ್ಯಾಹ್ನ 4-00 ಗಂಟೆಗೊಮ್ಮೆ ಸೊಪ್ಪನ್ನು ತೆಳುವಾಗಿ ನೀಡವುದು. ಕಟಾವು ಮಾಡಿದ ಸೊಪ್ಪನ್ನು ತೇವಾಂಶ ಆರದಂತೆ ಸೊಪ್ಪನ್ನು ಗೋಣಿತಾಟಿನಿಂದ ಮುಚ್ಚಿ ನೀರನ್ನು ಸಿಂಪರಣೆ ಮಾಡಬೇಕು. ಹುಳು ಸಾಕಾಣಿಕೆ ಮನೆಯ ಒಳಗಡೆ ಮಣ್ಣಿನ ಮಡಕೆಯಲ್ಲಿ ನೀರು ತುಂಬಿಸಿ ನೇತುಹಾಕಿ ಇದರಿಂದ ತೇವಾಂಶ



ಹೆಚ್ಚುಮಾಡಬಹುದು. ಹುಳು ಸಾಕಾಣಿಕಾ ಮನೆಯ ಒಳಗಡೆ ಗೋಣಿ ತಾಟುಗಳನ್ನು ನೆಲದ ಮೇಲೆ ಹರಡಿ ನೀರನ್ನು ಚುಮುಕಿಸಬೇಕು.

ಬೇಸಿಗೆಯಲ್ಲಿ ಹುಳು ಸಾಕಾಣಿಕೆ ಮನೆಯ ಉಷ್ಣಾಂಶ 27'0 28'0 ಸೆ. ಹಾಗೂ ತೇವಾಂಶ ಶೇ.60-70 ಇರುವಂತೆ ನೋಡಿಕೊಳ್ಳಬೇಕು. ಉಷ್ಣಾಂಶವನ್ನು ಕಡಿಮೆಮಾಡಲು ಮನೆಯ ಸುತ್ತಲೂ ಮರಗಳನ್ನು ಹಾಕಿ ನೀರಿನಿಂದ ನೆನೆಸಬೇಕು. ಹಣ್ಣಾದ ಹುಳುಗಳು ಚಂದ್ರಿಕೆಗಳಿಗೆ ಬಿಟ್ಟನಂತರ ಚಂದ್ರಿಕೆಗಳನ್ನು ನೆರಳಿನಲ್ಲಿ ಇಡತಕ್ಕದ್ದು ಹಾಗೂ ಚಂದ್ರಿಕೆಗಳನ್ನು ಇಟ್ಟ ಜಾಗದಲ್ಲಿ ಉಷ್ಣಾಂಶ 27'0-28'0 ಸೆ. ಹಾಗೂ ತೇವಾಂಶ ಶೇ.60-70 ಇರುವಂತೆ ನೋಡಿಕೊಳ್ಳಬೇಕೆಂದು ಜಿಲ್ಲಾ ಪಂಚಾಯತಿಯ ರೇಷ್ಮೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



### ಬೆಳೆ ಪರಿಹಾರ

**ಕೋಲಾರ 2023ನೇ ಸಾಲಿನ ಮುಂಗಾರು ಹಂಗಾಮಿನ ಬರ ಪರಿಸ್ಥಿತಿ ಹಿನ್ನಲೆಯಲ್ಲಿ ರೈತರಿಗೆ ಡಿಜಿಟಲ್ ಬೆಳೆ ಸಮೀಕ್ಷೆ ಮಾಹಿತಿ ಮತ್ತು ಎಫ್.ಐ.ಡಿ ಹೊಂದಿರುವ ರೈತರ ಮಾಹಿತಿಯನ್ನಾಧರಿಸಿ ಮೊದಲನೇ ಹಂತದಲ್ಲಿ ಗರಿಷ್ಠ ರೂ.2000/- ಗಳಂತೆ ಒಟ್ಟು 50,070 ರೈತರಿಗೆ ರೂ.890.65 ಲಕ್ಷಗಳ ಇನ್‌ಪುಟ್ ಸಬ್ಸಿಡಿಯು ಮೊತ್ತವನ್ನು ಜಮೆ ಮಾಡಲಾಗಿರುತ್ತದೆ. ಎಸ್.ಡಿ.ಆರ್.ಎಫ್ ಮಾರ್ಗಸೂಚಿಗಳ ಪ್ರಕಾರ ಹೆಚ್ಚುವರಿ ಮೊತ್ತವನ್ನು ಮೇ 02 ರಂದು ಒಟ್ಟು 32,918 ರೈತರಿಗೆ ರೂ.1497.75 ಲಕ್ಷಗಳ ಇನ್‌ಪುಟ್ ಸಬ್ಸಿಡಿಯನ್ನು ಜಮೆ ಮಾಡಲು ಅನುಮೋದನೆ ನೀಡಲಾಗಿದ್ದು, ಸರ್ಕಾರದಿಂದ ನೇರವಾಗಿ ಆಧಾರ್ ಸಂಖ್ಯೆ ಜೋಡಣೆಯಾಗಿರುವ ರೈತರ ಬ್ಯಾಂಕ್ ಖಾತೆಗಳಿಗೆ ಪರಿಹಾರ ಧನವನ್ನು ಜಮೆ ಮಾಡಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕೋಲಾರ ಜಿಲ್ಲಾಧಿಕಾರಿಗಳ ಕಛೇರಿಯ ದೂ.ಸಂ.8277927080/08152-243506, ಬಂಗಾರಪೇಟೆ ತಾಲ್ಲೂಕು ಕಛೇರಿಯ ದೂ.ಸಂ.8277932044/08153-255263, ಕೋಲಾರ ತಾಲ್ಲೂಕು ಕಛೇರಿಯ ದೂ.ಸಂ.9900784885/08152-222056, ಮುಳಬಾಗಿಲು ತಾಲ್ಲೂಕು ಕಛೇರಿಯ ದೂ.ಸಂ.8277932031/08159-242049, ಕೆ.ಜಿ.ಎಫ್ ತಾಲ್ಲೂಕು ಕಛೇರಿಯ ದೂ.ಸಂ.7090409885/08971834616, ಮಾಲೂರು ತಾಲ್ಲೂಕು ಕಛೇರಿಯ ದೂ.ಸಂ.7019668471/08151-232699, ಶ್ರೀನಿವಾಸಪುರ ತಾಲ್ಲೂಕು ಕಛೇರಿಯ ದೂ.ಸಂ.9972783331/08157-246222 ಗೆ ಸಾರ್ವಜನಿಕರು ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆಯೊಳಗೆ ಬೆಳೆ ಪರಿಹಾರ ಹಣ ಖಾತೆಗೆ ಜಮಾ ಆಗದೆ ಇರುವವರು ದೂರು ಸಲ್ಲಿಸಬಹುದು. ಹಾಗೂ ಸಂಬಂಧಪಟ್ಟ ತಾಲ್ಲೂಕು ಕೃಷಿ ಅಧಿಕಾರಿ, ತಹಶೀಲ್ದಾರ್ ರವರ ಕಛೇರಿಗೆ ಖುದ್ದು ಭೇಟಿ ನೀಡಿ ಮಾಹಿತಿ ಪಡೆಯಬಹುದೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

# ಹುಲಿ ದಾಳಿಗೆ 2 ಆಡು ಮರಿ ಬಲಿ

**ಚಾಮರಾಜನಗರ :** ಚಾಮರಾಜನಗರತಾಲ್ಲೂಕಿನ ಬಡಗಲಪುರ ಗ್ರಾಮದ ಎಣ್ಣೆಹೊಳೆ ದೇವಸ್ಥಾನ ಬಳಿ ಹುಲಿ ದಾಳಿಗೆ 2 ಆಡು ಮರಿ ಮೃತಪಟ್ಟಿರುವ ಘಟನೆ ಬುಧವಾರ ಬೆಳಕಿಗೆ ಬಂದಿದೆ.

ಚಾಮರಾಜನಗರತಾಲ್ಲೂಕಿನ ಬಡಗಲಪುರ ಗ್ರಾಮದ ಕರಿಗಣ್ಣ ಎಂಬುವರಿಗೆ ಸೇರಿದ ಮರಿಗಳು ಮೃತಪಟ್ಟಿವೆ. ಎಣ್ಣೆಹೊಳೆ ದೇವಸ್ಥಾನ ಬಳಿ 20 ಆಡು ಮರಿಗಳನ್ನು ಮೇಯಿಸುತ್ತಿದ್ದ ವೇಳೆಯಲ್ಲಿ ಹುಲಿ 2 ಆಡು ಮರಿಗಳ ಮೇಲೆ ದಾಳಿ ನಡೆಸಿದೆ. ಈ ಸಂದರ್ಭ ಕರಿಗಣ್ಣ ಕೂಗಿಕೊಂಡ ಪರಿಣಾಮ ಹುಲಿ ಪರಾರಿಯಾಗಿದೆ. ಇದೇ ರೀತಿ ಕಳೆದ 15 ದಿನಗಳ ಹಿಂದೆ ಕರಿಗಣ್ಣ ಅವರ ಮರಿಗಳನ್ನು ಮೇಯಿಸಲು ಹೋಗಿದ್ದ ಸಂದರ್ಭದಲ್ಲಿ 3 ಮರಿಗಳು ಕಾಣೆಯಾಗಿದ್ದವು. ಈ ಮೊದಲು ರಂಗಸ್ವಾಮಿ ಅವರ 30 ಸಾವಿರ ಬೆಲೆ ಬಾಳುವ ಹಸು ಮೃತಪಟ್ಟಿದ್ದು, ಈಗ 20 ಸಾವಿರಕ್ಕೂ ಹೆಚ್ಚು ಬೆಲೆ ಬಾಳುವ 2 ಆಡು ಮರಿಗಳು ಮೃತಪಟ್ಟಿರುವ ಪರಿಣಾಮ ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸೂಕ್ತ ಪರಿಹಾರ ನೀಡಬೇಕು ಹಾಗೂ ಕೂಡಲೇ ಹುಲಿ ಸೆರೆಗೆ ಕ್ರಮಕೈಗೊಳ್ಳ ಬೇಕು,'' ಎಂದು ಕುಮಾರ್, ಶಿವಕುಮಾರ್, ಚಂದ್ರ, ರವಿ, ಮಂಜು ಆಗ್ರಹಿಸಿದ್ದಾರೆ.



## ಸಂಜೆ ಟಿಪ್ಸ್

# ಎಲೆಕ್ಟ್ರೀಷಿಯನ್ ಸಮುದಾಯದ ಸಬಲೀಕರಣಕ್ಕೆ ಮುಂದಾದ ಪಾಲಿಕ್ಯಾಬ್

ಭಾರತದ ಅತಿದೊಡ್ಡ ವೈರ್ ಮತ್ತು ಕೇಬಲ್ ತಯಾರಕ ಸಂಸ್ಥೆ ಆಗಿರುವ ಹಾಗೂ ವೇಗವಾಗಿ ಬೆಳೆಯುತ್ತಿರುವ ಎಫ್‌ಎಂಸಿಜಿ ಕಂಪನಿಗಳಲ್ಲಿ ಒಂದಾಗಿರುವ ಪಾಲಿಕ್ಯಾಬ್, ತನ್ನ ಹೊಚ್ಚ ಹೊಸ 'ಪಾಲಿಕ್ಯಾಬ್ ಎಕ್ಸ್ ಪರ್ಟ್ಸ್' ಆ್ಯಪ್ ಅನ್ನು ಬಿಡುಗಡೆ ಮಾಡಿದೆ. ಇದು ಕಂಪನಿಯ ಡಿಜಿಟಲ್ ಪರಿವರ್ತನೆಯ ಭಾಗವಾಗಿ ದೇಶದ ಎಲೆಕ್ಟ್ರಿಷಿಯನ್ ಸಮುದಾಯಕ್ಕಾಗಿಯೇ ಪ್ರತ್ಯೇಕವಾಗಿ ವಿನ್ಯಾಸ ಮಾಡಲಾದ ಈ ರೀತಿಯ ಮೊತ್ತ ಮೊದಲ ವೇದಿಕೆಯಾಗಿದೆ.

ಪಾಲಿಕ್ಯಾಬ್ ಎಕ್ಸ್ ಪರ್ಟ್ಸ್ ಭಾರತದಾದ್ಯಂತ ಇರುವ ಎಲೆಕ್ಟ್ರೀಷಿಯನ್ನಗಳಿಗೆ ಶಕ್ತಿ ತುಂಬುವ ಮತ್ತು ಅವರನ್ನು ಸಬಲೀಕರಣಗೊಳಿಸುವ, ಅದರ ಜೊತೆಗೆ ಗ್ರಾಹಕರ ಅನುಭವವನ್ನು ಸುಧಾರಿಸಲು ಸಹಾಯ ಮಾಡುವ ಗುರಿಯನ್ನು ಹೊಂದಿದೆ. ಈ ಆಪ್ ತನ್ನ ಗ್ರಾಹಕರಿಗೆ ಹಲವು ಪ್ರಯೋಜನಗಳು ಮತ್ತು ಪ್ರತಿಫಲಗಳನ್ನು ಒದಗಿಸುವ ಮೂಲಕ ಗಳಿಕೆ ಮತ್ತು ರಿಡೆಂಪ್ಷನ್ ಪಾಯಿಂಟ್ಗಳ ಸಂಗ್ರಹ ಎರಡನ್ನೂ ದೊರಕಿಸುವ ಏಕೈಕ ವೇದಿಕೆಯಾಗಿದೆ. ಪಾಲಿಕ್ಯಾಬ್ ಎಕ್ಸ್ ಪರ್ಟ್ಸ್ ಪ್ರೋಗ್ರಾಂ ಈಗಾಗಲೇ 1.5 ಲಕ್ಷ ಎಲೆಕ್ಟ್ರಿಷಿಯನ್ನಗಳು ಮತ್ತು ಸರಿಸುಮಾರು 1 ಲಕ್ಷ ರಿಟೇಲ್ ವ್ಯಾಪಾರಿಗಳು ಇರುವ ಹಳೆಯ ಆಪ್ ಅನ್ನು ಹೊಂದಿದೆ, ಅವರೆಲ್ಲರನ್ನೂ ಈಗ ಹೊಸ ಅಪ್ಲಿಕೇಶನ್ಗೆ ವರ್ಗಾಯಿಸಲಾಗುತ್ತದೆ. ಪಾಲಿಕ್ಯಾಬ್ ಎಕ್ಸ್ ಪರ್ಟ್ಸ್ ಆಪ್ ಹೊಸ ರೀತಿಯ ಪ್ರತಿಫಲ ವ್ಯವಸ್ಥೆಯನ್ನು ಪರಿಚಯಿಸಲಿದೆ. ಈ ಆಪ್ ಎಲೆಕ್ಟ್ರಿಷಿಯನ್ ಮತ್ತು ರಿಟೇಲ್ ವ್ಯಾಪಾರಿಗಳು ಪಾಲಿಕ್ಯಾಬ್ ಉತ್ಪನ್ನಗಳಲ್ಲಿ ಮುದ್ರಿಸಲಾದ ಲಾಯಲ್ಟಿ ಕೋಡ್ಗಳನ್ನು ಸ್ಕ್ಯಾನ್ ಮಾಡುವ ಮೂಲಕ ಸಲೀಸಾಗಿ ಅಂಕಗಳನ್ನು ಗಳಿಸಲು ಅನುವು ಮಾಡಿಕೊಡುತ್ತದೆ. ಈ ಸಂಗ್ರಹವಾದ ಅಂಕಗಳನ್ನು ತಕ್ಷಣವೇ ಅವರ ಬ್ಯಾಂಕ್ ಖಾತೆಗಳಿಗೆ ರಿಡೀಮ್ ಮಾಡಿಕೊಳ್ಳಬಹುದು. ಈ ಮೂಲಕ ಪಾಲಿಕ್ಯಾಬ್ ಕಂಪನಿಯು ಅವರ ನಿಷ್ಠೆಗೆ ತಕ್ಕಂತೆ ಉತ್ತಮವಾದ ಮತ್ತು ತಕ್ಷಣದ ಪ್ರೋತ್ಸಾಹವನ್ನು ನೀಡುತ್ತದೆ. ಆ್ಯಪ್ ಬಿಡುಗಡೆಯ ಕುರಿತು ಪ್ರತಿಕ್ರಿಯಿಸಿದ ಪಾಲಿಕ್ಯಾಬ್ ಇಂಡಿಯಾದ ಚೀಫ್ ಬ್ಯುಸಿನೆಸ್ ಆಫೀಸರ್ (ಪವರ್ ಬಿಯು) ಶ್ರೀ.ಇಶ್ವಿಂದರ್ ಸಿಂಗ್ ಖುರಾನಾ, ಭಾರತದಲ್ಲಿನ ಎಲೆಕ್ಟ್ರಿಷಿಯನ್ ಸಮುದಾಯವು ನಾವು ವಾಸಿಸುವದಕ್ಕೆ ಮತ್ತು ಆರಾಮದಾಯಕವಾಗಿ ಕೆಲಸ ಮಾಡುವುದಕ್ಕೆ ಬೇಕಾದ ಸುಸಜ್ಜಿತವಾದ ವಿದ್ಯುತ್ ಮೂಲಸೌಕರ್ಯವನ್ನು ಒದಗಿಸುತ್ತದೆ ಎಂದರು.

# ಮನೆಯಲ್ಲೇ ಮಾಡಿ ಡ್ರೈಫ್ರೂಟ್ಸ್ ಕಚೋರಿ

## ಪಾಕ ಶಾಲೆ



### ಬೇಕಾಗಿರುವ ಪದಾರ್ಥ

**ಮೈದಾ ಹಿಟ್ಟು - 2 ಕಪ್, ಚಿರೋಟಿ ರವೆ - 1 ಕಪ್, ಉಪ್ಪು - 1 ಚಿಟಿಕೆ, ಗೋಡಂಬಿ - 10, ಬಾದಾಮಿ - 8 , ಪಿಸ್ತಾ - 8 ದ್ರಾಕ್ಷಿ - 10, ಗಸಗಸೆ ಪುಡಿ - 3 ಚಮಚ, ಸೋಂಪು ಕಾಳು - 3 ಚಮಚ, ಒಣ ಕೊಬ್ಬರಿ ತುರಿ - ಅರ್ಧ ಕಪ್, ಸಕ್ಕರೆ ಪುಡಿ - 1 ಕಪ್, ಎಳ್ಳಿನ ಪುಡಿ - 3 ಚಮಚ, ಏಲಕ್ಕಿ ಪುಡಿ - ಅರ್ಧ ಚಮಚ, ಹುರಿಗಡಲೆ ಪುಡಿ - ಅರ್ಧ ಕಪ್**

### ಮಾಡುವ ವಿಧಾನ

ಮೈದಾ ಹಿಟ್ಟಿಗೆ ಉಪ್ಪು, ಚಿರೋಟಿ ರವೆ ಮತ್ತು ನೀರು ಸೇರಿಸಿ ಚಪಾತಿ ಹಿಟ್ಟಿನ ಹದಕ್ಕೆ ಕಲಸಿ ಅರ್ಧ ಗಂಟೆ ನೆನೆಯಲು ಬಿಡಿ. ಗೋಡಂಬಿ, ಬಾದಾಮ್, ಪಿಸ್ತಾ, ಸೋಂಪು ಕಾಳುಗಳನ್ನು ಸೇರಿಸಿ ತರಿತರಿಯಾಗಿ ಪುಡಿ ಮಾಡಿ. ದ್ರಾಕ್ಷಿ, ಗಸಗಸೆ ಪುಡಿ, ಒಣ ಕೊಬ್ಬರಿ ತುರಿ, ಸಕ್ಕರೆ ಪುಡಿ, ಎಳ್ಳಿನ ಪುಡಿ, ಏಲಕ್ಕಿ ಪುಡಿಯನ್ನು ಹುರಿಗಡಲೆ ಪುಡಿಗೆ ಸೇರಿಸಿ. ಇದಕ್ಕೆ ಗೋಡಂಬಿ, ಬಾದಾಮ್ ಮಿಶ್ರಣ ಹಾಕಿ. ಕಲಸಿದ ಹಿಟ್ಟಿನ ಮಿಶ್ರಣದಿಂದ ಚಿಕ್ಕ ಚಿಕ್ಕ ಉಂಡೆಗಳನ್ನು ಮಾಡಿ ಬಟ್ಟಲಾಕಾರದಲ್ಲಿ ತಟ್ಟಿ ಎರಡು ಚಮಚದಷ್ಟು ಹೂರಣ ತುಂಬಿಸಿ ಅಂಚುಗಳನ್ನು ಅಂಟಿಸಿ ಮೆಲುವಾಗಿ ಲಟ್ಟಿಸಿ. ಕಾದ ಎಣ್ಣೆಯಲ್ಲಿ ಕರೆದರೆ ಡ್ರೈಫ್ರೂಟ್ಸ್ ಕಚೋರಿ ರೆಡಿ ಟು ಈಟ್.

# ಜ್ವರ ಬಿಟ್ಟ ನಂತರದ ಸುಸ್ತು ದೂರ ಮಾಡುತ್ತೆ ಈ 'ಆಹಾರ'

## ಹೆಲ್ತ್ ಟಿಪ್ಸ್



'ಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರಿಗೂ ಜ್ವರ ಬರುವುದು ಸಾಮಾನ್ಯ. ವರ್ಷಕ್ಕೆ ಒಮ್ಮೆ ಸಾಮಾನ್ಯವಾಗಿ ಎಲ್ಲರಿಗೂ ಜ್ವರ ಬರುತ್ತದೆ. ಜ್ವರ ಬರುವುದು ಒಳ್ಳೆಯದು. ಆದ್ರೆ ತುಂಬಾ ದಿನ ಜ್ವರವಿದ್ದರೆ ಅದು ಅಪಾಯಕಾರಿ. ಜ್ವರ ಬಂದ ನಂತ್ರ ದೇಹ ಬೇರೆ ರೋಗದ ವಿರುದ್ಧ ಹೋರಾಡುವ ಶಕ್ತಿ ಪಡೆಯುತ್ತದೆ.

ಆದ್ರೆ ಜ್ವರ ಬಂದ ಸಂದರ್ಭದಲ್ಲಿ ಸುಸ್ತು ಸಾಮಾನ್ಯವಾಗಿರುತ್ತದೆ. ಜ್ವರದ ಸುಸ್ತನ್ನು ಕೆಲ ಡಯಟ್ ಮೂಲಕ ಕಡಿಮೆ ಮಾಡಬಹುದು.

ಖಿಚ್ಡಿ ಲಘು ಆಹಾರ. ಜ್ವರದ ಸಂದರ್ಭದಲ್ಲಿ ಯಕೃತು ದುರ್ಬಲಗೊಂಡಿರುತ್ತದೆ. ಆಹಾರ ಜೀರ್ಣವಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಖಿಚ್ಡಿ ಸೇವನೆ ಮಾಡುವುದ್ರಿಂದ ದೇಹಕ್ಕೆ ಶಕ್ತಿ ಸಿಗುವ ಜೊತೆಗೆ ಸುಸ್ತು ಶೀಘ್ರ ಕಡಿಮೆಯಾಗುತ್ತದೆ. ಜ್ವರದಿಂದ ಸುಸ್ತು ಕಾಡುವ ಜೊತೆಗೆ ಮಲಬದ್ಧತೆ ಹೆಚ್ಚಾಗುತ್ತದೆ. ಈ ಸಂದರ್ಭದಲ್ಲಿ ಆಹಾರ ಸರಿಯಾಗಿ ಸೇರುವುದಿಲ್ಲ. ಜ್ವರದಿಂದ ಬಳಲುವವರು ರವೆ ಉಪ್ಪಿಟ್ಟು ಅಥವಾ ರವಾ ಗಂಜಿ ಸೇವನೆ ಮಾಡಬೇಕು. ಇದು ಜೀರ್ಣಕ್ರಿಯೆಯನ್ನು ಸುಲಭಗೊಳಿಸುತ್ತದೆ.

ಬೇಯಿಸಿದ ಮೊಟ್ಟೆಯಲ್ಲಿ ಪ್ರೊಟೀನ್ ಅಂಶ ಹೆಚ್ಚಿರುತ್ತದೆ. ಮೊಟ್ಟೆಯಲ್ಲಿ ವಿಟಮಿನ್ ಬಿ 6 ಮತ್ತು ಬಿ 12, ಸತು ಮತ್ತು ಸೆಲೆನಿಯಮ್ ಇದ್ದು, ರೋಗ ನಿರೋಧಕ ಶಕ್ತಿಯನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಜ್ವರದಲ್ಲಿ ಸಾಕಷ್ಟು ಮೊಟ್ಟೆಗಳನ್ನು ಸೇವಿಸಿದರೆ ಸ್ವಲ್ಪ ಹಿತವೆನಿಸುತ್ತದೆ. ದೇಹದ ಸುಸ್ತು ಕಡಿಮೆಯಾಗುತ್ತದೆ.

# ಬೆಳ್ಳುಳ್ಳಿಯಿಂದ ಸೌಂದರ್ಯ

## ಬ್ಯೂಟಿ ಟಿಪ್ಸ್



ಪ್ರಾಚೀನ ಕಾಲದಿಂದಲೂ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಬೆಳ್ಳುಳ್ಳಿಯನ್ನು ಬಳಸಲಾಗುತ್ತದೆ. ಇದು ಆಂಟಿ ಬಯೋಟಿಕ್, ಆಂಟಿ ಫಂಗಲ್, ನಂಜು ನಿರೋಧಕ ಗುಣಗಳನ್ನು ಹೊಂದಿದೆ. ಇದನ್ನು ಸೌಂದರ್ಯ ಚಿಕಿತ್ಸೆಗಳಿಗೆ ಬಳಸಲಾಗುತ್ತದೆ.

- ಬೆಳ್ಳುಳ್ಳಿ, ಕಲೆಗಳು ಮತ್ತು ಮೊಡವೆಗಳ ವಿರುದ್ಧ ಹೋರಾಡಲು ತುಂಬಾ ಉಪಯುಕ್ತವಾಗಿದೆ. ಹಾಗಾಗಿ ಬೆಳ್ಳುಳ್ಳಿಯ ತುಂಡನ್ನು ತೆಗೆದುಕೊಂಡು ಅದನ್ನು ಪೀಡಿತ ಭಾಗಕ್ಕೆ ಉಜ್ಜಿಕೊಳ್ಳಿ. ಬಳಿಕ ಸೋಪು ಬಳಸಿ ವಾಶ್ ಮಾಡಿ. ಇದು ನಿಮ್ಮ ಚರ್ಮವನ್ನು ಸ್ವಚ್ಛವಾಗಿಡುತ್ತದೆ. ಹಾನಿಯಾದ ಚರ್ಮವನ್ನು ಸರಿಪಡಿಸುತ್ತದೆ.
- ಇದು ಕೂದಲ ಆರೋಗ್ಯವನ್ನು ಕಾಪಾಡುತ್ತದೆ. ಇದು ಕೂದಲುದುರುವುದನ್ನು ಕಡಿಮೆ ಮಾಡುತ್ತದೆ. ಬೆಳ್ಳುಳ್ಳಿಗೆ ಲವಂಗ ಪುಡಿ ಸೇರಿಸಿ ಯಾವುದಾದರೂ ಎಣ್ಣೆಯನ್ನು ಮಿಕ್ಸ್ ಮಾಡಿ ಕೂದಲಿಗೆ ಹಚ್ಚಿ ಮಸಾಜ್ ಮಾಡಿ 30 ನಿಮಿಷ ಬಿಟ್ಟು ನೀರಿನಲ್ಲಿ ವಾಶ್ ಮಾಡಿ.

# ಸೌತ್ ಬ್ಯೂಟಿ ಅನುಷ್ಕಾ ಶೆಟ್ಟಿ ಎಷ್ಟು ಶ್ರೀಮಂತೆ ಗೊತ್ತೇ?





**ಪ್ರಸ್ತುತ ಆಸ್ತಿ ಮೌಲ್ಯ ರೂ.130 ಕೋಟಿ**

ಅನುಷ್ಕಾ ಶೆಟ್ಟಿ ಹುಟ್ಟಿದ್ದು ಕರ್ನಾಟಕದ ಮಂಗಳೂರಿನಲ್ಲಿ. ಆಕೆಯ ಮೂಲ ಹೆಸರು ಸ್ವೀಟಿ ಶೆಟ್ಟಿ, ನಂತರ ಅವರು ಚಿತ್ರರಂಗಕ್ಕೆ ಪ್ರವೇಶಿಸಿದ ನಂತರ ತಮ್ಮ ಹೆಸರನ್ನು ಅನುಷ್ಕಾ ಶೆಟ್ಟಿ ಎಂದು ಬದಲಾಯಿಸಿಕೊಂಡರು. 2005 ರಲ್ಲಿ ಪುರಿ ಜಗನ್ನಾಥ್ ನಿರ್ದೇಶನದ ಸೂಪರ್ ಚಿತ್ರದ ಮೂಲಕ ತೆಲುಗು ಚಿತ್ರರಂಗದಲ್ಲಿ ನಾಯಕಿಯಾಗಿ ಪಾದಾರ್ಪಣೆ ಮಾಡಿದರು.

ಚಿತ್ರದ ಟೈಟಲ್ಲಂತೆ ಚಿತ್ರವೂ ಸೂಪರ್ ಹಿಟ್ ಆಗಿದ್ದು, ಇದರಿಂದ ಅನುಷ್ಕಾಗೆ ಹಲವು ಸಿನಿಮಾ ಅವಕಾಶಗಳು ಒಲಿದು ಬಂದವು

ಟಾಲಿವುಡ್ ನಲ್ಲಿ ಬಿಸಿಯಾಗಿದ್ದ ಅನುಷ್ಕಾ ಅವರನ್ನು ತಮಿಳು ಚಿತ್ರರಂಗಕ್ಕೆ ಕರೆತಂದಿದ್ದು ನಿರ್ದೇಶಕ ಸುಂದರ್ ಸಿ.. ಇವರ ನಿರ್ದೇಶನದ ಎರಡು ಚಿತ್ರಗಳ ಮೂಲಕ ಅನುಷ್ಕಾ ಕಾಲಿವುಡ್ಗೆ ಎಂಟ್ರಿ ಕೊಟ್ಟರು, ನಂತರ ಅಲ್ಲಿಯೂ ಟಾಪ್ ಹೀರೋಯಿನ್ ಆದರು. ಅರುಂಧತಿ ಮತ್ತು ಬಾಹುಬಲಿ ಅನುಷ್ಕಾ ವೃತ್ತಿಜೀವನದ ದೊಡ್ಡ ತಿರುವುಗಳಾಗಿವೆ. ಇವೆರಡೂ ಐತಿಹಾಸಿಕ ಚಿತ್ರಗಳಾಗಿದ್ದು, ಅನುಷ್ಕಾ ತಮ್ಮ ಅದ್ಭುತ ಅಭಿನಯದಿಂದ ಅಭಿಮಾನಿಗಳಿಗೆ ಶಾಕ್ ನೀಡಿದ್ದರು.. ಅದರಲ್ಲೂ ಬಾಹುಬಲಿಯಲ್ಲಿ ದೇವಸೇನಾ ಪಾತ್ರದಲ್ಲಿ ಅವರಿಗಿಂತ ಉತ್ತಮವಾಗಿ ಯಾರೂ ಮಾಡಲಾರರು ಎನ್ನುವಷ್ಟರ ಮಟ್ಟಿಗೆ ನಟಿಸಿ ಚಪ್ಪಾಳೆ ಗಿಟ್ಟಿಸಿಕೊಂಡಿದ್ದರು.

## ಜಾಹೀರಾತಿಗೆ 1ಕೋಟಿ?

ಇದಾದ ನಂತರ ಮತ್ತೊಂದು ಚಿತ್ರಕ್ಕಾಗಿ ತೂಕ ಹೆಚ್ಚಿಸಿಕೊಂಡಿದ್ದ ಅನುಷ್ಕಾ ಆ ನಂತರ ತೂಕ ಇಳಿಸಿಕೊಳ್ಳಲು ಸಾಧ್ಯವಾಗದೇ ಇದ್ದ ಕಾರಣ ಅವರ ಬೇಡಿಕೆಯೂ ಇಳಿಕೆಯಾಗಿತ್ತು. ನಟಿಯ ಕೊನೆಯ ಚಿತ್ರ ಮಿಸ್ ಶೆಟ್ಟಿ ಮಿಸ್ಟರ್ ಪೋಲಿಶೆಟ್ಟಿ. ಈ ಚಿತ್ರದ ನಂತರ, ಅನುಷ್ಕಾ ಪ್ರಸ್ತುತ ಮಲಯಾಳಂನಲ್ಲಿ ಒಂದು ಚಿತ್ರದಲ್ಲಿ ನಟಿಸುತ್ತಿದ್ದಾರೆ, ಅದು ಬಿಟ್ಟರೆ ಬೇರೆ ಯಾವುದೇ ಚಿತ್ರ ಅವರ ಕೈಯಲ್ಲಿ ಇಲ್ಲ.. ಈಗ ನಟಿ ಅನುಷ್ಕಾಗೆ 43 ವರ್ಷ. ಇಂದಿಗೂ ಸಿಂಗಲ್ ಆಗಿ ಉಳಿದಿರುವ ಇವರ ಬಗ್ಗೆ ಪ್ರೇಮದ ವದಂತಿಗಳು ಆಗ್ಗಾಗ್ಗೆ ವೈರಲ್ ಆಗುತ್ತಿರುತ್ತವೆ.. ಅದರಲ್ಲೂ ಅನುಷ್ಕಾ ಮತ್ತು ಪ್ರಭಾಸ್ ಬಹಳ ದಿನಗಳಿಂದ ಪ್ರೀತಿಸುತ್ತಿದ್ದಾರೆ ಎಂಬ ವದಂತಿ ದೊಡ್ಡ ಮಟ್ಟಿಗೆ ಹಬ್ಬಿತ್ತು. ಆದರೆ ಇಬ್ಬರೂ ಒಳ್ಳೆಯ ಸ್ನೇಹಿತರು ಎಂದು ಗಾಳಿ ಸುದ್ದಿಗೆ ತೆರೆ ಎಳೆದಿದ್ದರು... ನಂತರ ಅವರು ನಿರ್ಮಾಪಕರ ಜೊತೆ ಮದುವೆಯಾಗಲಿದ್ದಾರೆ ಎಂಬ ಸುದ್ದಿಯೂ ಹಬ್ಬಿತ್ತು.

ಸಿನಿಮಾದಲ್ಲಿ ಆಕೆಗೆ ಅಷ್ಟು ಬೇಡಿಕೆ ಇಲ್ಲಬಾದರೂ ನಟಿ ಅನುಷ್ಕಾ ಆಸ್ತಿ ಎಷ್ಟು ಗೊತ್ತಾದ್ರೆ ಶಾಕ್ ಆಗ್ತೀರ. ಹೌದು ಇವರ ಪ್ರಸ್ತುತ ಆಸ್ತಿ ಮೌಲ್ಯ ರೂ.130 ಕೋಟಿ ಎಂದು ಹೇಳಲಾಗಿದೆ. ನಟಿ ಅನುಷ್ಕಾ ಪ್ರತಿ ಚಿತ್ರಕ್ಕೆ ರೂ.5 ಕೋಟಿಯವರೆಗೂ ಸಂಭಾವನೆ ಪಡೆಯುತ್ತಿದ್ದಾರೆ. ಅದೂ ಅಲ್ಲದೆ ಜಾಹೀರಾತುಗಳಲ್ಲಿ ನಟಿಸಲು ರು.1 ಕೋಟಿ ಸಂಭಾವನೆ ಪಡೆಯುತ್ತಿದ್ದಾರೆ.

ನಟಿ ಅನುಷ್ಕಾ ಕೂಡ ಬೆಂಗಳೂರು, ಹೈದರಾಬಾದ್ನಂತಹ ನಗರಗಳಲ್ಲಿ ಐಷಾರಾಮಿ ಮನೆಗಳನ್ನು ಹೊಂದಿದ್ದಾರೆ. ಕಾರುಗಳೆಂದರೆ ತುಂಬಾ ಇಷ್ಟಪಡುವ ಇವರ ಬಳಿ 10 ಐಷಾರಾಮಿ ಕಾರುಗಳಿವೆ. ಸಿನಿಮಾ ಮಾತ್ರವಲ್ಲದೆ ರಿಯಲ್ ಎಸ್ಟೇಟ್ ನಲ್ಲಿಯೂ ಕೋಟಿಗಟ್ಟಲೆ ಹೂಡಿಕೆ ಮಾಡಿ ಅದರ ಮೂಲಕ ಕೋಟಿಗಟ್ಟಲೆ ಸಂಪಾದಿಸಿದ್ದಾರೆ ಅನುಷ್ಕಾ ಶೆಟ್ಟಿ.

# ಜೀವದಾನ ಮಾಡಿದ ಜರ್ಮನಿ ಯುವಕನನ್ನು ಭೇಟಿ ನೀಡಿದ ಥಲಸ್ಸೇಮಿಯಾ ಸಂತ್ರಸ್ತ

ಒಂದು ಅತ್ಯಂತ ಅಚ್ಚರಿಯ ಸಂಗತಿಯೆಂದರೆ, ಥಲಸೇಮಿಯಾ ಸಂತ್ರಸ್ತ 17 ವರ್ಷ ಚಿರಾಗ್ ತನಗೆ ಸ್ಟೆಮ್ ಸೆಲ್ ದಾನ ಮಾಡುವ ಮೂಲಕ, ಮರುಜೀವ ನೀಡಿದ ಜರ್ಮನಿಯ ರೋಮನ್ ಸಿಮ್ಮಿಝ್ಕಿ ಅನ್ನು ಭೇಟಿ ಮಾಡಿದ್ದಾರೆ. ರೋಗಿಯ ಜೀವನ ಗುಣಮಟ್ಟದ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರುವ ಆನುವಂಶೀಯ ರಕ್ತ ಸಮಸ್ಯೆಯಾದ ಥಲಸ್ಸೇಮಿಯಾದಿಂದ ಚಿರಾಗ್ ಬಳಲುತ್ತಿದ್ದರು. ತನ್ನ ಬಹುತೇಕ ಬಾಲ್ಯಕಾಲದಿಂದಲೂ ಚಿರಾಗ್ ರಕ್ತ ಟ್ರಾನ್ಸ್ಫ್ಯೂಷನ್ಗಳ ಜೊತೆಗೆ ಬಳಲಿಕೆ ಮತ್ತು ಇತರ ಆರೋಗ್ಯ ಸಮಸ್ಯೆಗಳನ್ನು ಚಿರಾಗ್ ಎದುರಿಸಬೇಕಾಯಿತು.

ಹತ್ತು ವರ್ಷಗಳವರೆಗೆ ಅವರ ಕುಟುಂಬ ಸರಿಯಾದ ದಾನಿಗೆ ಹುಡುಕಾಟ ನಡೆಸುತ್ತಿತ್ತು. ಕೊನೆಗೂ 2016 ರಲ್ಲಿ ಈ ಹುಡುಕಾಟಕ್ಕೆ ಒಂದು ಅಂತ್ಯ ಸಿಕ್ಕಿತು. ಡಿಕೆಎಂಎಸ್ನ ಡೇಟಾಬೇಸ್ ಮೂಲಕ ಜರ್ಮನಿಯ ಮುನ್ಸಿಂಜೆನ್ನ 29 ವರ್ಷದ ರೋಮನ್ ಸರಿಯಾದ ಹೊಂದಾಣಿಕೆಯಾದರು.

ರೋಮನ್ ಅವರನ್ನು ಭೇಟಿ ಮಾಡಿದ್ದು ಒಂದು ಅದ್ಭುತ ಅನುಭವವಾಗಿದೆ ಎಂದು ಚಿರಾಗ್ ಹೇಳುತ್ತಾರೆ. ಅವರ ನಿಸ್ವಾರ್ಥ ಸೇವೆ ಎಷ್ಟು ಆಭಾರಿಯಾಗಿದ್ದೇನೆ ಎಂಬುದನ್ನು ನಾನು ಮಾತಿನಲ್ಲಿ ಹೇಳಲು ಸಾಧ್ಯವಿಲ್ಲ. ಅವರು ಬರಿ ಸ್ಟೆಮ್ ಸೆಲ್ ದಾನ ಮಾಡಲಿಲ್ಲ. ಬದಲಿಗೆ ಅವರು ನನಗೆ ಜೀವ ನೀಡಿದ್ದಾರೆ'' ಎಂದು ಚಿರಾಗ್ ಹೇಳಿದ್ದಾರೆ. ಚಿರಾಗ್ ಅವರನ್ನು ಭೇಟಿ ಮಾಡಲು ಭಾರತಕ್ಕೆ ಆಗಮಿಸಿದ್ದ ರೋಮನ್ ತನ್ನ ಭಾವನೆಗಳನ್ನು ಹಂಚಿಕೊಂಡರು. ''ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಖುಷಿಗಿಂತ ಬೇರೇನೂ ಇಲ್ಲ. ಚಿರಾಗ್ ಅವರನ್ನು ಆರೋಗ್ಯವಂತರನ್ನಾಗಿ ನೋಡುವುದರಲ್ಲಿನ ಖುಷಿಗಿಂತ ಬೇರೊಂದಿಲ್ಲ.''

ಕೃತಜ್ಞತೆ ಮತ್ತು ಸಂತೋಷದಿಂದ ತುಂಬಿದ ಭಾವನಾತ್ಮಕ ಭೇಟಿ ಚಿರಾಗ್ ಮತ್ತು ರೋಮನ್ ಮಧ್ಯೆ ನಡೆಯಿತು. ಅವರ ಜೀವನ ಬದಲಾವಣೆಯ ಪಯಣದ ಅಮೋಘ ಸನ್ನಿವೇಶಕ್ಕೆ ಇದು ಸಾಕ್ಷಿಯಾಯಿತು. ಚಿರಾಗ್, ಈಗ ಥಲಸ್ಸೆಮಿಯಾದ ಸಮಸ್ಯೆಯಿಂದ ಮುಕ್ತವಾಗಿದ್ದು, ಉಜ್ವಲ ಭವಿಷ್ಯದ ಕನಸು ಕಾಣುವಂತಾಗಿದೆ.

ಸ್ವ್ಯಾಬ್ ಅನ್ನು ಮತ್ತು ನಂತರ ರಕ್ತದ ಸ್ಟೆಮ್ ಸೆಲ್ ದಾನ ಮಾಡಿರುವುದು ಇನ್ನೊಂದು ಖಂಡದಲ್ಲಿರುವ ಒಂದು ಜೀವವನ್ನು ರಕ್ಷಿಸಿದೆ. ತಮ್ಮ ಮಗನ ಹೋರಾಟ ಮತ್ತು ಚೇತರಿಕೆಯನ್ನು ಕಣ್ಣಾರೆ ಕಂಡ ಚಿರಾಗ್ ಅವರ ಪೋಷಕರು ರೋಮನ್ ಅವರ ನಿಸ್ವಾರ್ಥ ಸೇವೆಗೆ ಹೃತ್ಪೂರ್ವಕ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಚಿರಾಗ್‌ಗೆ ಚಿಕಿತ್ಸೆ ನೀಡಿದ ವೈದ್ಯ ಚೆನ್ನೈನ ಅಪೋಲೊ ಹಾಸ್ಪಿಟಲ್ನ ಪೀಡಿಯಾಟ್ರಿಕ್ ಹೆಮಟಾಲಜಿಸ್ಟ್ ಡಾ.ರೇವತಿ ರಾಜ್ ಮಾತನಾಡಿ ''ನಮ್ಮ ದೇಶದಲ್ಲಿ ಥಲಸ್ಸೆಮಿಯಾ ಸಮಸ್ಯೆ ಗಮನಾರ್ಹವಾಗಿ ವ್ಯಾಪಿಸಿದೆ. ಪ್ರತಿ ವರ್ಷ 10,000 ಕ್ಕೂ ಹೆಚ್ಚು ಮಕ್ಕಳಿಗೆ ಜನಿಸುತ್ತಲೇ ಈ ಕಾಯಿಲೆ ಇರುತ್ತದೆ. ಬೀಟಾ-ಥಲಸ್ಸೆಮಿಯಾ ಮೇಜರ್ ಹಂತವು ಈ ಕಾಯಿಲೆಯ ತೀವ್ರ ಸ್ವರೂಪವಾಗಿದ್ದು, ಇದಕ್ಕೆ ನಿರ್ದಿಷ್ಟ ದಿನಗಳಿಗೊಮ್ಮೆ ರಕ್ತ ನೀಡಬೇಕಿರುತ್ತದೆ. ಸ್ಟೆಮ್ ಸೆಲ್ ಕಸಿಯೇ ಇದಕ್ಕೆ ಪರಿಹಾರವಾಗಿರುತ್ತದೆ. ಇಂದು ಚಿರಾಗ್ ಚೇತರಿಸಿಕೊಂಡಿದ್ದು ಉಜ್ವಲ ಭವಿಷ್ಯ ಕಾದಿದೆ ಎಂದು ನನಗೆ ಖುಷಿಯಾಗಿದೆ. ರೋಮನ್‌ನಂತಹ ಹೆಚ್ಚಿನ ಜನರು ಸ್ಟೆಮ್ ಸೆಲ್ ದಾನಿಗಳಾಗಿ ನೋಂದಾಯಿಸಿಕೊಳ್ಳಬೇಕಿದೆ. ಇದರಿಂದ ಹೆಚ್ಚಿನ ರೋಗಿಗಳಿಗೆ ಜೀವ ನೀಡಿದಂತಾಗುತ್ತದೆ ಎಂದು ನಾನು ಭಾವಿಸುತ್ತೇನೆ'' ಎಂದಿದ್ದಾರೆ. ಸ್ಟೆಮ್ ಸೆಲ್ ಕಸಿಯಲ್ಲಿ, ಸ್ಟೆಮ್ ಸೆಲ್ ಹೊಂದಾಣಿಕೆಯಾಗುವ ವ್ಯಕ್ತಿಯಿಂದ ಆರೋಗ್ಯಕರ ಸ್ಟೆಮ್ ಸೆಲ್ಗಳನ್ನು ರೋಗಿಗಳಿಗೆ ಅಳವಡಿಸಲಾಗುತ್ತದೆ. ಇದರಿಂದ ಆರೋಗ್ಯಕರವಾಗಿ ರಕ್ತ ಉತ್ಪಾದನೆಯಾಗಲು ಸಹಾಯವಾಗುತ್ತದೆ. ರೋಗಿಯ ಹ್ಯೂಮನ್ ಲ್ಯೂಕೊಸೈಟ್ ಆಂಟಿಜೆನ್ (ಎಚ್‌ಎಲ್‌ಎ) ಮತ್ತು ದಾನಿಯ ಎಚ್‌ಎಲ್‌ಎ ಹೊಂದಿಕೆಯಾದಾಗ ಸ್ಟೆಮ್ ಸೆಲ್ ಕಸಿ ಮಾಡಬಹುದಾಗಿರುತ್ತದೆ. ಇದು ಬ್ಲಡ್ ಗ್ರೂಪ್ಗಳನ್ನು ಹೋಲಿಸುವುದಕ್ಕಿಂತಲೂ ಹೆಚ್ಚು ಸಂಕೀರ್ಣ ಪ್ರಕ್ರಿಯೆಯಾಗಿದೆ. 30% ರೋಗಿಗಳಿಗೆ ಕುಟುಂಬದಲ್ಲೇ ಎಚ್‌ಎಲ್‌ಎ ಹೊಂದಿಕೆಯಾಗುವ ದಾನಿ ಸಿಗುತ್ತಾರೆ. ಆದರೆ, ಉಳಿದ 70% ರೋಗಿಗಳಿಗೆ, ಹೊಂದಾಣಿಕೆಯಾಗುವ ಎಚ್‌ಎಲ್‌ಎ ಹುಡುಕುವುದಕ್ಕಾಗಿ ದಾನಿಯನ್ನು ಕಂಡುಕೊಳ್ಳಬೇಕಾಗುತ್ತದೆ.

# ರಾಶಿ ಭವಿಷ್ಯ



**ಜಯಶ್ರೀ.ಬಿ.ಆರ್**
**ಖ್ಯಾತ ಜ್ಯೋತಿಷಿ**
ದೂರವಾಣಿ–9964739507
www.jyotishyavaastu.com

**ಮೇಷ:** ಆರ್ಥಿಕ ಚೇತರಿಕೆ, ಯತ್ನ ಕಾರ್ಯಗಳಲ್ಲಿ ಜಯ, ಸ್ಥಿರಾಸ್ತಿ ವಿಷಯದಲ್ಲಿ ಅನುಕೂಲ, ಸರ್ಕಾರಿ ಅಧಿಕಾರಿಗಳಿಂದ ಸಹಕಾರ.

**ವೃಷಭ:** ವ್ಯವಹಾರದಲ್ಲಿ ಎಳೆದಾಟ, ಉದ್ಯೋಗ ಬದಲಾವಣೆಯಿಂದ ನಷ್ಟ, ಮಾತಿನಿಂದ ಕಾರ್ಯ ಜಯ, ವಿದ್ಯಾಭ್ಯಾಸದಲ್ಲಿ ಪ್ರಗತಿ.

**ಮಿಥುನ:** ಆರ್ಥಿಕ ಮುಗ್ಗಟ್ಟು, ಮಾತಿನಿಂದ ವಿರೋಧ, ಪತ್ರ ವ್ಯವಹಾರದಲ್ಲಿ ಸಮಸ್ಯೆ, ಉದ್ಯೋಗ ಲಾಭ.

**ಕಟಕ:** ಮಾನಸಿಕ ಕಿರಿಕಿರಿ ಮತ್ತು ಒತ್ತಡ, ಆರ್ಥಿಕ ಹಿನ್ನಡೆ, ಅನಿರೀಕ್ಷಿತ ಅವಕಾಶ, ಅಧಿಕ ಖರ್ಚು, ಮಾತಿನಲ್ಲಿ ಎಚ್ಚರ.

**ಸಿಂಹ:** ವ್ಯವಹಾರದಲ್ಲಿ ಅನುಕೂಲ, ಅವಕಾಶ ವಂಚಿತರಾಗುವಿರಿ, ಅಧಿಕ ದುಂದು ವೆಚ್ಚ, ಉದ್ಯೋಗ ಲಾಭ.

**ಕನ್ಯಾ:** ಉದ್ಯಮ ವ್ಯವಹಾರದಲ್ಲಿ ನಷ್ಟ, ಅಧಿಕಾರಿಗಳಿಂದ ಸಹಕಾರ, ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಯಶಸ್ಸು, ಕೋರ್ಟ್ ಕೇಸುಗಳಲ್ಲಿ ಜಯ.

**ತುಲಾ:** ವ್ಯವಹಾರದಲ್ಲಿ ಎಳೆದಾಟ, ಪಿತ್ರಾರ್ಜಿತ ಸ್ವತ್ತಿನಿಂದ ಲಾಭ, ಅಧಿಕಾರಿಗಳಿಂದ ಪ್ರೋತ್ಸಾಹ, ವಿದ್ಯಾಭ್ಯಾಸದಲ್ಲಿ ಪ್ರಗತಿ.

**ವೃಶ್ಚಿಕ:** ಅನಿರೀಕ್ಷಿತ ಅವಕಾಶ ಮತ್ತು ಲಾಭ, ಉದ್ಯೋಗ ನಷ್ಟ, ತಾಯಿಯ ಸಹಕಾರ, ಉನ್ನತ ವಿದ್ಯಾಭ್ಯಾಸದಲ್ಲಿ ಅವಕಾಶ.

**ಧನಸ್ಸು:** ವ್ಯವಹಾರದಲ್ಲಿ ಅನುಕೂಲ, ಪಿತ್ರಾರ್ಜಿತ ಸ್ವತ್ತಿನಿಂದ ನಷ್ಟ, ಪ್ರಯಾಣದಲ್ಲಿ ವಿಘ್ನ, ಆತ್ಮ ಗೌರವಕ್ಕೆ ಧಕ್ಕೆ.

**ಮಕರ:** ಶತ್ರು ದಮನ, ಅಧಿಕ ಒತ್ತಡ, ಸಾಲ ಸಿಗುವಲ್ಲಿ ಅನುಕೂಲ, ಅನಾರೋಗ್ಯ, ಕಾನೂನು ಬಾಹಿರ ಚಟುವಟಿಕೆ.

**ಕುಂಭ:** ಪಾಲುದಾರಿಕೆಯಲ್ಲಿ ಲಾಭ, ಮಕ್ಕಳಿಂದ ಸಹಕಾರ, ಬಂಧುಗಳೊಂದಿಗೆ ಉತ್ತಮ ಬಾಂಧವ್ಯ, ಪ್ರೀತಿ ಪ್ರೇಮ ವಿಷಯದಲ್ಲಿ ತಪ್ಪು ನಿರ್ಧಾರ.

**ಮೀನ:** ವ್ಯವಹಾರದಲ್ಲಿ ಅನುಕೂಲ, ಮಕ್ಕಳಿಂದ ಸಹಕಾರ, ಅನಿರೀಕ್ಷಿತ ಬದಲಾವಣೆ, ವಿದ್ಯಾಭ್ಯಾಸದಲ್ಲಿ ಯೋಗ ಫಲ.

# ರವೀಂದ್ರನಾಥ ಟ್ಯಾಗೋರ್ ಜಯಂತಿ

ರವೀಂದ್ರನಾಥ ಜಯಂತಿಯನ್ನು ಒಬ್ಬ ಶ್ರೇಷ್ಠ ಬಂಗಾಳಿ ಕವಿ, ಕಾದಂಬರಿಕಾರ, ಬರಹಗಾರ ಮತ್ತು ದಾರ್ಶನಿಕರಿಗೆ ಸಮರ್ಪಿಸಲಾಗಿದೆ. ಹಿಂದೂ ಕ್ಯಾಲೆಂಡರ್ ಪ್ರಕಾರ, ಈ ದಿನವನ್ನು ಇಂದು ಮೇ 7, 2023 ರಂದು ಆಚರಿಸಲಾಗುತ್ತದೆ .
ಬಂಗಾಳಿ ಕ್ಯಾಲೆಂಡರ್ ಪ್ರಕಾರ, ರವೀಂದ್ರನಾಥ ಟ್ಯಾಗೋರ್ ಜಯಂತಿಯನ್ನು 2023 ರ ಮೇ 9 ರಂದು ಆಚರಿಸಲಾಗುತ್ತದೆ .ಭಾರತದ ಹೆಮ್ಮೆಯ ಪುತ್ರ ಭಾರತದ ಮೊದಲ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ರವೀಂದ್ರನಾಥ ಟ್ಯಾಗೋರ್ ಅವರು ಕವಿ, ಸಂಗೀತಗಾರ, ಪಾಲಿಮಥ್, ಆಯುರ್ವೇದ-ಸಂಶೋಧಕ ಮತ್ತು ಕಲಾವಿದರಾಗಿದ್ದರು. ಅವರು 19 ನೇ ಶತಮಾನದ ಕೊನೆಯಲ್ಲಿ ಮತ್ತು 20 ನೇ ಶತಮಾನದ ಆರಂಭದಲ್ಲಿ ಸಂಗೀತ, ಬಂಗಾಳಿ ಸಾಹಿತ್ಯ ಮತ್ತು ಭಾರತೀಯ ಕಲೆಗಳನ್ನು ಮರುಸೃಷ್ಟಿಸಿದರು. 1913 ರಲ್ಲಿ, ರವೀಂದ್ರನಾಥ ಟ್ಯಾಗೋರ್ ಸಾಹಿತ್ಯದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಮೊದಲ ಯುರೋಪಿಯನ್ ಅಲ್ಲದವರು. ರವೀಂದ್ರನಾಥ ಟ್ಯಾಗೋರ್ ಅವರನ್ನು 'ಬಾರ್ಡ್ ಆಫ್ ಬಂಗಾಳ' ಎಂದೂ ಕರೆಯಲಾಗುತ್ತಿತ್ತು. ರವೀಂದ್ರನಾಥ ಟ್ಯಾಗೋರ್ ಅವರು ಮೇ 7, 1861 ರಂದು ಬ್ರಿಟಿಷ್ ಭಾರತದ ಬಂಗಾಳ ಪ್ರೆಸಿಡೆನ್ಸಿಯ ಕಲ್ಕತ್ತಾದ ದೇಬೇಂದ್ರನಾಥ ಟ್ಯಾಗೋರ್ ಮತ್ತು ಶಾರದಾ ದೇವಿ ದಂಪತಿಗಳಿಗೆ ಜನಿಸಿದರು (ಇಂದಿನ ಕೋಲ್ಕತಾ, ಪಶ್ಚಿಮ ಬಂಗಾಳ, ಭಾರತ). ಟ್ಯಾಗೋರ್ ಅವರ ತಾಯಿ ಶಾರದಾ ದೇವಿ ಅವರು ಬಾಲ್ಯದಲ್ಲಿಯೇ ನಿಧನರಾದರು ಮತ್ತು ಅವರ ತಂದೆ ದೇಬೇಂದ್ರನಾಥ ಟ್ಯಾಗೋರ್ ಸಾಕಷ್ಟು ಪ್ರಯಾಣಿಸುತ್ತಿದ್ದರು. ಆದ್ದರಿಂದ ಟ್ಯಾಗೋರ್ ಅನ್ನು ಅವರ ಸೇವಕರು ಬೆಳೆಸಿದರು. ರವೀಂದ್ರನಾಥ ಟ್ಯಾಗೋರ್ ಅವರ ಹಿರಿಯ ಸಹೋದರ ದ್ವಿಜೇಂದ್ರನಾಥ್ ತತ್ವಜ್ಞಾನಿ ಮತ್ತು ಕವಿ ಟಾಗೋರ್ ಅವರ ಇನ್ನೊಬ್ಬ ಸಹೋದರ ಸತ್ಯೇಂದ್ರನಾಥ್ ಅವರು ಭಾರತೀಯ ನಾಗರಿಕ ಸೇವೆಯಲ್ಲಿ ನೇಮಕಗೊಂಡ ಮೊದಲ ಭಾರತೀಯರಾಗಿದ್ದರು.

ಅವರ ಸಹೋದರ ಜ್ಯೋತಿರಿಂದ್ರನಾಥ್ ಸಂಗೀತಗಾರ, ಸಂಯೋಜಕ ಮತ್ತು ನಾಟಕಕಾರ ಮತ್ತು ಸಹೋದರಿ ಸ್ವರ್ಣಕುಮಾರಿ ಕಾದಂಬರಿಕಾರರಾಗಿದ್ದರು. ರವೀಂದ್ರನಾಥ್ ಅವರ ಸಹೋದರ ಹೇಮೇಂದ್ರನಾಥ್ ಅವರಿಗೆ ಅಂಗರಚನಾಶಾಸ್ತ್ರ, ಭೌಗೋಳಿಕತೆ ಮತ್ತು ಇತಿಹಾಸ, ಸಾಹಿತ್ಯ, ಗಣಿತ, ಸಂಸ್ಕೃತ ಮತ್ತು ಇಂಗ್ಲಿಷ್ ಕಲಿಸಿದರು. ತನ್ನ ಜನ್ಮದ ನಂತರ 11 ನೇ ವಯಸ್ಸಿನಲ್ಲಿ ಟ್ಯಾಗೋರ್ ತನ್ನ ತಂದೆಯೊಂದಿಗೆ ಭಾರತ ಪ್ರವಾಸ ಮಾಡಿದರು. ರವೀಂದ್ರನಾಥ ಟ್ಯಾಗೋರ್ ಅವರು ತಮ್ಮ ತಂದೆಯ ಸಂತಿನಿಕೇತನ ಎಸ್ಟೇಟ್ಗೆ ಭೇಟಿ ನೀಡಿ ಅಮೃತಸರದಲ್ಲಿ ಡಲ್ಹೌಸಿಯ ಹಿಮಾಲಯನ್ ಗಿರಿಧಾಮವನ್ನು ತಲುಪುವ ಮೊದಲು ಒಂದು ತಿಂಗಳು ಅಲ್ಲಿ ತಂಗಿದ್ದರು. ಅಲ್ಲಿ ಟ್ಯಾಗೋರ್ ಜೀವನಚರಿತ್ರೆಗಳನ್ನು ಓದಿದರು. ಇತಿಹಾಸ, ಖಗೋಳವಿಜ್ಞಾನ, ಆಧುನಿಕ ವಿಜ್ಞಾನ, ಸಂಸ್ಕೃತವನ್ನು ಅಧ್ಯಯನ ಮಾಡಿದರು ಮತ್ತು 'ಕಾಳಿದಾಸ'ದ ಶಾಸ್ತ್ರೀಯ ಕಾವ್ಯಗಳನ್ನು ಪರಿಶೀಲಿಸಿದರು. ಅಮೃತಸರದ ಗೋಲ್ಡನ್ ಟೆಂಪಲ್ನಲ್ಲಿ ಹಾಡಿದ ಗುರ್ಬಾನಿ ಮತ್ತು ನಾನಕ್ ಬಾನಿಯೊಂದಿಗೆ ಟಾಗೋರ್ ಹೆಚ್ಚು ಪ್ರಭಾವಿತರಾಗಿದ್ದರು. 1882 ರಲ್ಲಿ ಟ್ಯಾಗೋರ್ ಬಂಗಾಳಿ 'ಬಿಕರಿನಿ' ಚಿತ್ರದಲ್ಲಿ ಸಣ್ಣ ಕಥೆಯೊಂದಿಗೆ ಚೊಚ್ಚಲ ಪ್ರವೇಶ ಮಾಡಿದರು.

# ಆಶಾಪುರಿ ಗೋಲ್ಡ್‌ನ 48.75 ಕೋಟಿ ರೂ.ಹಕ್ಕುಗಳ ವಿತರಣೆ ಆರಂಭ

**ಅಹಮದಾಬಾದ್:** ಚಿನ್ನದ ಆಭರಣಗಳ ಪ್ರಮುಖ ತಯಾರಕರು ಮತ್ತು ಸಗಟು ವ್ಯಾಪಾರಿಗಳಲ್ಲಿ ಒಬ್ಬರಾದ ಆಶಾಪುರಿ ಗೋಲ್ಡ್ ಆಭರಣ ಲಿಮಿಟೆಡ್ (ಬಿಎಸ್‌ಇ - ಎಜಿಒಎಲ್ - 542579) ತನ್ನ 48.75 ಕೋಟಿ ರೂ.ಗಳ ಹಕ್ಕುಗಳ ವಿತರಣೆಯನ್ನು ಮೇ 08, 2024 ರಂದು ತೆರೆಯಲಿದೆ. ಈ ವಿತರಣೆಯ ಮೂಲಕ ಸಂಗ್ರಹಿಸಿದ ಹಣವನ್ನು ಕಂಪನಿಯ ವಿಸ್ತರಣಾ ಯೋಜನೆಗಳಿಗೆ ಧನಸಹಾಯ ಮಾಡಲು, ಹೊಸ ಭೌಗೋಳಿಕತೆಗಳನ್ನು ಪ್ರವೇಶಿಸಲು ಮತ್ತು ಸಾಮಾನ್ಯ ಸಾಂಸ್ಥಿಕ ಉದ್ದೇಶಗಳಿಗಾಗಿ ಕಾರ್ಯ ಬಂಡವಾಳದ ಅವಶ್ಯಕತೆಗಳನ್ನು ಪೂರೈಸಲು ಬಳಸಲಾಗುತ್ತದೆ. ಕಂಪನಿಯ ರೈಟ್ ಇಶ್ಯೂ ಅನ್ನು ಪ್ರತಿ ಷೇರಿಗೆ ರೂ.5.85 ದರದಲ್ಲಿ ನೀಡಲಾಗುತ್ತದೆ - ಮೇ 3, 2024 ರಂದು ಮುಕ್ತಾಯದ ಷೇರಿನ ಬೆಲೆಗೆ 57.45% ರಿಯಾಯಿತಿ. ರೈಟ್ಸ್ ಇಶ್ಯೂ ಮೇ 27, 2024 ರಂದು ಕೊನೆಗೊಳ್ಳುತ್ತದೆ.



ಆಶಾಪುರಿ ಗೋಲ್ಡ್ ಆಭರಣ ಲಿಮಿಟೆಡ್ (ಪ್ರಾಚೀನ ಚಿನ್ನದ ಆಭರಣಗಳ ಪ್ರಮುಖ ಆಭರಣ ತಯಾರಕ) ವಿತರಣಾ ಬೆಲೆ ಮೇ8, 2024, ಪ್ರತಿ ಷೇರಿಗೆ 5.85 ರೂ. ಮೇ27, 2024 ಕಂಪನಿಯು ತಲಾ 1 ರೂಪಾಯಿ ಮುಖಬೆಲೆಯ 8,33,28,666 ಸಂಪೂರ್ಣ ಪಾವತಿಸಿದ ಈಕ್ವಿಟಿ ಷೇರುಗಳನ್ನು ಪ್ರತಿ ಷೇರಿಗೆ 5.85 ರೂ.ಗಳ ದರದಲ್ಲಿ (ಪ್ರತಿ ಷೇರಿಗೆ ರೂ. 4.85 ಪ್ರೀಮಿಯಂ ಸೇರಿದಂತೆ) ಒಟ್ಟು 48.75 ಕೋಟಿ ರೂ.ಗಳ ನಗದು ರೂಪದಲ್ಲಿ ವಿತರಿಸಲಿದೆ. ಪ್ರಸ್ತಾವಿತ ವಿತರಣೆಗೆ ಹಕ್ಕುಗಳ ಅರ್ಹತಾ ಅನುಪಾತವನ್ನು 1:3 ಕ್ಕೆ ನಿಗದಿಪಡಿಸಲಾಗಿದೆ (ದಾಖಲೆಯ ದಿನಾಂಕದಂದು ಅಂದರೆ ಏಪ್ರಿಲ್ 18, 2024 ರಂದು ಈಕ್ವಿಟಿ ಷೇರುದಾರರು ಹೊಂದಿರುವ ತಲಾ 1 ರೂ.ಗಳ ಪ್ರತಿ 3 ಈಕ್ವಿಟಿ ಷೇರುಗಳಿಗೆ ತಲಾ 1 ರೂ.ಗಳ ಮುಖಬೆಲೆಯ 1 ಈಕ್ವಿಟಿ ಷೇರುಗಳು). ಆನ್-ಮಾರ್ಕೆಟ್ ಹಕ್ಕುಗಳ ಹಕ್ಕುಗಳನ್ನು ತ್ಯಜಿಸಲು ಕೊನೆಯ ದಿನಾಂಕ 21 ಮೇ 2024.

ಈ ಬೆಳವಣಿಗೆಯ ಬಗ್ಗೆ ಮಾತನಾಡಿದ ಆಶಾಪುರಿ ಗೋಲ್ಡ್ ಆಭರಣ ಲಿಮಿಟೆಡ್ ನ ವ್ಯವಸ್ಥಾಪಕ ನಿರ್ದೇಶಕ ದಿನೇಶ್ ಕುಮಾರ್ ಸೋನಿ, ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಲು, ಹೊಸ ಉತ್ಪನ್ನ ಮಾರ್ಗಗಳನ್ನು ಪ್ರಾರಂಭಿಸಲು ಮತ್ತು ವಿವಿಧ ಮಾರುಕಟ್ಟೆಗಳಿಗೆ ಸಂಗ್ರಹಗಳನ್ನು ಪ್ರಾರಂಭಿಸಲು ಕಂಪನಿಯು ಇತ್ತೀಚಿನ ದಿನಗಳಲ್ಲಿ ಪ್ರಮುಖ ಕಾರ್ಯತಂತ್ರದ ಉಪಕ್ರಮಗಳನ್ನು ಕೈಗೊಂಡಿದೆ. ನಮ್ಮ ದೀರ್ಘಕಾಲೀನ ಗಮನವು ತಂಡದ ಅಭಿವೃದ್ಧಿಯಲ್ಲಿ ಹೂಡಿಕೆ ಮಾಡುವುದನ್ನು ಮುಂದುವರಿಸಿದೆ, ಭಾರತದ ಅತಿದೊಡ್ಡ ಬಿ 2 ಬಿ ಪ್ರದರ್ಶನಗಳಲ್ಲಿ ಭಾಗವಹಿಸುವುದು, ವಿತರಣೆಯ ಆದಾಯವು ಕಂಪನಿಯ ಬ್ಯಾಲೆನ್ಸ್ ಶೀಟ್ ಅನ್ನು ಮತ್ತಷ್ಟು ಬಲಪಡಿಸುತ್ತದೆ ಮತ್ತು ಅದರ ವಿಸ್ತರಣಾ ಯೋಜನೆಗಳು ಮತ್ತು ಕಾರ್ಯತಂತ್ರದ ಬೆಳವಣಿಗೆಯ ಉಪಕ್ರಮಗಳಿಗೆ ಧನಸಹಾಯ ನೀಡಲು ಸಹಾಯ ಮಾಡುತ್ತದೆ. ಕಂಪನಿಯ ನಿರ್ದೇಶಕರ ಮಂಡಳಿಯು ಏಪ್ರಿಲ್ 10, 2024 ರಂದು ಅರ್ಹ ಈಕ್ವಿಟಿ ಷೇರುದಾರರಿಗೆ 48.75 ಕೋಟಿ ರೂ.ಗಳನ್ನು ಮೀರದ ಮೊತ್ತಕ್ಕೆ ಹಕ್ಕುಗಳ ವಿತರಣೆಯ ಮೂಲಕ ಈಕ್ವಿಟಿ ಷೇರುಗಳನ್ನು ವಿತರಿಸಲು ಅನುಮೋದನೆ ನೀಡಿತು. ರೈಟ್ಸ್ ಇಶ್ಯೂ ನಂತರ, ಕಂಪನಿಯ ಒಟ್ಟು ಬಾಕಿ ಇರುವ ಷೇರುಗಳು ರೈಟ್ಸ್ ಇಶ್ಯೂಗೆ ಮೊದಲು 24,99,86,000 ಈಕ್ವಿಟಿ ಷೇರುಗಳಿಂದ 33,33,14,666 ಈಕ್ವಿಟಿ ಷೇರುಗಳಿಗೆ ಹೆಚ್ಚಾಗಬೇಕು.

## ಕಾಶ್ಮೀರದಲ್ಲಿ ಮುಂದುವರಿದ ಸೇನಾ ಕಾರ್ಯಾಚರಣೆ: ಓರ್ವ ಉಗ್ರನ ಹತ್ಯೆ!

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಇಂದು ಭಾರತೀಯ ಭದ್ರತಾ ಪಡೆ ಮತ್ತು ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿದೆ. ಈ ದಾಳಿಯಲ್ಲಿ ಭಾರತೀಯ ಸೇನಾಪಡೆ ಎನ್ಕೌಂಟರ್ ನಡೆಸಿದ್ದು, ಓರ್ವ ಉಗ್ರನನ್ನು ಹೊಡೆದುರುಳಿಸಿದೆ. ನಿನ್ನೆಯಷ್ಟೇ ಅಲ್ಲಿ ನಡೆದ ಎನ್ಕೌಂಟರ್ನಲ್ಲಿ ಇಬ್ಬರನ್ನು ಕೊಲ್ಲಲಾಗಿತ್ತು. ಇಂದು ಮತ್ತೋರ್ವ ಉಗ್ರನನ್ನು ಎನ್ಕೌಂಟರ್ ಮಾಡಲಾಗಿದೆ. ಸೋಮವಾರ ಸಂಜೆ ಆರಂಭವಾದ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಯು ಇನ್ನೂ ಮುಂದುವರೆದಿದೆ. ಕುಲ್ಗಾಮ್ ಜಿಲ್ಲೆಯ ರೆಡ್ವಾನಿ ಪ್ರದೇಶದಲ್ಲಿ ಎನ್ಕೌಂಟರ್ ಸೈಟ್ನ ಸಮೀಪವಿರುವ ಮನೆಗಳ ಹುಡುಕಾಟದ ಸಮಯದಲ್ಲಿ, ಅಲ್ಲಿ ಅಡಗಿದ್ದ ಭಯೋತ್ಪಾದಕನೊಂದಿಗೆ ಗುಂಡಿನ ಚಕಮಕಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ವೇಳೆ ಹೆಚ್ಚಿನ ಪಡೆಗಳು ಸ್ಥಳಕ್ಕೆ ಧಾವಿಸಿದ್ದು, ಓರ್ವ ಉಗ್ರನನ್ನು ಹತ್ಯೆ ಮಾಡಲಾಗಿದೆ. ಸೋಮವಾರ ರಾತ್ರಿ (ಮೇ 6) ಭದ್ರತಾ ಪಡೆಗಳು ಈ ಪ್ರದೇಶದಲ್ಲಿ ಭಯೋತ್ಪಾದಕರ ಉಪಸ್ಥಿತಿಯ ಬಗ್ಗೆ ಮಾಹಿತಿ ಪಡೆದ ನಂತರ ಈ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು. ಮಂಗಳವಾರ ಭದ್ರತಾ ಪಡೆಗಳು ನಡೆಸಿದ ಎನ್ಕೌಂಟರ್ನಲ್ಲಿ ಲಷ್ಕರ್-ಎ-ತೊಯ್ಬಾದ ವಾಂಟೆಡ್ ಭಯೋತ್ಪಾದಕ ಬಸಿತ್ ದಾರ್ ಸೇರಿದಂತೆ ಇಬ್ಬರು ಉಗ್ರರು ಹತರಾಗಿದ್ದಾರೆ.



## ರೈಲು ನಿಲ್ದಾಣಗಳಲ್ಲಿ ಜನೌಷಧಿ ಕೇಂದ್ರ ತೆರೆಯಲು ರೈಲ್ವೆ ಇಲಾಖೆ ನಿರ್ಧಾರ

**ನವದೆಹಲಿ:** ರೈಲ್ವೆ ನಿಲ್ದಾಣಗಳಿಗೆ ಭೇಟಿ ನೀಡುವ ಪ್ರಯಾಣಿಕರ ಯೋಗಕ್ಷೇಮವನ್ನು ಹೆಚ್ಚಿಸುವ ಅನ್ವೇಷಣೆಯಲ್ಲಿ, ಭಾರತೀಯ ರೈಲ್ವೆ ಇಲಾಖೆ 2023ರ ಆಗಸ್ಟ್ ತಿಂಗಳಲ್ಲಿ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳನ್ನು ಸ್ಥಾಪಿಸಲು ನೀತಿಯ ಚೌಕಟ್ಟನ್ನು ರೂಪಿಸಿತು.

ಈಗ ಭಾರತೀಯ ರೈಲ್ವೆ 100ಕ್ಕೂ ಹೆಚ್ಚು ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳನ್ನು ಸಂಚಾರ ಪ್ರದೇಶಗಳಲ್ಲಿ ಮತ್ತು ರೈಲು ನಿಲ್ದಾಣಗಳ ಕಾನ್ಕೋರ್ಸ್‌ಗಳಲ್ಲಿ ಸ್ಥಾಪಿಸಲು ನಿರ್ಧರಿಸಿದೆ.

ಆರಂಭದಲ್ಲಿ ಪ್ರಾಯೋಗಿಕ ಯೋಜನೆಗಾಗಿ 50 ನಿಲ್ದಾಣಗಳ ಪಟ್ಟಿಯನ್ನು ಗುರುತಿಸಲಾಯಿತು. ಈ ವರ್ಷದ ಮಾರ್ಚ್‌ನಲ್ಲಿ ಇವು ಕಾರ್ಯಾಚರಣೆಯನ್ನು ಪ್ರಾರಂಭಿಸಿದವು.

ಲಕ್ಷಾಂತರ ದೈನಂದಿನ ಸಂದರ್ಶಕರು ಮತ್ತು ಪ್ರಯಾಣಿಕರ ಅಗತ್ಯತೆಗಳನ್ನು ಪೂರೈಸಲು ರೈಲ್ವೆ ಇಲಾಖೆಯು ಗುಣಮಟ್ಟದ ಔಷಧಿಗಳು ಮತ್ತು ಜನೌಷಧಿ ಉತ್ಪನ್ನಗಳನ್ನು ಎಲ್ಲರಿಗೂ ಕೈಗೆಟುಕುವ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಲು ನೋಡುತ್ತಿದೆ.

12.53 ಲಕ್ಷ ರೂ.ಗಳ ವೈಯಕ್ತಿಕ ವೆಚ್ಚದಲ್ಲಿ ಪ್ರಿ-ಫ್ಯಾಬ್ರಿಕೇಶನ್ ರಚನೆಗಳೊಂದಿಗೆ ದೇಶಾದ್ಯಂತದ ಸ್ಥಳಗಳಲ್ಲಿ ಹೆಚ್ಚುವರಿ 61 ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳನ್ನು ನಿಯೋಜಿಸಲು ನಿರ್ಧರಿಸಲಾಗಿದೆ. ಇದು ಕೈಗೆಟುಕುವ ಬೆಲೆಯಲ್ಲಿ ಔಷಧಿಗಳನ್ನು ಒದಗಿಸುವ ಮೂಲಕ ಸಮಾಜದ ಎಲ್ಲಾ ವರ್ಗಗಳ ನಡುವೆ ಕ್ಷೇಮ ಮತ್ತು ಕಲ್ಯಾಣವನ್ನು ಹೆಚ್ಚಿಸುತ್ತದೆ, ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಹಿರಿಯ ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



# ಮೋದಿ, ನೀವು ಸ್ವಲ್ಪ ಹೆದರಿದ್ದೀರಾ?

## ಅದಾನಿ, ಅಂಬಾನಿಯಿಂದ 'ಕಪ್ಪುಹಣ'ದ ಬಗ್ಗೆ ಇಡಿ, ಸಿಬಿಐ ತನಿಖೆ ಮಾಡಿ - ಪ್ರಧಾನಿಗೆ ರಾಹುಲ್ ಸವಾಲು

**ನವದೆಹಲಿ:** ಉದ್ಯಮಿಗಳಾದ ಅದಾನಿ ಮತ್ತು ಅಂಬಾನಿ ತಮ್ಮ ಪಕ್ಷಕ್ಕೆ ಕಪ್ಪುಹಣ ಕಳುಹಿಸಿದ್ದಾರೆಯೇ ಎಂಬ ಬಗ್ಗೆ ಸಿಬಿಐ ಅಥವಾ ಇಡಿ ತನಿಖೆ ನಡೆಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಸವಾಲು ಹಾಕಿದ್ದಾರೆ.

ಕಳೆದ ಐದು ವರ್ಷಗಳಿಂದ ಅದಾನಿ- ಅಂಬಾನಿ ವಿಷಯ ಪ್ರಸ್ತಾಪಿಸುತ್ತಿದ್ದ ಶಹಜಾದ್ (ರಾಹುಲ್ ಗಾಂಧಿ) ಲೋಕಸಭೆ ಚುನಾವಣೆ ಘೋಷಣೆಯಾದ ನಂತರ ಅವರ ಹೆಸರನ್ನು ಪ್ರಸ್ತಾಪಿಸುವುದನ್ನು ಏಕೆ ನಿಲ್ಲಿಸಿದ್ದಾರೆ ಎಂದು ನನಗೆ ಆಶ್ಚರ್ಯವಾಗುತ್ತಿದೆ. ಟೆಂಪೋಗಳಲ್ಲಿ ಕಪ್ಪು ಹಣದ ಎಷ್ಟು ಮೂಟೆಗಳನ್ನು ನೀವು ಪಡೆದಿದ್ದೀರಿ ಎಂದು ದೇಶಕ್ಕೆ ಉತ್ತರಿಸಬೇಕಿದೆ ಎಂದು ಚುನಾವಣಾ ಭಾಷಣದ ವೇಳೆ ಪ್ರಧಾನಿ ಮೋದಿ ಹೇಳಿದ್ದರು. ಇಂದು ಮೋದಿ ಹೇಳಿಕೆಗೆ ವಿಡಿಯೋ ಮೂಲಕ ತಿರುಗೇಟು ನೀಡಿರುವ ರಾಹುಲ್ ಗಾಂಧಿ, ಮೋದಿ ಅವರು ಮನಿ ಇನ್ ಎ ಟೆಂಪೋ ವೈಯಕ್ತಿಕ ಅನುಭವ ದಿಂದ ಮಾತನಾಡುತ್ತಿದ್ದರೆ ವ್ಯಂಗ್ಯವಾಡಿದ್ದಾರೆ.

ಮೋದಿ ಜೀ, ನೀವು ಸ್ವಲ್ಪ ಹೆದರಿದ್ದೀರಾ? ನೀವು ಸಾಮಾನ್ಯವಾಗಿ ಮುಚ್ಚಿದ ಬಾಗಿಲಿನ ಹಿಂದೆ ಅದಾನಿ ಮತ್ತು ಅಂಬಾನಿ ಬಗ್ಗೆ ಮಾತನಾಡುತ್ತೀರಿ. ಆದರೆ ನೀವು ಮೊದಲ ಬಾರಿಗೆ ಸಾರ್ವಜನಿಕವಾಗಿ ಅದಾನಿ ಮತ್ತು ಅಂಬಾನಿ ಬಗ್ಗೆ ಮಾತನಾಡಿದ್ದೀರಿ ಎಂದು ವೀಡಿಯೊ ಸಂದೇಶದಲ್ಲಿ ರಾಹುಲ್ ಗಾಂಧಿ ಲೇವಡಿ ಮಾಡಿದ್ದಾರೆ.

ಅವರು ಟೆಂಪೋದಲ್ಲಿ ಹಣ ಕೊಡುತ್ತಾರೆ ಎಂಬುದು ನಿಮಗೂ ಗೊತ್ತು. ಇದು ನಿಮ್ಮ ವೈಯಕ್ತಿಕ ಅನುಭವವೇ? ಎಂದು ಪ್ರಧಾನಿ ಮೋದಿಯನ್ನು ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ.

ಒಂದು ಕೆಲಸ ಮಾಡಿ - ಸಿಬಿಐ, ಇಡಿ ಅವರ ಬಳಿಗೆ ಕಳುಹಿಸಿ ಮತ್ತು ಸಮಗ್ರ ತನಿಖೆ ನಡೆಸಿ, ಹೆದರಬೇಡಿ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.



## ಅದಾನಿ-ಅಂಬಾನಿ ಬಳಿ ಅಪಾರ ಪ್ರಮಾಣದ ಕಪ್ಪುಹಣವಿದೆ ಎಂದು ಮೋದಿ ಒಪ್ಪಿಕೊಂಡಿದ್ದಾರೆ

**ಜೈಪುರ:** ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಚುನಾವಣಾ ಭಾಷಣಗಳಲ್ಲಿ ಕೈಗಾರಿಕೋದ್ಯಮಿಗಳಿಂದ ರಾಹುಲ್ ಗಾಂಧಿ ಕಪ್ಪು ಹಣ ಪಡೆದಿದ್ದಾರೆ ಎಂದು ಆರೋಪಿಸುವ ಮೂಲಕ ಅದಾನಿ-ಅಂಬಾನಿ ಕಪ್ಪು ಹಣ ಸಂಗ್ರಹಿಸಿರುವುದನ್ನು ಒಪ್ಪಿಕೊಂಡಿದ್ದಾರೆ ಎಂದು ಕಾಂಗ್ರೆಸ್ ನಾಯಕ ಅಶೋಕ್ ಗೆಹ್ಲೋಟ್ ಬುಧವಾರ ಹೇಳಿದ್ದಾರೆ.



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಹಳ ಸಮಯದಿಂದ ಸತ್ಯಕ್ಕಾಗಿ ಹೋರಾಡುತ್ತಿದ್ದಾರೆ ಮತ್ತು ಅಂತಿಮವಾಗಿ ಸತ್ಯ ಗೆಲ್ಲುತ್ತದೆ ಎಂದು ಗೆಹ್ಲೋಟ್ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅದಾನಿ-ಅಂಬಾನಿ ಬಳಿ ಅಪಾರ ಪ್ರಮಾಣದ ಕಪ್ಪುಹಣವಿದೆ ಎಂದು ಪ್ರಧಾನಿ ಮೋದಿ ಬಹಿರಂಗವಾಗಿಯೇ ಒಪ್ಪಿಕೊಂಡಿದ್ದಾರೆ. ಅದನ್ನು ಅವರು ಕಳೆದ 10 ವರ್ಷಗಳಲ್ಲಿ ಮುಟ್ಟುವ ಧೈರ್ಯ ಮಾಡಲಿಲ್ಲ ಎಂದು ಗೆಹ್ಲೋಟ್ ವಾಗ್ದಾಳಿ ನಡೆಸಿದ್ದಾರೆ.

ಈಗ, ಮೋದಿ ಜೀ ಅವರು ಕರೆನ್ಸಿ ನೋಟುಗಳಿಂದ ತುಂಬಿದ ಗೋಣಿಚೀಲಗಳು ಮತ್ತು ಟೆಂಪೋಗಳನ್ನು ಯಾರ ಸ್ಥಳದಲ್ಲಿ ಖಾಲಿ ಮಾಡಲಾಯಿತು ಎಂಬುದನ್ನು ಹೇಳಬೇಕು? ಎಂದು ಗೆಹ್ಲೋಟ್ ಆಗ್ರಹಿಸಿದ್ದಾರೆ. ರಾಹುಲ್ ಗಾಂಧಿ ಬಹಳ ಸಮಯದಿಂದ ಸತ್ಯಕ್ಕಾಗಿ ಹೋರಾಡುತ್ತಿದ್ದಾರೆ. ಅಂತಿಮ ಸತ್ಯ ಗೆಲ್ಲುತ್ತದೆ, ಜೂನ್ 4 ರಂದು ನ್ಯಾಯ ಮತ್ತು ಸತ್ಯಕ್ಕೆ ಜಯ ಸಿಗುತ್ತದೆ ಎಂದು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಟ್ವೀಟ್ ಮಾಡಿದ್ದಾರೆ. ಕಳೆದ ಐದು ವರ್ಷಗಳಿಂದ ಅದಾನಿ-ಅಂಬಾನಿ ವಿಷಯ ಪ್ರಸ್ತಾಪಿಸುತ್ತಿದ್ದ ಶಹಜಾದ್(ರಾಹುಲ್ ಗಾಂಧಿ) ಲೋಕಸಭೆ ಚುನಾವಣೆ ಘೋಷಣೆಯಾದ ನಂತರ ಅವರ ಹೆಸರನ್ನು ಪ್ರಸ್ತಾಪಿಸುವುದನ್ನು ಏಕೆ ನಿಲ್ಲಿಸಿದ್ದಾರೆ ಎಂದು ನನಗೆ ಆಶ್ಚರ್ಯವಾಗುತ್ತಿದೆ. ಟೆಂಪೋಗಳಲ್ಲಿ ಕಪ್ಪು ಹಣದ ಎಷ್ಟು ಮೂಟೆಗಳನ್ನು ನೀವು ಪಡೆದಿದ್ದೀರಿ ಎಂದು ದೇಶಕ್ಕೆ ಉತ್ತರಿಸಬೇಕಿದೆ ಎಂದು ಚುನಾವಣಾ ಭಾಷಣದ ವೇಳೆ ಪ್ರಧಾನಿ ಮೋದಿ ಹೇಳಿದ್ದರು.

## ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಪಿತ್ರೋಡಾ ರಾಜೀನಾಮೆ

**ನವದೆಹಲಿ:** ದಕ್ಷಿಣ ಭಾರತೀಯರು ಆಫ್ರಿಕನ್ನರಂತೆ ಇದ್ದಾರೆ ಎಂಬುದಾಗಿ ಹೇಳುವ ಮೂಲಕ ಮನುಷ್ಯರ ಚರ್ಮದ ಬಣ್ಣದ ಕುರಿತು ಕೀಳು ಹೇಳಿಕೆ ನೀಡಿ ವಿವಾದ ಸೃಷ್ಟಿಸಿದ ಬೆನ್ನಲ್ಲೇ ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಯಾಮ್ ಪಿತ್ರೋಡಾ ರಾಜೀನಾಮೆ ನೀಡಿದ್ದಾರೆ. ಸ್ಯಾಮ್ ಪಿತ್ರೋಡಾ ರಾಜೀನಾಮೆ ಕುರಿತು ಕಾಂಗ್ರೆಸ್ ಹಿರಿಯ ನಾಯಕ ಜೈರಾಮ್ ರಮೇಶ್ ಮಾಹಿತಿ ನೀಡಿದ್ದಾರೆ. ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯಲು ಸ್ಯಾಮ್ ಪಿತ್ರೋಡಾ ನಿರ್ಧರಿಸಿದ್ದಾರೆ. ಇದು ಅವರು ಸ್ವ ಇಚ್ಛೆಯಿಂದ ತೆಗೆದುಕೊಂಡಿರವ ತೀರ್ಮಾನವಾಗಿದೆ. ಅವರ ನಿರ್ಧಾರವನ್ನು ಕಾಂಗ್ರೆಸ್ ಅಧ್ಯಕ್ಷರು ಸ್ವಾಗತಿಸಿದ್ದಾರೆ ಎಂಬುದಾಗಿ ಎಕ್ಸ್ ಸಾಮಾಜಿಕ ಜಾಲತಾಣದಲ್ಲಿ ಜೈರಾಮ್ ರಮೇಶ್ ಅವರು ಬರೆದುಕೊಂಡಿದ್ದಾರೆ.



## ಬ್ಯಾಂಕ್ ಆಫ್ ಬರೋಡಾ'ಗೆ ಬಿಗ್ ರಿಲೀಫ್

**ನವದೆಹಲಿ :** ವಸ್ತು ಮೇಲ್ವಿಚಾರಣೆಯ ಕಾಳಜಿಗಳ ನಂತರ ನಿರ್ಬಂಧ ವಿಧಿಸಿದ ಆರು ತಿಂಗಳ ನಂತರ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬುಧವಾರ ಬ್ಯಾಂಕ್ ಆಫ್ ಬರೋಡಾಗೆ 'ಬಾಬ್ ವರ್ಲ್ಡ್' ಅಪ್ಲಿಕೇಶನ್ ಮೂಲಕ ಹೊಸ ಗ್ರಾಹಕರನ್ನು ಆನ್ಬೋರ್ಡ್ ಮಾಡಲು ಅನುಮತಿ ನೀಡಿದೆ. ಅಕ್ಟೋಬರ್ 10, 2023 ರಂದು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ ತನ್ನ ಮೊಬೈಲ್ ಅಪ್ಲಿಕೇಶನ್ 'ಬಾಬ್ ವರ್ಲ್ಡ್'ನಲ್ಲಿ ಹೊಸ ಗ್ರಾಹಕರನ್ನ ಆನ್ಬೋರ್ಡ್ ಮಾಡದಂತೆ ಆರ್ಬಿಐ ನಿರ್ಬಂಧ ವಿಧಿಸಿತ್ತು.




ಆರ್ಬಿಐ, ಮೇ 8, 2024ರ ಪತ್ರದ ಮೂಲಕ, ಬಾಬ್ ವರ್ಲ್ಡ್ ಮೇಲಿನ ಮೇಲೆ ತಿಳಿಸಿದ ನಿರ್ಬಂಧಗಳನ್ನ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದುಹಾಕುವ ನಿರ್ಧಾರವನ್ನ ಬ್ಯಾಂಕಿಗೆ ತಿಳಿಸಿದೆ ಎಂದು ನಾವು ತಿಳಿಸಲು ಬಯಸುತ್ತೇವೆ. ಯಾಕಂದ್ರೆ, ಅನ್ವಯವಾಗುವ ಮಾರ್ಗಸೂಚಿಗಳು ಮತ್ತು ಅಸ್ತಿತ್ವದಲ್ಲಿರುವ ಕಾನೂನುಗಳು ಅಥವಾ ನಿಬಂಧನೆಗಳಿಗೆ ಅನುಗುಣವಾಗಿ ಬಾಬ್ ವರ್ಲ್ಡ್ ಅಪ್ಲಿಕೇಶನ್ ಮೂಲಕ ಗ್ರಾಹಕರನ್ನು ಆನ್ಬೋರ್ಡ್ ಮಾಡಲು ಬ್ಯಾಂಕ್ ಮುಕ್ತವಾಗಿದೆ ಎಂದು ಸಾಲದಾತ ನಿಯಂತ್ರಕ ಫೈಲಿಂಗ್ನಲ್ಲಿ ತಿಳಿಸಿದ್ದಾರೆ. ಬ್ಯಾಂಕ್ ಈಗ ಬಾಬ್ ವರ್ಲ್ಡ್ ಅಪ್ಲಿಕೇಶನ್ನಲ್ಲಿ ಹೊಸ ಗ್ರಾಹಕರನ್ನ ಆನ್ಬೋರ್ಡ್ ಮಾಡುವುದನ್ನ ಪುನರಾರಂಭಿಸಲಿದೆ, ನಿಯಂತ್ರಕ ಮಾರ್ಗಸೂಚಿಗಳ ಅನುಸರಣೆಯನ್ನ ಖಚಿತಪಡಿಸಿಕೊಳ್ಳಲು ಬದ್ಧವಾಗಿದೆ ಎಂದು ಅದು ಹೇಳಿದೆ. ಕಳೆದ ವಾರ, ಆರ್ಬಿಐ ಇಕಾಮ್ ಮತ್ತು ಇನ್ಸ್ಟಾ ಇಎಂಐ ಕಾರ್ಡ್ ಮೂಲಕ ಸಾಲಗಳನ್ನು ಮಂಜೂರು ಮಾಡುವ ಮತ್ತು ವಿತರಿಸುವ ಬಜಾಜ್ ಫೈನಾನ್ಸ್ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಿತ್ತು.

## ಏರ್ ಇಂಡಿಯಾ ಸಿಬ್ಬಂದಿ ಸಾಮೂಹಿಕ ರಜೆ

**ನವದೆಹಲಿ:** ಅನಾರೋಗ್ಯ ಕಾರಣ ನೀಡಿ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಸಿಬ್ಬಂದಿ ಸಾಮೂಹಿಕ ರಜೆ ಹಾಕಿರುವ ಪರಿಣಾಮ ಏರ್ ಇಂಡಿಯಾದ 86 ಕ್ಕೂ ಹೆಚ್ಚು ವಿಮಾನಗಳ ಹಾರಾಟ ರದ್ದುಗೊಂಡಿದೆ. ಸುಮಾರು 300 ಹಿರಿಯ ಕ್ಯಾಬಿನ್ ಸಿಬ್ಬಂದಿ ಕೊನೆಯ ಕ್ಷಣದಲ್ಲಿ ಅನಾರೋಗ್ಯದ ಕಾರಣ ನೀಡಿ ಕರ್ತವ್ಯಕ್ಕೆ ಗೈರಾಗಿದ್ದಾರೆ. ಮೊಬೈಲ್ ಫೋನ್‌ಗಳನ್ನು ಆಫ್ ಮಾಡಿಕೊಂಡಿದ್ದಾರೆ. ಮತ್ತು ಅಂತಾರಾಷ್ಟ್ರೀಯ ದೇಶೀಯ ವಿಮಾನಗಳ ಕಾರ್ಯಾಚರಣೆ ರದ್ದುಗೊಳಿಸಲಾಗಿದೆ. ಸಂಬಳದ ವಿಚಾರದಲ್ಲಿ ಅಸಮಾಧಾನ ಹೊಂದಿರುವ ಸಿಬ್ಬಂದಿ ಪ್ರತಿಭಟನೆ ನಡೆಸುತ್ತಿದ್ದಾರೆ. ಯಾವುದೇ ನೋಟಿಸ್ ನೀಡದೇ ಕೆಲಸಕ್ಕೆ ಗೈರಾಗಿದ್ದಾರೆ. ಅನಾರೋಗ್ಯ ಕಾರಣ ನೀಡಿ ಸಾಮೂಹಿಕವಾಗಿ ಸಿಬ್ಬಂದಿ ರಜೆ ಹಾಕಿದ್ದಾರೆ. ಈ ಅನಿರೀಕ್ಷಿತ ಅಡಚಣೆಗಾಗಿ ನಾವು ನಮ್ಮ ಅತಿಥಿಗಳಿಗೆ ಪ್ರಾಮಾಣಿಕವಾಗಿ ಕ್ಷಮೆಯಾಚಿಸುತ್ತೇವೆ. ಈಗ ಎದುರಾಗಿರುವ ಪರಿಸ್ಥಿತಿಯು, ಇದುವರೆಗೆ ನಾವು ಒದಗಿಸಿರುವ ಸೇವೆಯ ಗುಣಮಟ್ಟವನ್ನು ಪ್ರತಿಬಿಂಬಿಸುವುದಿಲ್ಲ ಎಂದು ಪ್ರಯಾಣಿಕರಲ್ಲಿ ಮನವಿ ಮಾಡಿದ್ದಾರೆ.




## ಸಿಎಎ ರದ್ದು ಮಾಡಲು ಸಾಧ್ಯವಾಗಲ್ಲ

**ದೆಹಲಿ:** ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಪ್ರತಿಪಕ್ಷಗಳಿಗೆ ಸವಾಲು ಎಸೆದಿದ್ದು, ರಾಹುಲ್ ಗಾಂಧಿಅವರ ಅಜ್ಜಿ ಮತ್ತೆ ಭೂಮಿಗೆ ಬಂದರೂ ಸಿಎಎ ಕಾನೂನನ್ನು ರದ್ದು ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ರಾಹುಲ್ ಗಾಂಧಿ ಮತ್ತು ಅಖಿಲೇಶ್ ಯಾದವ್ ಅವರಂತಹ ವಿರೋಧ ಪಕ್ಷದ ನಾಯಕರು ಸಿಎಎ ವಿರುದ್ಧವಾಗಿದ್ದಾರೆ ಎಂದು ಅವರು ಹೇಳಿದ್ದಾರೆ. ''ರಾಹುಲ್ (ನಾನಿ) ಅಜ್ಜಿ ಭೂಮಿಗೆ ಮರಳಿ ಬಂದರೂ ಸಿಎಎ ರದ್ದುಗೊಳಿಸಲು ಸಾಧ್ಯವಿಲ್ಲ'' ಎಂದು ಲಖಿಂಪುರ ಖೇರಿಯಲ್ಲಿ ಚುನಾವಣಾ ರ್ಯಾಲಿಯಲ್ಲಿ ಅಮಿತ್ ಶಾ ಹೇಳಿದ್ದಾರೆ.



''ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ, ಭಾರತವು ಪಾಕಿಸ್ತಾನ ಮತ್ತು ಬಾಂಗ್ಲಾದೇಶದಿಂದ ಬಂದವರಿಗೆ (ಅಲ್ಪಸಂಖ್ಯಾತರಿಗೆ) ಪೌರತ್ವವನ್ನು ನೀಡುತ್ತದೆ'' ಎಂದು ಅವರು ಹೇಳಿದರು. ಮಾರ್ಚ್‌ನಲ್ಲಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಸಿಎಎಯನ್ನು ಜಾರಿಗೆ ತಂದಿತು. ಇದು ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನದಿಂದ ಮುಸ್ಲಿಮೇತರ ವಲಸಿಗರಿಗೆ (ಡಿಸೆಂಬರ್ 31 ರ ಮೊದಲು ಭಾರತಕ್ಕೆ ಪ್ರವೇಶಿಸಿದವರಿಗೆ) ಭಾರತೀಯ ಪೌರತ್ವವನ್ನು ಪಡೆಯಲು ಸುಲಭಗೊಳಿಸುತ್ತದೆ. ಡಿಸೆಂಬರ್ 2019 ರಲ್ಲಿ ಸಂಸತ್ತು ಕಾನೂನನ್ನು ಅಂಗೀಕರಿಸಿದ ನಾಲ್ಕು ವರ್ಷಗಳ ನಂತರ ಈ ಬೆಳವಣಿಗೆ ಸಂಭವಿಸಿದೆ. ಕಾಯ್ದೆಯ ಅಧಿಸೂಚನೆಯು ವಿರೋಧ ಪಕ್ಷದ ನಾಯಕರಿಂದ ಟೀಕೆಗೆ ಕಾರಣವಾಯಿತು. ಅಧಿಸೂಚಿತ ನಿಯಮಗಳು ''ಅಸಂವಿಧಾನಿಕ'', ''ತಾರತಮ್ಯ'' ಮತ್ತು ಸಂವಿಧಾನದಲ್ಲಿ ಪ್ರತಿಪಾದಿಸಲಾದ ''ಪೌರತ್ವದ ಜಾತ್ಯತೀತ ತತ್ವ''ದ ಉಲ್ಲಂಘನೆಯಾಗಿದೆ ಎಂದು ವಿರೋಧ ಪಕ್ಷಗಳು ಹೇಳಿವೆ. ಪ್ರತಿಪಕ್ಷಗಳು ಅಧಿಕಾರಕ್ಕೆ ಬಂದರೆ ಅಯೋಧ್ಯೆಯ ರಾಮ ಮಂದಿರಕ್ಕೆ ''ಬಾಬರಿ ಬೀಗ'' ಹಾಕುತ್ತಾರೆ ಎಂದು ಲಖಿಂಪುರದಲ್ಲಿ ನಡೆದ ರ್ಯಾಲಿಯಲ್ಲಿ, ಅಮಿತ್ ಶಾ ಹೇಳಿದ್ದಾರೆ.

## ಪೇಟಿಎಂ ಷೇರುಬೆಲೆ ಪಾತಾಳಕ್ಕೆ

**ನವದೆಹಲಿ:** ಆರ್ಬಿಐನಿಂದ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ಗೆ ನಿರ್ಬಂಧ ಬಿದ್ದಾಗ ಪೇಟಿಎಂ ಅಥವಾ ಒನ್97 ಕಮ್ಯೂನಿಕೇಶನ್ಸ್ ಸಂಸ್ಥೆಯ ಷೇರುಕುಸಿತದ ಹೊಸ ಸುತ್ತು ಆರಂಭವಾಗಿತ್ತು. ಫೆಬ್ರುವರಿಯಿಂದ ಇಲ್ಲಿಯವರೆಗೆ ನಿರಂತರವಾಗಿ ಕುಸಿಯುತ್ತಿರುವ ಪೇಟಿಎಂ ಷೇರುಬೆಲೆ ಬುಧವಾರ ಮಾರುಕಟ್ಟೆ ದಿನಾಂತ್ಯದಲ್ಲಿ 317.15 ರೂ ತಲುಪಿದೆ. ಅದರ ಹಿಂದಿನ ಕನಿಷ್ಠ ದರ 318 ರೂ ಇತ್ತು. ಆ ದಾಖಲೆ ಮುರಿದು ಕುಸಿದಿದೆ. ಸತತ 10 ಮಾರುಕಟ್ಟೆ ದಿನಗಳು ಇದರ ಕುಸಿತವಾಗಿದೆ. ಇದೇಅ ಮೊದಲ ಬಾರಿಗೆ ಇಷ್ಟೊಂದು ದೀರ್ಘಾವಧಿ ಕುಸಿತ ಕಂಡಿರುವುದು. 391.35 ರೂ ಇದ್ದ ಷೇರುಬೆಲೆ ಕೇವಲ 10 ಸೆಷನ್ನಲ್ಲಿ ಶೇ. 19ರಷ್ಟು ಕುಸಿತ ಕಂಡಿದೆ. ಈ ವರ್ಷದಲ್ಲಿ ಜನವರಿಯಿಂದ ಈಚೆ ಶೇ. 50ರಷ್ಟು ಬೆಲೆ ಕುಸಿತವಾಗಿದೆ. ಪೇಟಿಎಂ ಷೇರು ಬೆಲೆ ಕುಸಿತ ಇಷ್ಟಕ್ಕೇ ನಿಲ್ಲುವುದಿಲ್ಲ ಎನ್ನುವುದು ಮಾರುಕಟ್ಟೆ ವಿಶ್ಲೇಷಕರ ಅನಿಸಿಕೆ. 280 ರೂವರೆಗೂ ಕುಸಿಯಬಹುದು ಎಂದು ಇವರು ನಿರೀಕ್ಷಿಸುತ್ತಿದ್ದಾರೆ. 2021ರಲ್ಲಿ ಪೇಟಿಎಂ ಐಪಿಒ ಬಿಡುಗಡೆ ಆದಾಗ ಭರ್ಜರಿ ಬೇಡಿಕೆ ಹೊಂದಿತ್ತು. ಒಂದು ಷೇರುಬೆಲೆ ಬರೋಬ್ಬರಿ 2,150ರೂ ಇತ್ತು. ಈಗ ಶೇ. 85.25ರಷ್ಟು ಕುಸಿತ ಕಂಡಿರುವುದು ನಿಜಕ್ಕೂ ಶೋಚನೀಯ ಪರಿಸ್ಥಿತಿ ಎನಿಸಿದೆ. ಪೇಟಿಎಂ ಲಾಭ ಗಳಿಸಲು ಪರದಾಡುತ್ತಿರುವುದು ಸೇರಿದಂತೆ ಹಲವು ಕಾರಣಗಳು ಈ ಪರಿ ಷೇರು ಕುಸಿತಕ್ಕೆ ಕಾರಣವಾಗಿದೆ. ಪೇಟಿಎಂನ ಗ್ರಾಹಕರು ಸಾಲ ಮರುಪಾವತಿ ಮಾಡದೇ ಹೋದ ಕಾರಣ ಆದಿತ್ಯ ಬಿರ್ಲಾ ಫೈನಾನ್ಸ್ ಸಂಸ್ಥೆ ಲೋನ್ ಗ್ಯಾರಂಟಿಗಳನ್ನು ಬಳಸಿದೆ. ಇದು ಪೇಟಿಎಂ ಮೇಲೆ ಋಣಾತ್ಮಕ ಪರಿಣಾಮ ಬೀರಿದೆ. ಆದಿತ್ಯ ಬಿರ್ಲಾ ಸಂಸ್ಥೆ ಪೇಟಿಎಂ ಸಾಲದ ಪಾರ್ಟ್ನರ್. ಅಂದರೆ ಪೇಟಿಎಂ ಮುಖಾಂತರ ಸಾಲ ಪಡೆಯುವ ಗ್ರಾಹಕರಿಗೆ ಆದಿತ್ಯ ಬಿರ್ಲಾ ಸಾಲ ಒದಗಿಸುತ್ತದೆ. ಯಾವುದೇ ಸೆಕ್ಯೂರಿಟಿ ಇಲ್ಲದೇ ಸಾಲ ನೀಡಲಾಗುತ್ತಿತ್ತು. ಇದಕ್ಕೆ ಪೇಟಿಎಂ ಸಂಸ್ಥೆ ಲೋನ್ ಗ್ಯಾರಂಟಿ ಕೊಟ್ಟಿತ್ತು. ನೂರಾರು ಕೋಟಿ ರೂ ಮೌಲ್ಯದ ಈ ಗ್ಯಾರಂಟಿಗಳನ್ನು ಬಳಕೆ ಮಾಡಲಾಗಿರುವುದರಿಂದ ಪೇಟಿಎಂನ ಹಣಕಾಸು ಸ್ಥಿತಿಗೆ ಹಿನ್ನಡೆ ತರುವ ನಿರೀಕ್ಷೆ ಇದೆ.

## ಸಿಂಗಪುರದಲ್ಲಿ ಎಫ್-16 ಯುದ್ಧ ವಿಮಾನ ಪತನ

**ಸಿಂಗಪುರ:** ಸಿಂಗಪುರ ವಾಯುಪಡೆಯ ಎಫ್ -16 ಯುದ್ಧ ವಿಮಾನ ಸೇನಾ ವಾಯುನೆಲೆಯಲ್ಲಿ ಟೇಕ್-ಆಫ್ ಆಗುವಾಗ ಪತನಗೊಂಡಿದೆ ಎಂದು ರಕ್ಷಣಾ ಸಚಿವಾಲಯ ಬುಧವಾರ ತಿಳಿಸಿದೆ. ಮಧ್ಯಾಹ್ನ 12.35ರ ಸುಮಾರಿಗೆ ಟೇಕ್-ಆಫ್ ಆಗುವಾಗ ವಿಮಾನದಲ್ಲಿ ಸಮಸ್ಯೆ ಉಂಟಾಗಿ ಪತನಗೊಂಡಿದೆ. ವಿಮಾನವು ತೆಂಗಾಹ್ ವಾಯು ನೆಲೆಯಲ್ಲಿ ಪತನಗೊಂಡಿದ್ದು, ಪೈಲಟ್ ಸುರಕ್ಷಿತವಾಗಿ ಹೊರಬಂದಿದ್ದಾರೆ. ಅವರು ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದು, ಇತರ ಯಾವುದೇ ಸಿಬ್ಬಂದಿಗೆ ಗಾಯವಾಗಿಲ್ಲ ಎಂದು ಸಚಿವಾಲಯ ತಿಳಿಸಿದೆ. ಘಟನೆಯ ಕುರಿತ ತನಿಖೆ ನಡೆಯುತ್ತಿದ್ದು, ಹೆಚ್ಚಿನ ಮಾಹಿತಿ ಶೀಘ್ರದಲ್ಲೇ ನೀಡುವುದಾಗಿ ಸಚಿವಾಲಯ ತಿಳಿಸಿದೆ.



## ಚಿಕನ್ ಶವರ್ಮ ಸೇವಿಸಿ 19 ವರ್ಷದ ಯುವಕ ಸಾವು

**ಮುಂಬೈ:** ಚಿಕನ್ ಶವರ್ಮ ಸೇವನೆ ಮಾಡಿದ 19 ವರ್ಷದ ಯುವಕ ಸಾವನ್ನಪ್ಪಿದ್ದು, ಪ್ರಕರಣದ ಸಂಬಂಧ ಇಬ್ಬರು ವ್ಯಾಪಾರಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಸಂತ್ರಸ್ತ ಯುವಕ ಸ್ಟಾಲ್ ನಿಂದ ಚಿಕನ್ ಶರ್ವಮ ತಂದು ಸೇವನೆ ಮಾಡಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೇ.-3 ರಂದು ಟ್ರಾಂಬೆಯಲ್ಲಿ ಈ ಘಟನೆ ವರದಿಯಾಗಿದೆ.

ಪ್ರಥಮೇಶ್ ಭೋಕ್ಸೆ ಮೃತ ಯುವಕನಾಗಿದ್ದು, ಚಿಕನ್ ಶವರ್ಮ ಸೇವನೆ ಬಳಿಕ ಹೊಟ್ಟೆನೋವು, ವಾಂತಿಯಾಗಿದ್ದು, ವೈದ್ಯಕೀಯ ನೆರವಿಗಾಗಿ ಸರ್ಕಾರಿ ಆಸ್ಪತ್ರೆಗೆ ಹೋದರೂ ಪ್ರಯೋಜನವಾಗಲಿಲ್ಲ. ಮನೆಗೆ ಹಿಂದಿರುಗಿದ ನಂತರ ಆತ ಮತ್ತೆ ಅನಾರೋಗ್ಯಕ್ಕೀಡಾದ. ಈ ಬಳಿಕ ಯುವಕನ ಕುಟುಂಬ ಸದಸ್ಯರು ಆತನನ್ನು ಮೇ 5 ರಂದು ಕೆಇಎಂ ಆಸ್ಪತ್ರೆಗೆ ಕರೆದೊಯ್ದರು. ವೈದ್ಯರು ಚಿಕಿತ್ಸೆ ನೀಡಿ ಮನೆಗೆ ಕಳುಹಿಸಿದ್ದರು ಎಂದು ಟ್ರಾಂಬೆ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ. ಚಿಕಿತ್ಸೆ ನೀಡಿದರೂ ಮತ್ತೆ ಆತ ಅನಾರೋಗ್ಯಕ್ಕೀಡಗಿ ಸಾವನ್ನಪ್ಪಿದ್ದಾನೆ. ಈ ಬಗ್ಗೆ ಆಸ್ಪತ್ರೆ ಅಧಿಕಾರಿಗಳು ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.



## ನಾನು ಡಾರ್ಕ್ ಸ್ಕಿನ್ ಭಾರತೀಯ ಎಂದ ಅಣ್ಣಾಮಲೈ

**ಚೆನ್ನೈ:** ಸ್ಯಾಮ್ ಪಿತ್ರೋಡಾ ಅವರ ಜನಾಂಗೀಯ ಟೀಕೆಗೆ ಪ್ರತಿಕ್ರಿಯಿಸಿದ ತಮಿಳುನಾಡು ಬಿಜೆಪಿ ಅಧ್ಯಕ್ಷ ಕೆ. ಅಣ್ಣಾಮಲೈ, ನಾನು ಡಾರ್ಕ್ ಸ್ಕಿನ್ ಭಾರತೀಯ ಎಂದು ಹೇಳುವ ಮೂಲಕ ಪಿತ್ರೋಡಾಗೆ ತಿರುಗೇಟು ಕೊಟ್ಟರು. ಸ್ಯಾಮ್ ಪಿತ್ರೋಡಾ ಅವರ ಹೇಳಿಕೆ ದುರದೃಷ್ಟಕರವಾಗಿದೆ.

ಯಾಕೆಂದರೆ ಆಫ್ರಿಕನ್ನರು, ಚೈನೀಸ್, ಅರಬ್ಬರು, ಬಿಳಿಯರು ಇದನ್ನು ನಾನು ತಪ್ಪು ಎಂದು ಹೇಳುತ್ತಿಲ್ಲ, ಪರವಾಗಿಲ್ಲ. ಅವರು ತಮ್ಮದೇ ಆದ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಹೊಂದಿದ್ದಾರೆ ಎಂದು ತಮ್ಮ ಎಕ್ಸ್ ಖಾತೆಯಲ್ಲಿ ವಿಡಿಯೋ ಮಾಡಿ ಹಾಕಿದ್ದಾರೆ.



ಆದರೆ ಅವರ ಅರ್ಥವೇನೆಂದರೆ, ಯಾರೋ ನಮ್ಮ ದೇಶವನ್ನು ಆಕ್ರಮಿಸಿದ್ದಾರೆ ಮತ್ತು ನಾವು ಆ ದಾಳಿಕೋರರ ವಂಶಸ್ಥರು. ಅದಕ್ಕಾಗಿಯೇ ಪಶ್ಚಿಮ ಅರಬ್, ಈಶಾನ್ಯ ಅವರು ಚೈನೀಸ್ ಎಂದು ಕರೆಯುತ್ತಾರೆ. ಉತ್ತರವನ್ನು ಅವರು ಬಿಳಿಯರು ಮತ್ತು ದಕ್ಷಿಣವನ್ನು ಅವರು ಆಫ್ರಿಕನ್ನರು ಎಂದು ಕರೆಯುತ್ತಾರೆ. ಇದು ಅವರ ಮನಸ್ಥಿತಿಯನ್ನು ತೋರಿಸುತ್ತದೆ ಮತ್ತು ಅದಕ್ಕಾಗಿಯೇ ನಾನು ಈಗ ನನ್ನ ಎಕ್ಸ್ ಖಾತೆಯಲ್ಲಿಯೂ ಉಲ್ಲೇಖಿಸಿದ್ದೇನೆ ಎಂದರು. ಸದ್ಯ ಸ್ಯಾಮ್ ಹೇಳಿಕೆಗೆ ಬಿಜೆಪಿ ತೀವ್ರ ಆಕ್ರೋಶ ಹೊರಹಾಕುತ್ತಿದ್ದು, ನಾಯಕರು ಸೋಶಿಯಲ್ ಮೀಡಿಯಾದಲ್ಲಿ ಕೈ ನಾಯಕನ ವಿರುದ್ಧ ಅಭಿಯಾನ ಆರಂಭಿಸಿದ್ದಾರೆ. ಭಾರತದ ಪೂರ್ವದ ಜನರು ಚೀನಿಯರಂತೆ, ಪಶ್ಚಿಮದ ಜನರು ಅರಬ್ಬರಂತೆ ಕಾಣಿಸುತ್ತಾರೆ. ಉತ್ತರ ಭಾರತದವರು ಬಹುಶಃ ಬಿಳಿಯರಂತೆ ಕಂಡರೆ, ದಕ್ಷಿಣ ಭಾರತದ ಜನ ಆಫ್ರಿಕನ್ನರಂತೆ ಕಾಣಿಸುತ್ತಾರೆ ಎಂದು ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಹೇಳಿದ್ದರು.

ಸಂಜೆ ಮುಗಿಲು

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಪ್ರೇಮಲೋಕ 2: ಅಂದು ಜೂಹಿ, ಇಂದು ತಮಿಳಿನ ತೇಜು



ಕ್ರೇಜಿಸ್ಟಾರ್ ರವಿಚಂದ್ರನ್ ಮತ್ತೊಂದು ಪ್ರೇಮಲೋಕ ಹಾಡಲು ಸಜ್ಜಾಗಿರುವ ವಿಷಯ ಗೊತ್ತೇ ಇದೆ. ಮೊದಲ ಪ್ರೇಮಲೋಕಕ್ಕೆ ರವಿಮಾಮ ಬಾಲಿವುಡ್‌ನಿಂದ ಜೂಹಿ ಚಾವ್ಲಾ ಅವರನ್ನು ಕರೆತಂದಿದ್ದರು. ಪ್ರೇಮಲೋಕ 2 ಚಿತ್ರಕ್ಕೆ ತಮಿಳು ನಟಿಗೆ ಬಲೆಹಾಕಿದ್ದಾರೆ ಎಂದು ಹೇಳಲಾಗುತ್ತಿದೆ. ತಮಿಳು ನಟತೇಜು ಅಶ್ವಿನಿ ಈ ಸಿನಿಮಾದ ನಾಯಕಿ ಎನ್ನುವುದು ಸದ್ಯಕ್ಕಿರುವ ವರ್ತಮಾನ. ಈ ನಡುವೆ ಪ್ರೇಮಲೋಕ 2 ಸಿನಿಮಾ ಕುರಿತಂತೆ ಅನೇಕ ವಿಶೇಷಗಳು ಆಚೆ ಬರುತ್ತಿವೆ. ಅದರಲ್ಲಿ ರವಿಮಾಮ ಮಕ್ಕಳ ಸುದ್ದಿಯೂ ಸೇರಿಕೊಂಡಿದೆ. ಈ ಸಿನಿಮಾದಲ್ಲಿ ತಮ್ಮ ಇಬ್ಬರೂ ಮಕ್ಕಳಿಗೆ ಪಾತ್ರ ಕೊಟ್ಟಿದ್ದಾರೆ.ಆ ಪಾತ್ರಕ್ಕಾಗಿತಯಾರಿಕೂಡ ಮಾಡಿಸುತ್ತಿದ್ದಾರೆ.

ಪ್ರೇಮಲೋಕ 2 ಚಿತ್ರಕ್ಕಾಗಿಡಾನ್ಸ್ ಮತ್ತು ಮೈ ಹುರಿಗೊಳಿಸಿಕೊಳ್ಳುತ್ತಿರುವೆ. ಅಪ್ಪನೇ ಮಾರ್ಗದರ್ಶನ ಮಾಡುತ್ತಿದ್ದಾರೆ. ಪ್ರೇಮಲೋಕ ಸಿನಿಮಾದ ಹೆಸರೇದೊಡ್ಡದು. ಹಾಗಾಗಿ ನಿರೀಕ್ಷೆಇದ್ದೇಇರುತ್ತದೆ. ಹಾಗಾಗಿ ಸಾಕಷ್ಟುತಯಾರಿ ಮಾಡಿಕೊಂಡುಕ್ಯಾಮೆರಾ ಮುಂದೆ ನಿಲ್ಲುತ್ತೇನೆ ಎನ್ನುತ್ತಾರೆ ಮನೋರಂಜನ್.

ರವಿಚಂದ್ರನ್ ಕೆರಿಯರ್ ಬದಲಿಸಿದ ಸಿನಿಮಾಅಂದರೆ 1987ರಲ್ಲಿ ತೆರೆಕಂಡ ಪ್ರೇಮಲೋಕ. ತಾವೇ ನಿರ್ದೇಶಿಸಿ, ನಟಿಸಿ ಗೆದ್ದಿದ್ದರು. ಈಗ ಪ್ರೇಮಲೋಕ ಪಾರ್ಟ್2 ಸಿನಿಮಾ ಮಾಡೋಕೆ ಮುಂದಾಗಿದ್ದಾರೆ. ಮೇ 30ರಿಂದ ಶೂಟಿಂಗ್‌ಕೂಡ ಶುರುವಾಗಲಿದೆ.ಕಾರ್ಯಕ್ರಮವೊಂದರಲ್ಲಿ ಅತಿಥಿಯಾಗಿ ರವಿಚಂದ್ರನ್ ಭಾಗವಹಿಸಿದ್ದರು.'ಪ್ರೇಮಲೋಕ 2' ಬಗ್ಗೆ ಮಾಹಿತಿ ನೀಡಿದ್ದಾರೆ. ಮೇ 30ರಂದು 'ಪ್ರೇಮಲೋಕ 2' ಸಿನಿಮಾವನ್ನು ಆರಂಭಿಸುತ್ತೇನೆ. ನನ್ನದೊಡ್ಡ ಮಗ ಮನೋರಂಜನ್‌ಅದರಲ್ಲಿ ನಟಿಸುತ್ತಾನೆ. ಚಿಕ್ಕ ಮಗ ವಿಕ್ರಮ್‌ಚಿಕ್ಕ ಪಾತ್ರ ನಟಿಸುತ್ತಾನೆ. ನಾನು ತಂದೆ ಪಾತ್ರದಲ್ಲಿ ನಟಿಸುತ್ತಿದ್ದೇನೆ ಎಂದು ಕ್ರೇಜಿ ಸ್ಟಾರ್ ತಿಳಿಸಿದ್ದಾರೆ.

'ಪ್ರೇಮಲೋಕ 2' ಸಿನಿಮಾದಲ್ಲಿ ಬರೀ 20-25 ಹಾಡುಗಳು ಇರುತ್ತದೆ ಅಷ್ಟೇ. ಆದರೆಜೀವನಪೂರ್ತಿಇಡೀ ಸಿನಿಮಾ ಚಿಕ್ಕವರಿಂದಿಡಿದು ದೊಡ್ಡವರ ತನಕ ಎಲ್ಲರಿಗೂ ಕಾಡುತ್ತದೆ. ಈ ಸಿನಿಮಾದಲ್ಲಿ ಪ್ರೀತಿ ಇದೆ, ಜಾತಿಇಲ್ಲ. ಭೇದ ಭಾವಇಲ್ಲ, ಹಣದ ಕುರಿತು ಇಲ್ಲ. ಇದೇ ಬೇರೆಥರದ ಕಥೆ ಇರುವ ಸಿನಿಮಾ. ನನಗೆ ಪ್ರೀತಿ ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ ಎಂದು ರವಿಚಂದ್ರನ್ ಹೇಳಿದ್ದಾರೆ.

# ಮದುವೆಯಾಗದೇ ಮಕ್ಕಳು ಮಾಡಿಕೊಳ್ಳುವ ಆಸೆ



ತೆಲುಗಿನ ನಟಿ ಫರಿಯಾ ಅಬ್ದುಲ್ಲಾ ನಟನೆಯ 'ಆ ಒಕ್ಕಟಿ ಅಡಕ್ಕು' ಸಿನಿಮಾ ಮೇ 3ರಂದು ರಿಲೀಸ್ ಆಗಿದ್ದು, ಈ ಚಿತ್ರದ ಪ್ರಚಾರ ಕಾರ್ಯದಲ್ಲಿ ಬ್ಯುಸಿಯಾಗಿದ್ದಾರೆ. ಈ ಚಿತ್ರದ ಸಂದರ್ಶನದಲ್ಲಿ ಮದುವೆ ಬೇಡಆದರೆ ಮಕ್ಕಳು ಬೇಕು ಎಂದು ಶಾಕಿಂಗ್‌ಕಾಮೆಂಟ್‌ವೊಂದನ್ನು ನೀಡುವ ಮೂಲಕ ಸುದ್ದಿಯಲ್ಲಿದ್ದಾರೆ.

ನನಗೆ ನನ್ನ ಮದುವೆಯ ಬಗ್ಗೆ ಯಾವುದೇ ಭರವಸೆ ಇಲ್ಲ. ನಾನು ಖಂಡಿತವಾಗಿಯೂ ಮದುವೆಯಾಗಬೇಕು ಎಂದು ಯೋಚಿಸುವುದಿಲ್ಲ. ಆದರೆ ನಾನು ಮಕ್ಕಳನ್ನು ಪ್ರೀತಿಸುತ್ತೇನೆ. ಮದುವೆಯಾಗದೇ ಮಕ್ಕಳನ್ನು ಪಡೆಯಲು ಬಯಸುತ್ತೇನೆ ಎಂದು ನಟಿ ಮಾತನಾಡಿದ್ದಾರೆ. ಸದ್ಯ, ಫರಿಯಾಅವರ ಹೇಳಿಕೆ ವೈರಲ್‌ಆಗಿದೆ.

'ಜಾತಿರತ್ನಲು' ಚಿತ್ರದ ಮೂಲಕ ಟಾಲಿವುಡ್‌ಗೆ ಎಂಟ್ರಿಕೊಟ್ಟರು. ಬಳಿಕ ಬ್ಯಾಕ್‌ಟು ಬ್ಯಾಕ್ ಸಿನಿಮಾಗಳಲ್ಲಿ ಫರಿಯಾ ನಟಿಸಿದ್ದರು. ನರೇಶ್‌ಗೆ ನಾಯಕಿಯಾಗಿ ಸದ್ಯ ಆ ಒಕ್ಕಟಿ ಅಡಕ್ಕು ಚಿತ್ರದ ಮೂಲಕ ಸದ್ದು ಮಾಡುತ್ತಿದ್ದಾರೆ.

ಸದಾ ಒಂದಲ್ಲಾ ಒಂದು ಹಾಟ್ ಫೋಟೋಶೂಟ್ ಮೂಲಕ ಕಾಣಿಸಿಕೊಳ್ಳುವ ಫರಿಯಾ ಇದೀಗ 'ವಲ್ಲಿ ಮಾಯಿಲ್' ಎಂಬ ತಮಿಳು ಸಿನಿಮಾದಲ್ಲಿ ನಟಿಸುತ್ತಿದ್ದಾರೆ.



# ಕನ್ನಡ ಪ್ರಸಿದ್ಧ ಕಿರುತೆರೆ ನಟಿಯದ್ದು ಎನ್ನಲಾದ ಅಶ್ಲೀಲ ವಿಡಿಯೋ ವೈರಲ್

ಕನ್ನಡಕಿರುತೆರೆ ಲೋಕದ ಪ್ರಸಿದ್ಧ ನಟಿಜ್ಯೋತಿರೈಅವರದ್ದುಎನ್ನಲಾದ ಅಶ್ಲೀಲ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಒಟ್ಟು ಮೂರು ಅಶ್ಲೀಲ ವಿಡಿಯೋಗಳು ಹಾಗೂ ಒಂದಷ್ಟು ಅಶ್ಲೀಲ ಫೋಟೋಗಳನ್ನು ಅನೇಕರುಕದ್ದು ಮುಚ್ಚಿ ಹಂಚಿಕೊಂಡಿದ್ದರು. ಎಡಿಟ್ ಬಾ ಅಭಿ ಎನ್ನುವ ಎಕ್ಸ್ ಖಾತೆಯಲ್ಲಿ ತನ್ನ ಯೂಟ್ಯೂಬ್ ಚಾನೆಲ್ ನಲ್ಲಿ ವಿಡಿಯೋಗಳನ್ನು ಅಪ್ ಲೋಡ್ ಮಾಡುತ್ತೇನೆ ಎಂದು ಬಹಿರಂಗವಾಗಿಯೇ ಬರೆದುಕೊಂಡಿದ್ದು. ಇದಕ್ಕೆ ಸಂಬಂಧಿಸಿದಂತೆ ಜ್ಯೋತಿರೈ ಸುದೀರ್ಘವಾಗಿತಮ್ಮ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಈ ಕುರಿತಂತೆಜ್ಯೋತಿರೈ ಪ್ರತಿಕ್ರಿಯೆ ನೀಡದೇ ಇದ್ದರೂ, ಕೆಲವು ವ್ಯಕ್ತಿಗಳು ತಮ್ಮ ನಕಲಿ ಫೋಟೋ ಮತ್ತು ವಿಡಿಯೋಗಳನ್ನು ಶೇರ್ ಮಾಡಿ ಕಿರುಕುಳ ನೀಡುತ್ತಿದ್ದಾರೆ ಎಂದು ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ. ಈಗಾಗಲೇ ದೂರುಕೂಡ ನೀಡಿರುವುದಾಗಿ ತಿಳಿಸಿದ್ದಾರೆ. ಹರಿದಾಡುತ್ತಿರುವ ಫೋಟೋ ಮತ್ತು ವಿಡಿಯೋಗಳು ಫೇಕ್‌ಎಂದುಅವರು ಸೋಷಿಯಲ್ ಮೀಡಿಯಾ ಮೂಲಕ ಸ್ಪಷ್ಟ



ಪಡಿಸಿದ್ದಾರೆ. ಕೆಲವರ ನಂಬರ್ ನಿಂದ ನನಗೆ ಕರೆಗಳು ಬಂದಿದ್ದವು. ಅವರೇಇಂದು ನನ್ನದುಎನ್ನಲಾಗುತ್ತಿರುವ ವಿಡಿಯೋ ಮತ್ತು ಫೋಟೋ ಕಳುಹಿಸಿದ್ದಾರೆ ಎಂದು ಬರೆದಿದ್ದಾರೆ.

ಸಂಸದ ಪ್ರಜ್ವಲ್‌ರೇವಣ್ಣ ಅಶ್ಲೀಲ ವಿಡಿಯೋಗಳು ಸಖತ್ ಸುದ್ದಿ ಮಾಡುತ್ತಿರುವ ಬೆನ್ನಲ್ಲೇ.ಕನ್ನಡದ ಕಿರುತೆರೆಯ ಪ್ರಸಿದ್ಧ ನಟಿಯೊಬ್ಬರದ್ದು ಎನ್ನಲಾದ ಅಶ್ಲೀಲ ವಿಡಿಯೋಗಳು ಸೋಷಿಯಲ್ ಮೀಡಿಯಾಗಳಲ್ಲಿ ವೈರಲ್‌ಆಗಿದ್ದವು. ಮೂರು ಅಶ್ಲೀಲ ವಿಡಿಯೋಗಳು ಮತ್ತು ಹಲವು ಫೋಟೋಗಳು ಸಾಮಾಜಿಕಜಾಲತಾಣದಲ್ಲಿ ಭಾರೀ ಸೇಲ್‌ಆಗುತ್ತಿದ್ದವು.ಅವು ಕನ್ನಡದ ನಟಿಯದ್ದುಎನ್ನುವಂತೆ ಬಿಂಬಿಸಲಾಗಿತ್ತು.

ಕನ್ನಡದಲ್ಲಿ ಜೋಗುಳ ಸೇರಿದಂತೆ ಸಾಕಷ್ಟು ಧಾರಾವಾಹಿಗಳಲ್ಲಿ ನಟಿಸಿರುವ ಮತ್ತು ಈಗ ಪರಭಾಷೆಯಕಿರುತೆರೆ ಹಾಗೂ ವೆಬ್ ಸಿರೀಸ್ ಗಳಲ್ಲಿ ನಟಿಸಿರುವ ಈ ನಟಿಇತ್ತೀಚೆಗಷ್ಟೇತಮ್ಮ ಮತ್ತೊಂದು ಸಂಬಂಧವನ್ನುಖಚಿತ ಪಡಿಸಿದ್ದರು ಎಂದು ಪ್ರಚಾರ ಮಾಡಲಾಗಿತ್ತು. ಆ ನಟಿ ಬೇರೆಯಾರೂಅಲ್ಲ ಮಂಗಳೂರಿನ ಬೆಡಗಿಜ್ಯೋತಿರೈ ಎಂಬ ಬಿಲ್ಡ್‌ಅಪ್ ಕೂಡಕೊಡಲಾಗಿತ್ತು.

ಜ್ಯೋತಿರೈಕನ್ನಡದಲ್ಲಿ ಬದುಕುಕಟ್ಟಿಕೊಂಡು ಇದೀಗ ಪರಭಾಷಾ ಧಾರಾವಾಹಿಗಳಲ್ಲೂ ಮಿಂಚುತ್ತಿದ್ದಾರೆ. ಕೆಲವು ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ.ಜೊತೆಗೆ ವೆಬ್ ಸಿರೀಸ್ ನಲ್ಲಿ ನಟಿಸಿದ್ದಾರೆ. ತಮಗಿಂತಚಿಕ್ಕ ವಯಸ್ಸಿನ ನಿರ್ದೇಶಕನಜೊತೆ ಮದುವೆ ಆಗಿದ್ದಾರೆ ಎಂದು ಹೇಳಲಾಗುತ್ತಿದೆ. ಆ ನಿರ್ದೇಶಕನಜೊತೆಗಿನ ಫೋಟೋಗಳನ್ನೂ ಅವರು ಅಪ್ ಲೋಡ್ ಮಾಡಿದ್ದರು.

ಜೊತೆಗೆ ಸದಾ ಸೋಷಿಯಲ್ ಮೀಡಿಯಾಗಳಲ್ಲಿ ಆಕ್ಟಿವ್ ಆಗಿರುವ ಜ್ಯೋತಿರೈ ಆಗಾಗ್ಗೆ ಹಾಟ್ ಫೋಟೋಗಳನ್ನು ಶೇರ್ ಮಾಡಿ, ಅಭಿಮಾನಿಗಳ ಹೃದಯಕ್ಕೆ ಕಿಚ್ಚು ಹಚ್ಚಿಸುತ್ತಿರುತ್ತಾರೆ. ಆದರೆ, ಈ ಬಾರಿ ಅವರು ಅಶ್ಲೀಲ ವಿಡಿಯೋಗಳ ಮೂಲಕ ಸೋಷಿಯಲ್ ಮೀಡಿಯಾದಲ್ಲಿ ಹಲ್ಚಲ್ ಎಬ್ಬಿಸಿದ್ದರು. ಈಗ ಅದಕ್ಕೆಲ್ಲ ಸ್ಪಷ್ಟನೆ ಸಿಕ್ಕಿದೆ.

ಕ್ರೀಡೆ

### ಐಪಿಎಲ್‌ನಲ್ಲಿ ಕೆಟ್ಟ ಅಂಪೈರಿಂಗ್ ಸದ್ದು

# ಹಾಳಿ, ಮಾಜಿ ಕ್ರಿಕೆಟರ್ಸ್ ಕೆಂಡಾಮಂಡಲ




ರಾಜಸ್ಥಾನ್ ರಾಯಲ್ಸ್ ವಿರುದ್ಧ ಮಂಗಳವಾರ ನಡೆದ ಪಂದ್ಯದಲ್ಲಿ ಡೆಲ್ಲಿಕ್ಯಾಪಿಟಲ್ಸ್ ತಂಡ 20 ರನ್‌ಗಳ ಅಮೋಘ ಜಯ ಸಾಧಿಸಿತ್ತು. ಆದ್ರೆ ಜಿದ್ದಾಜಿದ್ದಿ ಕಣದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕ ಸಂಜು ಸ್ಯಾಮ್ಸನ್‌ಔಟ್ ಆದ ಬಗೆ ಈಗ ವಿವಾದಕ್ಕೆ ಕಾರಣವಾಗಿದೆ.

ಬೃಹತ್ ಮೊತ್ತದಗುರಿ ಬೆನ್ನತ್ತಿದ್ದ ರಾಜಸ್ಥಾನ್ ಪರ ನಾಯಕ ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್ ನಡೆಸುತ್ತಿದ್ದರು. 45 ಎಸೆತಗಳಲ್ಲಿ 8 ಫೋರ್ ಮತ್ತು 6 ಸಿಕ್ಸರ್‌ಗಳೊಂದಿಗೆ 86 ರನ್ ಸಿಡಿಸಿದ್ದ ಸ್ಯಾಮ್ಸನ್ 86 ರನ್ ಗಳಿಸಿದ್ದರು. ಸಂಜು ಅವರ ಸ್ಫೋಟಕ ಇನ್ನಿಂಗ್ಸ್ ತಂಡದಲ್ಲಿ ಗೆಲುವಿನ ಭರವಸೆ ಮೂಡಿಸಿತ್ತು. ಆದರೆ, 16ನೇ ಓವರ್‌ನ 4ನೇ ಎಸೆತದಲ್ಲಿ ವೇಗದ ಬೌಲರ್ ಮುಕೇಶ್ ಕುಮಾರ್ ಅವರ ಎಸೆತವನ್ನು ಲಾಂಗ್‌ಆನ್ ಕಡೆಗೆ ಸಿಕ್ಸರ್ ಬಾರಿಸಲು ಪ್ರಯತ್ನಿಸಿದರು. ಆದ್ರೆ, ಬೌಂಡರಿಗೆರೆಯ ಬಳಿ ಫೀಲ್ಡರ್ ಶಾಯ್ ಹೋಪ್ ಕ್ಯಾಚ್ ತಗೆದುಕೊಂಡರು.ಆದರೆ, ಅವರ ಕಾಲು ಬೌಂಡರಿಗೆರೆಗೆ ತಾಕಿರುವ ಸಾಧ್ಯತೆಗಳೂ ಹೆಚ್ಚಾಗಿ ಕಂಡು ಬಂದಂತೆ ಇತ್ತು.ಟಿವಿ ಅಂಪೈರ್‌ಎರಡು ಮೂರು ಆಂಗಲ್‌ಗಳಲ್ಲಿ ಬೌಂಡರಿಗೆರೆಗೆ ಶೂಗಳು ಟಚ್ ಆಗಿದೆಯೇಎಂಬುದನ್ನು ಪರಿಶೀಲಿಸಿದರು. ಬಳಿಕ ಟಿವಿ ಅಂಪೈರ್‌ಔಟ್‌ತೀರ್ಪು ನೀಡಿದರು.

**ಗ್ರೌಂಡ್‌ನಲ್ಲೇ ವಾಗ್ವಾದಕ್ಕಿಳಿದ ಸಂಜು:** ಔಟ್‌ತೀರ್ಪು ಹೊರ ಬೀಳುತ್ತಿದ್ದಂತೆಯೇ ಅಸಮಾಧಾನಗೊಂಡ ಸಂಜುಅಂಪೈರ್‌ಜೊತೆಗೆ ವಾಗ್ವಾದ ನಡೆಸಿದರು. ಬಳಿಕ ಪೆವಿಲಿಯನ್‌ಗೆ ಮರಳಿದರು.ಸಂಜು ಸ್ಯಾಮ್ಸನ್ ನಿರ್ಗಮನದ ಬಳಿಕ ಆರ್‌ಆರ್‌ತಂಡದ ಮುಖ್ಯಕೋಚ್‌ಕುಮಾರ ಸಂಗಕ್ಕಾರ ಕೂಡ ಡಗೌಟ್‌ನಲ್ಲಿ ಅಸಮಾಧಾನ ಹೊರಹಾಕಿದ್ದರು. ನಂತರ ಅಂಪೈರ್ ವಿರುದ್ಧ ನೆಟ್ಟಿಗರು ಫುಲ್ ಕ್ಲಾಸ್‌ತೆಗೆದುಕೊಂಡರು. 2024 ಟೂರ್ನಿಯಲ್ಲಿ ಅಂಪೈರ್‌ಗಳಿಂದ ಆಗುತ್ತಿರುವ ಸಾಲು ಸಾಲು ತಪ್ಪುಗಳನ್ನು ಎತ್ತಿ ತೋರಿಸಿದರು. ಅಂಪೈರ್ ಕೇವಲ ಒಂದು ಮೂಲೆಯಕ್ಯಾಮೆರಾ ವಿಡಿಯೋ ಮಾತ್ರವೇ ವೀಕ್ಷಿಸಿದ್ದು, ಮತ್ತೊಂದು ತುದಿಯ ಕ್ಯಾಮೆರಾದ ವಿಡಿಯೋ ನೋಡಿದ್ದರೆ ಕಾಲು ಗೆರೆಗೆತಾಗಿರುವುದು ಕಾಣಿಸುತ್ತಿತ್ತುಎಂಬುದು ಅಭಿಮಾನಿಗಳ ವಾದವಾಗಿದೆ. ಸಂಜು ವಿಕೆಟ್ ಪತನದ ಬಳಿಕ ರನ್ ವೇಗ ಕುಂಟಿತಗೊಂಡುರಾಜಸ್ಥಾನ ತಂಡ ಸೋಲಿಗೆ ತುತ್ತಾಯಿತು.

**ಅಂಪೈರ್‌ತೀರ್ಪಿಗೆ ಬದ್ಧರಾಗಿರಬೇಕು:** ಸಂಜು ಔಟ್ ಕುರಿತು ಪ್ರತಿಕ್ರಿಯೆ ನೀಡಿದ ಮೆಂಟರ್ ಕುಮಾರ ಸಂಗಕ್ಕಾರ, ಕೆಲವೊಂದು ಪಂದ್ಯಗಳಲ್ಲಿ ಅಂಪೈರ್‌ಗಳು ನೋಡುವ ದೃಷ್ಟಿಕೋನದ ಮೇಲೆ ತೀರ್ಪು ನಿರ್ಧಾರವಾಗುತ್ತವೆ. ಕೊನೆಯಲ್ಲಿ 3ನೇ ಅಂಪೈರ್‌ತೀರ್ಪಿಗೆ ಬದ್ಧರಾಗಿರಬೇಕು ಎಂದು ಸಲಹೆ ನೀಡಿದ್ದಾರೆ.

**ಬೌಂಡರಿ ಲೈನ್‌ಗೆ ತಾಕಿತ್ತು:** ಈ ಕುರಿತು ಮಾತನಾಡಿದ ಮಾಜಿಕ್ರಿಕೆಟಿಗ ನವಜ್ಯೋತ್ ಸಿಂಗ್ ಸಿಧು, ಸಂಜು ಸ್ಯಾಮ್ಸನ್‌ಅವರಔಟ್ ನಿರ್ಧಾರಆಟದ ದಿಕ್ಕನ್ನೇ ಬದಲಿಸಿತು.ಅಂಪೈರ್ ಲೈನ್‌ನ ಮತ್ತೊಂದು ಭಾಗವನ್ನೂಎರಡು ಬಾರಿ ನೋಡಬೇಕಿತ್ತುಎಂದು ಹೇಳಿದ್ದಾರೆ.

**ಕೆಟ್ಟಅಂಪೈರಿಂಗ್:** ಪಂದ್ಯದ ಬಳಿಕ ಪೋಸ್ಟ್ ಪ್ರೆಸೆಂಟೇಷನ್‌ನಲ್ಲಿ ಮಾತನಾಡಿದ ಸಂಜು, ಗೆಲುವು ನಮ್ಮ ಕೈಲಿತ್ತು. ಓವರ್‌ಗೆ 11-12 ರನ್‌ಗಳ ಅಗತ್ಯವಿತ್ತಷ್ಟೆ.ಆದರೆ, ಐಪಿಎಲ್ ಪಂದ್ಯದಲ್ಲಿ ಈ ರೀತಿಯ ಸೋಲೆದುರಾಗುತ್ತವೆ. ಇಲ್ಲಿನ ಪಿಚ್‌ನಲ್ಲಿ ನಾವು 10 ರನ್ ಹೆಚ್ಚು ಬಿಟ್ಟುಕೊಟ್ಟೆವು. ಕೆಲ ಬೌಂಡರಿಗಳನ್ನು ತಡೆದಿದ್ದರೆಗುರಿ ಕಡಿಮೆ ಆಗಿರುತ್ತಿತ್ತು. ಇನ್ನು ಅಂಪೈರಿಂಗ್‌ಕೂಡಕೆಟ್ಟದಾಗಿತ್ತು.ಸೋಲಿಗೆ ಕಾರಣಗಳನ್ನು ಹುಡುಕಿಅದನ್ನು ಸರಿಪಡಿಸಿಕೊಂಡು ಮುನ್ನುಗ್ಗುವಕಡೆಗೆ ಎದುರು ನೋಡುತ್ತಿದ್ದೇವೆ ಎಂದು ಹೇಳಿದರು.

# ಹೈದರಾಬಾದ್‌ಗೆ 10 ವಿಕೆಟ್‌ಗಳ ಅದ್ಧೂರಿ ಜಯ!



ಮತ್ತೊಮ್ಮೆ ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್‌ಅವರ ಸ್ಫೋಟಕ ಅರ್ಧಶತಕಗಳ ಬ್ಯಾಟಿಂಗ್ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್‌ತಂಡವು ಲಕ್ನೋ ವಿರುದ್ಧ 10 ವಿಕೆಟ್‌ಗಳ ಅದ್ಧೂರಿಜಯ ಸಾಧಿಸಿದೆ.ಈ ಮೂಲಕ ಪ್ಲೇಆಫ್ ಗೆ ಮತ್ತಷ್ಟು ಹತ್ತಿರವಾಗಿದೆ.ಆದ್ರೆ ಹೀನಾಯ ಸೋಲಿನೊಂದಿಗೆ ಲಕ್ನೋ ಸೂಪರ್‌ಜೈಂಟ್ಸ್ ಪ್ಲೇಆಫ್ ಹಾದಿಯನ್ನು ಕಠಿಣವಾಗಿಸಿಕೊಂಡಿದೆ.

ಕೋಲ್ಕತ್ತಾ ನೈಟ್‌ರೈಡರ್ಸ್, ರಾಜಸ್ಥಾನ್‌ರಾಯಲ್ಸ್ ತಂಡಗಳು ಈಗಾಗಲೇ ತಲಾ 16 ಅಂಕಗಳೊಂದಿಗೆ ಪ್ಲೇಆಫ್ ಸಮೀಪದಲ್ಲಿವೆ. ಇದೀಗ 12 ರಲ್ಲಿ 7ನೇ ಗೆಲುವಿನೊಂದಿಗೆ 14 ಅಂಕ ಗಳಿಸಿ ಸನ್‌ರೈಸರ್ಸ್ ಸಹ ಪ್ಲೇಆಫ್ ಪ್ರವೇಶಿಸಲು ಹತ್ತಿರವಾಗಿದೆ.11 ಪಂದ್ಯಗಳಲ್ಲಿ ತಲಾ 6 ಪಂದ್ಯಗಳಲ್ಲಿ ಗೆಲುವು ಸಾಧಿಸಿರುವ ಸಿಎಸ್‌ಕೆ, ಡೆಲ್ಲಿಕ್ಯಾಪಿಟಲ್ಸ್‌ಕ್ರಮವಾಗಿ 4 ಮತ್ತು 5ನೇ ಸ್ಥಾನದಲ್ಲಿದ್ದು, ಲಕ್ನೋ 6ನೇ ಸ್ಥಾನದಲ್ಲೇ ಉಳಿಯುವಂತಾಗಿದೆ.ಮುಂದಿನ 2 ಪಂದ್ಯಗಳಲ್ಲಿ ಉತ್ತಮರನ್ ರೇಟ್‌ನೊಂದಿಗೆ ಗೆಲುವು ಸಾಧಿಸಿದರೆ ಮಾತ್ರವೇ ಲಕ್ನೋಗೆ ಪ್ಲೇಆಫ್ ತಲುಪುವ ಹಾದಿ ಸಲೀಸಾಗಲಿದೆ.ಇದೇವೇಳೆ ಡೆಲ್ಲಿ, ಸಿಎಸ್‌ಕೆ ತಂಡಗಳೂ ಗೆಲುವು ಕಾಯ್ದುಕೊಂಡರೆ ಲಕ್ನೋತಂಡ ಪ್ಲೇಆಫ್‌ನಿಂದ ಹೊರಬೀಳಲಿದೆ. ಟಾಸ್‌ಗೆದ್ದು ಮೊದಲು ಬ್ಯಾಟಿಂಗ್‌ಆಯ್ದುಕೊಂಡ ಲಕ್ನೋ ಸೂಪರ್‌ಜೈಂಟ್ಸ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿತ್ತು. 166 ರನ್‌ಗಳ ಸ್ಪರ್ಧಾತ್ಮಕಗುರಿ ಬೆನ್ನತ್ತಿದ ಹೈದರಾಬಾದ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 9.4 ಓವರ್‌ಗಳಲ್ಲೇ 167 ರನ್ ಸಿಡಿಸಿ ಗೆಲುವು ದಾಖಲಿಸಿತು.ಆರಂಭಿಕರಾಗಿ ಕಣಕ್ಕಿಳಿದ ಅಭಿಷೇಕ್ ಶರ್ಮಾ ಹಾಗೂ ಟ್ರಾವಿಸ್ ಹೆಡ್ ಲಕ್ನೋತಂಡ ಬೌಲರ್‌ಗಳನ್ನ ಹಿಗ್ಗಾಮುಗ್ಗಾ ಚೆಂಡಾಡಿದರು.ಇದರಿಂದಾಗಿ ಹೈದರಾಬಾದ್ ಪವರ್ ಪ್ಲೇ ನಲ್ಲೇಯಾವುದೇ ವಿಕೆಟ್‌ನಷ್ಟವಿಲ್ಲದೇ 107 ರನ್‌ಕಲೆಹಾಕಿತ್ತು.ಬಳಿಕವೂ ವಿಕೆಟ್ ಬಿಟ್ಟುಕೊಡದೇ ಬ್ಯಾಟಿಂಗ್ ಅಬ್ಬರ ನಿಲ್ಲಿಸದ ಬ್ಯಾಟರ್ಸ್ ಕೇವಲ 9.4 ಓವರ್‌ಗಳಲ್ಲೇ 167 ರನ್ ಚಚ್ಚಿ ಗೆಲುವಿನ ಮೆಟ್ಟಿಲೇರಿದರು.

# ಚೆನ್ನೈ ಕಂಪನಿಯಲ್ಲಿ 3 ಕೋಟಿ ರೂ. ಕೊಟ್ಟು ಪೆನ್‌ಡ್ರೈವ್ ಖರೀದಿಸಿದ್ದಾರೆ



**ಮೈಸೂರು:** ಪೆನ್‌ಡ್ರೈವ್ ಪ್ರಕರಣದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಅವರ ಕೈವಾಡವಿದೆ ಎಂದು ಆರೋಪಿಸಿ ಜೆಡಿಎಸ್ ಕಾರ್ಯಕರ್ತರು ರಾಜ್ಯಾದ್ಯಂತ ವಿವಿಧೆಡೆ ಪ್ರತಿಭಟನೆ ನಡೆಸಿದ್ದಾರೆ.

ಸಿಎಂ-ಡಿಸಿಎಂ ವಿರುದ್ಧ ಜೆಡಿಎಸ್ ನಾಯಕರು-ಕಾರ್ಯಕರ್ತರು ಮಂಡ್ಯ, ಮೈಸೂರು, ರಾಮನಗರ, ದೇವನಹಳ್ಳಿ, ಹುಬ್ಬಳ್ಳಿ, ಗದಗದಲ್ಲಿ ಪ್ರತಿಭಟನೆ ನಡೆಸಿದ್ದಾರೆ.ಮೈಸೂರಿನಲ್ಲಿ ಡಿಸಿ ಕಚೇರಿ ಮುಂಭಾಗ ಜಿ.ಟಿ. ದೇವೇಗೌಡ ಹಾಗೂ ಸಾರಾ ಮಹೇಶ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ್ದಾರೆ.

ಇದೇ ವೇಳೆ ಮಾತನಾಡಿದ ಜಿ.ಟಿ ದೇವೇಗೌಡ ಅವರು, ಪೆನ್‌ಡ್ರೈವ್ ಹಂಚಿಕೆ ಮಾಡಲು ಚೆನ್ನೈನ ಕಂಪನಿಯೊಂದರಲ್ಲಿ 3 ಕೋಟಿ ರೂ.ಗೆ ಪೆನ್‌ಡ್ರೈವ್ ಖರೀದಿಸಿದ್ದಾರೆ.ಆಸ್ಟ್ರೇಲಿಯಾ ಪ್ರಯೋಗಾಲಯದಲ್ಲಿ ಯಾವುದನ್ನ ಸೇರಿಸಬೇಕು ಅದನ್ನ ಸೇರಿಸಿ ಸಿನಿಮಾ ಮಾಡಿದಂತೆ ಮಾಡಿದ್ದಾರೆ. ಅಲ್ಲಿಂದ ಬಿಡುಗಡೆ ಮಾಡಿದ್ದಾರೆ.ಇದರಲ್ಲಿ ಅಂತಾರಾಷ್ಟ್ರೀಯ ಜಾಲ ಸೇರಿಕೊಂಡಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಎಸ್‌ಐಟಿ ತನಿಖೆ ರದ್ದಾಗಬೇಕು.ಈ ಪ್ರಕರಣವನ್ನ ಸಿಬಿಐಗೆ ವಹಿಸಬೇಕು. ಈಗಿರುವ ಎಸ್‌ಐಟಿಯಿಂದ ಏನೂ ಕಂಡುಹಿಡಿಯೋದಕ್ಕೆ ಆಗೋದಿಲ್ಲ. ಪೆನ್ ಡ್ರೈವ್ ಯಾರು ರಿಲೀಸ್ ಮಾಡಿದ್ರು ಅನ್ನೋ ಬಗ್ಗೆ ತನಿಖೆ ನಡೆಯುತ್ತಿಲ್ಲ. ಒಂದು ಪಕ್ಷದ ಮೇಲೆ ಗದಾಪ್ರಹಾರ ಮಾಡುವ ಕೆಲಸ ಆಗುತ್ತಿದೆ ಎಂದು ಕಿಡಿ ಕಾರಿದ್ದಾರೆ.ಜೆಡಿಎಸ್ ಮುಗಿಸಲು ಸಿಎಂ, ಡಿಸಿಎಂ ಮುಂದಾಗಿದ್ದಾರೆ.ಈ ಪೆನ್‌ಡ್ರೈವ್ ಕೇಸ್ ಹಿಂದೆ ಅಂತಾರಾಷ್ಟ್ರೀಯ ಜಾಲವೇ ಇದೆ.ಅವರನ್ನ ತನಿಖೆ ಮಾಡುವುದಕ್ಕೆ ಕರ್ನಾಟಕ ಪೊಲೀಸರಿಂದ ಸಾಧ್ಯವಿಲ್ಲ. ಸಿಬಿಐ ತನಿಖೆ ಬಿಟ್ರೆ ಬೇರೆ ಯಾವುದೇ ತನಿಖೆಯಿಂದ ನ್ಯಾಯ ಸಿಗಲ್ಲ ಎಂದು ಆಕ್ರೋಶ ಹೊರಹಾಕಿದ್ದಾರೆ.

# ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ- ಡಿಕೆಶಿಗೆ ದೇವರಾಜೇಗೌಡ ಓಪನ್ ಚಾಲೆಂಜ್



**ಬೆಂಗಳೂರು:** ಡಿಕೆ ಶಿವಕುಮಾರ್ ಅವರು ನನ್ನ ಸುಳ್ಳುಗಾರ ಅಂತ ಆರೋಪ ಮಾಡಿದ್ರು. ಹೀಗಾಗಿ ಅವರಿಗೆ ನಾನು ಮುಕ್ತ ಆಹ್ವಾನ ಕೊಡುತ್ತಿದ್ದೇನೆ. ವಿಧಾನಸೌಧದ ಮುಂದೆ ಆಡಿಯೋ ರಿಲೀಸ್ ಮಾಡ್ತೀನಿ.ಯಾರ್ಯಾರು ಬಂದಿದ್ರು ಅಂತ ಮಾಹಿತಿ ಬಹಿರಂಗ ಮಾಡ್ತೀನಿ.ಅಲ್ಲೇ ಬಹಿರಂಗ ಚರ್ಚೆ ಮಾಡೋಣ ಎಂದು ಸವಾಲೆಸೆದರು.

ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈಗಾಗಲೇ ರಾಜ್ಯಾದ್ಯಂತ ಅಶ್ಲೀಲ ವೀಡಿಯೋ ಸಂಬಂಧಿಸಿದ ಚರ್ಚೆ ಆಗುತ್ತಿದೆ.ಸರ್ಕಾರದ ಪ್ರತಿನಿಧಿಗಳು ಎಲ್ಲಾ ಕಡೆ ಪತ್ರಿಕಾಗೋಷ್ಠಿ ಮಾಡುತ್ತಿದ್ದಾರೆ.ಸರ್ಕಾರದ ನಾಯಕರ ಹೆಸರು ಬಂದ ಕೂಡಲೇ ಈ ರೀತಿಯಲ್ಲಿ ಮಾಡುತ್ತಿದ್ದಾರೆ.ನನ್ನ ಮೇಲೆ ದೂರು ಕೊಡುವುದನ್ನು ನಾನು ಸ್ವಾಗತ ಮಾಡುತ್ತೇನೆ ಎಂದು ಹೇಳಿದರು.

ಹನಿಟ್ರ್ಯಾಪ್ ಯತ್ನ: ಕಾರ್ತಿಕ್ ಹೆಂಡತಿಯ ಮೇಲೆ ಹಲ್ಲೆ ಆದಾಗ ನಾನು ಮಹಿಳಾ ಆಯೋಗಕ್ಕೆ ಪತ್ರ ಬರೆದಿದ್ದೆ.ಅದಕ್ಕೆ ನ್ಯಾಯ ಸಿಗಲಿಲ್ಲ. ಎಸ್ ಐಟಿ ರಚನೆ ಆದ ಮೇಲೆ ಪೆನ್ ಡ್ರೈವ್‌ಗಳ ಸುರಿಮಳೆ ಆಯ್ತು.ಇದೆಲ್ಲಾ ಆದ ಮೇಲೆ ನನ್ನ ಮೇಲೆ ಹನಿಟ್ರ್ಯಾಪ್ ಮಾಡೋ ಯತ್ನ ಮಾಡಿದರು.ಕಾರ್ತಿಕ್ ಹೆಂಡತಿ ಮೇಲೆ ಹಲ್ಲೆ ಆದಾಗ ಮೂರು ತಿಂಗಳ ಹಿಂದೆ ಪತ್ರ ಬರೆದಿದ್ದೆ.ಆದರೆ ನ್ಯಾಯ ಸಿಗಲಿಲ್ಲ ಎಂದು ತಿಳಿಸಿದರು.

ನನ್ನ ಎರಡು ಬಾರಿ ವಿಚಾರಣೆ: ಯಾವುದೇ ವ್ಯಕ್ತಿ ವಿರುದ್ಧ ನಾನು ಹೋರಾಟ ಮಾಡುತ್ತಿಲ್ಲ. ಪಕ್ಷದ ಪ್ರತಿನಿಧಿ ಆಗಿ ಕೆಲಸ ಮಾಡುತ್ತಿಲ್ಲ. ಸಂದರ್ಭ ಬಂದಾಗ ಪಕ್ಷದ ಹೆಸರು ಕೂಡ ಹೇಳಬೇಕಾಗುತ್ತದೆ ಹೇಳುತ್ತೇನೆ. ಚುನಾವಣೆ ದಿನ ಎಫ್‌ಐಆರ್ ಆಗಿದೆ. ಎಫ್‌ಐಆರ್ ಆದ ನಂತರ ಎಸ್‌ಐಟಿ ಮಾಡಿದರು.ಎಸ್ ಐಟಿ ಆದ ಬಳಿಕ ಲೈಂಗಿಕ ದೌರ್ಜನ್ಯ ಪ್ರಕರಣ ಆಯ್ತು.ಪೆನ್‌ಡ್ರೈವ್ ಹಂಚಿದವರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಎಸ್‌ಐಟಿ ಗೆ ಬಂದಿಲ್ಲ. ಹೀಗಿರುವಾಗ ನನ್ನ ಕರೆಯುವ ಪ್ರಮೇಯವೇ ಇರಲಿಲ್ಲ. ನನ್ನ ಎರಡು ಬಾರಿ ವಿಚಾರಣೆ ಮಾಡಿದರು ಎಂದು ದೇವರಾಜೇಗೌಡ ಹೇಳಿದರು.

ಈ ಹಿಂದೆ ಹೇಳಿಕೆ ಕೊಟ್ಟಿದ್ದ ಕಾರ್ತಿಕ್ ಈಗ ಉಲ್ಟಾ ಹೊಡೆಯುತ್ತಿದ್ದಾನೆ. ನನಗೆ ಪೆನ್ ಡ್ರೈವ್ ಕೊಟ್ಟೇ ಇಲ್ಲ ಅಂದಿದ್ದಾನೆ. ಕಾರ್ತಿಕ್ ಎಸ್ ಐಟಿ ಮುಂದೆ ಬಂದರೂ ವಿಚಾರಣೆ ಮಾಡುವುದಿಲ್ಲ. ಕಾರ್ತಿಕ್ ಹೇಳಿಕೆ ಪಡೆದು ಕಳುಹಿಸಿದ್ದಾರೆ.ಆರೋಪಿಯನ್ನು ಹೇಗೆ ಬಿಟ್ಟು ಕಳುಹಿಸಿದ್ದಾರೆ ಎಂದು ಪ್ರಶ್ನಿಸಿದರು.

ರೇವಣ್ಣ ನಿರೀಕ್ಷಣಾ ಜಾಮೀನು ವಜಾ ಆದ ಕೆಲವೇ ಕ್ಷಣದಲ್ಲಿ ಬಂಧನ ಮಾಡ್ತೀರಿ.ಯಾಕೆ ಕಾರ್ತಿಕ್ ನ ಬಂಧನ ಮಾಡದೇ ಕಳುಹಿಸಿದ್ರಿ. ಇವತ್ತು ಕಾರ್ತಿಕ್ ನಿರೀಕ್ಷಣಾ ಜಾಮೀನು ವಜಾ ಆಗಿದೆ.ಅವನಿಗೆ ಖರ್ಚಿಗೆ ಕಾಸು ಇಲ್ಲ ಬಂದಿದ್ದ ಎಂದು ನನ್ನ ಮೇಲೆ ಶಿವರಾಮೇಗೌಡ ಆರೋಪ ಮಾಡಿದ್ರು.ನಾನು ಎರಡು ಮೊಬೈಲ್ ಕೊಡ್ತೀನಿ. ಅವರೇ ಫೋನ್ ಮಾಡಿದ್ದಾ?? ನಾನಾ ಮಾಡಿದ್ದಾ ಚೆಕ್ ಮಾಡಿಕೊಳ್ಳಬಹುದು.ಕೇಂದ್ರ ಸರ್ಕಾರವನ್ನು ಹೇಗೆ ಕಟ್ಟಿ ಹಾಕಬೇಕು ಅಂತ ಪ್ಲಾನ್ ಮಾಡಿದ್ರು ಎಂದು ಆರೋಪಿಸಿದರು.

ನಾವು ಎಸ್‌ಐಟಿ ವಿರುದ್ಧ ಕ್ರಿಮಿನಲ್ ಕೇಸ್ ಹಾಕ್ತಾ ಇದ್ದೀನಿ. ಹೈಕೋರ್ಟ್ ಅಲ್ಲಿ ಅರ್ಜಿ ಹಾಕ್ತಾ ಇದ್ದೀನಿ. ನಾನು ಕೊಟ್ಟ ಹೇಳಿಕೆ ಡಿಲೀಟ್ ಮಾಡಿ ಅಂತ ಒತ್ತಾಯ ಮಾಡಿದ್ದಾರೆ.ಹೀಗಾಗಿ ಕೋರ್ಟ್ ಮೊರೆ ಹೋಗುವುದಾಗಿ ದೇವರಾಜೇಗೌಡ ತಿಳಿಸಿದರು.

ನಾಲ್ಕು ಜನ ಸಚಿವರು ರೂವಾರಿಗಳು: ಈಗಾಗಲೇ ಎರಡು ಪ್ರಕರಣ ದಾಖಲಾಗಿದೆ. ಸಕಲೇಶಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.ನಾಲ್ಕು ಜನ ಸಚಿವರು ಈ ಪಾತ್ರ ರೂವಾರಿಗಳು.ಕಾರ್ತಿಕ್‌ನ ಎಲ್ಲಿ ಮುಚ್ಚಿಟ್ಟಿದ್ದಾರೆ ಗೊತ್ತು.ಕಾರ್ತಿಕ್ ಗೂ ನನಗೂ ಸಂಬಂಧ ಇಲ್ಲ ಎಂದು ಶ್ರೇಯಸ್ ಪಟೇಲ್ ಹೇಳಿದ್ದಾರೆ ಎಂದು ಹೇಳಿ ಕೆಲವು ಫೋಟೋಗಳನ್ನು ಬಿಡುಗಡೆ ಮಾಡಿದರು.ಈ ತಂಡದಲ್ಲಿ ಪುಟ್ಟಿ, ಕಾರ್ತಿಕ್, ಶ್ರೇಯಸ್ ಇವರೇ ಮೂರು ಜನ ಪ್ರಮುಖರು ಎಂದು ಆರೋಪ ಮಾಡಿದರು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com